# ಅಖಿಲ ಭಾರತ ಪತ್ರಿಕೆ

## ಮಾರ್ಚ್ 2021



# ಜನ್ಮದಿನಗಳು

ಬೆಲೆ : 15/-



ಪ್ರಾಣ–ಪ್ರಾಣಗಳ ಪವನ ಸಾಂದ್ರತೆಯ ಅಪರೂಪದಂತೆ ಅಲ್ಲಿ
ಸ್ಥಿರ–ಉಷ್ಣದಲ್ಲಿ ಪರಮಾಗ್ನಿ ತೇಜ–ಸ್ತರಗೋಳದುಸಿರಿನಲ್ಲಿ.

**– ಪುಟ್ಟು ಕುಲಕರ್ಣಿ**
**(ಶ್ರೀ ಅರವಿಂದರ 'ಸಾವಿತ್ರಿ'; ದಳ 7 ರೇಣು 2 ಪುಟ 486)**

[ತೇಜ–ಸ್ತರಗೋಳ; (ಸ್ಟ್ರೆಟಾಸ್ಫೇರ್)– ಇಲ್ಲಿ ಓಝೋನ್ ಇರುತ್ತದೆ. ಉಷ್ಣತೆಯೂ ಸ್ಥಿರವಾಗಿರುತ್ತದೆ. ಇಲ್ಲಿಯೇ ಜೀವವು ಆಕಾರ ತಳೆಯಲು ಬರುತ್ತದೆ ಎನ್ನುವದನ್ನು ಯೋಗ, ವೇದಾಂತ ಹಾಗೂ ಆಧುನಿಕ ಕಾಸ್ಮಿಕ್ ಬಯಾಲಜಿಯ ಮೂಲಕ ಅಧ್ಯಯನ ಮಾಡಲಾಗುತ್ತಿದೆ.

**ಅಖಿಲ ಭಾರತ ಪತ್ರಿಕೆ**

**ಮಾರ್ಚ್ 2021**

ಸಂಪುಟ: 31 ಸಂಚಿಕೆ: 03


# ಪರಿವಿಡಿ


**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


## ಜನ್ಮದಿನಗಳು

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಜನ್ಮದಿನಗಳ ಮಹತ್ವ** 9
ಅನು: ಪ್ರೊ. ವೀರಭದ್ರಪ್ಪ ಕೆ.

**ಪ್ರತಿ ಘಟನೆಗೂ ನಿಗದಿತ ನಾದ–ಸ್ವರೂಪ** 11
ಅನು: ಪುಟ್ಟು ಕುಲಕರ್ಣಿ

**ನವ ಜನ್ಮ** 24
ಅನು: ಡಾ॥ ಬಲಭೀಮ ಭೀಡ

**ಸ್ಮರಣೆಗಳು ಮತ್ತು ಉಪಾಖ್ಯಾನಗಳು** 27
ಅನು: ಡಾ॥ ಮಹಾದೇವ ಸಕ್ರಿ

**ಎರಡು ಕಮಲಗಳು** 28
ಅನು: ಡಾ॥ ಮಹಾದೇವ ಸಕ್ರಿ

**ಚೈತನ್ಯಮಯೀ ಶ್ರೀಮಾತಾ** 32
– ಕೋ. ಚೆನ್ನಬಸಪ್ಪ

**ದಿವ್ಯ–ಜೀವನ (ಅನುಸ್ಪಂದನ–4)** 36
– ಜಾನ್ವಿ

**ಭವಾನೀ ಭಾರತೀ (ಪದ್ಯಾನುವಾದ–3)** 45
ಅನು: ಪುಟ್ಟು ಕುಲಕರ್ಣಿ

**ಮಹರ್ಷಿ ಶ್ರೀ ಅರವಿಂದ ಘೋಷರ ಸಂಕ್ಷಿಪ್ತ ಚರಿತವು – 3** 51
– ಡಾ॥ ಶಂ.ಬಾ. ಜೋಶಿ

## ಸಂಪಾದಕರ ಟಿಪ್ಪಣಿ

ಶ್ರೀಮಾತೆಯು ತನ್ನ ಪ್ರಜ್ಞಾಪೂರ್ವಕವಾದ ಹಾಗೂ ಕೃಪಾಪೂರಿತ ಸ್ಪರ್ಶದಿಂದ, ಅತಿ ಸಾಮಾನ್ಯ ಎನ್ನಿಸಬಹುದಾದ ಘಟನೆಗಳನ್ನೂ ಔನ್ನತ್ಯಕ್ಕೇರಿಸಿ ರೂಪಾಂತರಗೊಳಿಸಿದ್ದಾಳೆ. ಅಂತಹ ಘಟನೆಗಳಲ್ಲಿ ಜನ್ಮದಿನವೂ ಒಂದು. ಶ್ರೀಮಾತೆ ಹಾಗೂ ಶ್ರೀ ಅರವಿಂದರು, ಈ ವಿಷಯಕ್ಕೆ ವಿಶೇಷವಾದ ಮಹತ್ವವನ್ನೇ ರೂಪಿಸಿ, ಯಾವಾಗ ನಮ್ಮ ಈ ದೇಹಧಾರಣೆಗೊಂಡು ಪ್ರಾಣ ಸ್ವರೂಪದಲ್ಲಿ ಅದೂ ಮಹತ್ವದ ಜನ್ಮದ ಮೂಲಕವೇ ನಮ್ಮ ಆತ್ಮವು ಬದುಕಿಗೆ ಆಗಮಿಸುತ್ತಿದೆಯೋ, ಈ ಘಳಿಗೆಗೆ ಇರುವ ವಿಶೇಷತೆಯ ಕುರಿತು ಅವರು ವಿವರಿಸುತ್ತಾರೆ. ಈ ಮೂಲಕ ದೇಹಧಾರಣೆಗೊಂಡು ಜನಿಸಿ ಬರುವ ಸಂದರ್ಭವು ಆಯಾ ವ್ಯಕ್ತಿಯ ಆತ್ಮೀಯರೆಲ್ಲರಿಗೂ ಸಹಿತ ಅತ್ಯಂತ ಸಂತಸದಾಯಕ ಸಂಗತಿಯೇ ಆಗಿರುತ್ತದೆ. ಆದರೆ ಅದೇ ಸಮಯಕ್ಕೆ ಜನ್ಮಿಸುವ ವ್ಯಕ್ತಿಯು, ದಿವ್ಯಸ್ವರೂಪದ ತಂದೆ–ತಾಯಿಯಾಗಿರುವ ವಿಶ್ವಶಕ್ತಿಯು ಈ ಸ್ವರೂಪದ ಮೂಲಕ ಈ ರೀತಿಯ ರೂಪಾಂತರಕ್ಕೆ ಸುಸಂದರ್ಭವನ್ನು ಒದಗಿಸುತ್ತಿರುತ್ತಾರೆ. ಅದಕ್ಕಾಗಿ ಅವರ ಸಮಕ್ಷಮದಲ್ಲಿಯೇ, ಈ ರೀತಿಯ ಜನ್ಮಕ್ಕೆ ಮೂಲಕಾರಣವಾಗಿರುವ ಮತ್ತು ಇಂತಹ ಅವಕಾಶಕ್ಕೆ ಕಾರಣವಾಗಿರುವ ಮೂಲ ಉದ್ದೇಶದ ಕುರಿತು, ನಮ್ಮನ್ನು ನಾವೇ ಜಾಗೃತಿಗೊಳಿಸಿಕೊಳ್ಳುವ ಸಲುವಾಗಿಯೂ ಅವಕಾಶವನ್ನು ಕೊಟ್ಟಿರುತ್ತಾರೆ.

ಇಂತಹ ಅತ್ಯದ್ಭುತವಾದ ಸುಸಂದರ್ಭವನ್ನು ಸ್ಮರಿಸಿಕೊಂಡು, ನಮ್ಮ ಜೀವನವನ್ನು ಔನ್ನತ್ಯಕ್ಕೇರಿಸಿಕೊಳ್ಳಲು, ಅದೂ ತ್ಯಾಗದ ಮೂಲಕವೇ ನೈಜ ಅರ್ಥವನ್ನು ಮನನ ಮಾಡಿಕೊಳ್ಳುವ ಸಲುವಾಗಿಯೇ ಮತ್ತು ಉತ್ತಮ ಭವಿತವ್ಯದ ನೆಲೆಗೆ ಶೀಘ್ರವಾಗಿ ಸಾಗುವ ನಮ್ಮ ಮೂಲ ಅಭೀಪ್ಸೆಯನ್ನು ಪುನಃ ಪ್ರಜ್ವಲನಗೊಳ್ಳಲು ಪ್ರತಿ ವರ್ಷಕ್ಕೊಮ್ಮೆ ಆಗಮಿಸುವ ಈ “ಜನ್ಮದಿನದ” ಕುರಿತಾಗಿಯೇ ಈ ಸಂಚಿಕೆಯು ರೂಪಿತಗೊಂಡಿದೆ. [ಎಐಎಮ್]

*

# ಸಂಪಾದಕೀಯ

## ಜನ್ಮದಿನದ ರಹಸ್ಯ

'ಚಿಂತನ ಶಕ್ತಿಯ' ಅನುಭವವು, ವಿಶ್ವರಹಸ್ಯವನ್ನು ಅರಿತುಕೊಳ್ಳಲು ಇರುವ ಏಕೈಕ ಸೂತ್ರವೆನ್ನುವದನ್ನು ಮಾನವನು ತಿಳಿದುಕೊಂಡ ದಿನದಿಂದಲೇ, ಈ ಸೃಷ್ಟಿಯ ರಹಸ್ಯದ ಕುರಿತು ತನ್ನ ಶೋಧನೆಯನ್ನು ಪ್ರಾರಂಭಿಸಿದ್ದಾನೆ. ಜಿಜ್ಞಾಸೆಗೂ ತೊಡಗಿದ್ದಾನೆ. ಅದರಲ್ಲೂ ಈ ಅಗಾಧವಾದ ಬ್ರಹ್ಮಾಂಡದ ಸಂರಚನೆಯ ಕುರಿತು ತನ್ನ ಫಲಪ್ರದ ಹೆಜ್ಜೆಗಳಲ್ಲಿಯೇ ಕ್ರಿಯಾಪ್ರವೃತ್ತನೂ ಆಗಿದ್ದಾನೆ. ಭೂಮಾತಿ ಭೂಮವಾಗಿರುವ ಬ್ರಹ್ಮಾಂಡದ ಬಗೆಗೆ ಕೇವಲ ಕಲ್ಪನೆಗಳನ್ನು ಮಾತ್ರವೇ ರೂಪಿಸಿಕೊಂಡಿಲ್ಲ. ಇದಕ್ಕಾಗಿ ಲಭ್ಯವಾಗುತ್ತಿರುವ ಹಲವು ದತ್ತಾಂಶಗಳನ್ನು ಆಧರಿಸಿಕೊಂಡೇ ಊಹೆಗಳನ್ನೂ ಅಭಿವ್ಯಕ್ತಿಗೊಳಿಸಿಕೊಂಡಿದ್ದಾನೆ. ಇದರ ಜೊತೆಜೊತೆಯಲ್ಲಿಯೇ ಇದ್ದಕಿದ್ದಂತೆಯೇ ಲಯ ಸ್ವರೂಪದಲ್ಲಿ ಕಣ್ಮರೆಯಾಗುವ (ಮೃತ್ಯುವಶವರ್ತಿಯಾಗುವ)ದನ್ನೂ ಅರಗಿಸಿಕೊಳ್ಳಲು ತಕ್ಕ ಮಟ್ಟಿಗೆ ಯಶಸ್ವಿಯೂ ಆಗುತ್ತಿದ್ದಾನೆ. ಆದರೆ, ನಮಗೀಗ ಲಭ್ಯವಾಗಿರುವ ಜ್ಞಾನಮಾರ್ಗದ ಎಲ್ಲ ಆಯಾಮಗಳಲ್ಲಿಯೂ ನಿಗೂಢ ಪ್ರಶ್ನೆಯಾಗಿ ಉಳಿದಿರುವದು "ಏಕೆ ಈ ಜೀವ(ಪ್ರಾಣ) ಭೂಮಿಯ ಮೇಲೆ ಬದುಕು ರೂಪಿಸಿಕೊಳ್ಳಲು ರೂಪ ತಾಳುತ್ತದೆ?".

ಪುನರಾವರ್ತನೆಯ ಕ್ರಿಯೆಯ ಮೂಲಕ ಆತ್ಮವು, ಮತ್ತೆ ಮತ್ತೆ ದೇಹಧಾರಣೆಯ ಮೂಲಕವಾಗಿ, ನಿಗದಿತ ಅವಧಿಯಲ್ಲಿ, ನಿಗದಿತ ಅವಧಿಯವರೆಗೆ ಆಯಾ ರೂಪದಲ್ಲಿ ಜೀವಿಸುತ್ತದೆ ಎನ್ನುವದನ್ನು ಅರಿತುಕೊಂಡ ಚಿಂತನಾ ವಲಯಗಳು, ಅದು ಅನುಷ್ಠಾನಗೊಳ್ಳುತ್ತಿರುವ ಎಲ್ಲ ಆಯಾಮಗಳನ್ನೂ ವಿಶ್ಲೇಷಿಸತೊಡಗಿದವು. ಆದರೆ ಈ **ರೀತಿಯಲ್ಲಿ 'ಆ ಆತ್ಮವು' ಇಲ್ಲಿಗೇ ಏಕೆ ಬರುತ್ತಿದೆ?** **ಬರುವ ಉದ್ದೇಶವಾದರೂ** ಏನು? **ಯಾವ ರೀತಿಯಲ್ಲಿ ಅದು ಈ ಮೃಣ್ಮಯದ(ಭೂ ಬುದಕಿನ) ವಲಯಕ್ಕೆ ಆಗಮಿಸುತ್ತದೆ? ಕೇವಲ 'ವಿಭೂತಿ ಪುರುಷರು'ಮಾತ್ರವೇ ಅವತರಣಗೊಂಡು ಬರುತ್ತಾರೆಯೇ? ಇಲ್ಲವೇ ಪ್ರತಿಯೊಂದು 'ಜೀವವೂ" ಇದೇ ಪ್ರಕ್ರಿಯೆಯಲ್ಲಿ ಅವತರಣಗೊಂಡಿದೆಯೇ?** ಎಂದೆಲ್ಲಾ ಜಿಜ್ಞಾಸೆಯ ಮಧ್ಯದಲ್ಲಿಯೇ ನಿರ್ಧರಿತಗೊಂಡ ಒಂದು ವಿಷಯವೆಂದರೆ, 'ಅದು ಬರುವ' ಈ ಅವಧಿಯೆ 'ಜನ್ಮ'ವಾಗಿದೆ ಎನ್ನುವದು ಮಾತ್ರ ಸಿದ್ಧಗೊಂಡಿದೆ. ಇದನ್ನೇ ಶ್ರೀ ಅರವಿಂದರು ತಮ್ಮ ಅಭಿವ್ಯಕ್ತಿಯಲ್ಲಿ ತಿಳಿಸಿದ್ದಾರೆ.

ಆ ಊರ್ಧ್ವಾತಿಊರ್ಧ್ವದಲ್ಲಿಂದಲೇ ಅವತರಣಗೊಳ್ಳುತ್ತದೆ ಎಂದಾದಲ್ಲಿ, ಅದು ಊಹನಾತೀತವಾಗಿರುವ ಅವಕಾಶದಲ್ಲಿರುವ ಬ್ರಹ್ಮ–ಚೇತನವು, ಆಕಾರವನ್ನು ಹೊಂದಬೇಕಾದರೆ, ಪಾತ್ರಕ್ಕೆ ತಕ್ಕ ಗಾತ್ರ ಎನ್ನುವ ಸೂತ್ರವನ್ನು ಅನುಸರಿಸುತ್ತದೆ. ಸೂಕ್ಷ್ಮಾತಿಸೂಕ್ಷ್ಮವಾಗಿರುವ ದೇವಕಣವಾಗಿಯೇ, ಆಕಾರವನ್ನು ಪಡೆದುಕೊಳ್ಳಲು ಅವಶ್ಯವಿರುವ ಈ ಪಂಚಭೂತಗಳು ಸಮನ್ವಯಗೊಳ್ಳುವ ಸೂಕ್ತ ಎಡೆಗೆ ಸಂಯೋಜನೆಗೊಳ್ಳುತ್ತದೆ. ಈ ರೀತಿಯಲ್ಲಿ ಸಂಯೋಜನೆಗೊಳ್ಳುವ **'ಸ್ವರ್ಣಮಯ ಕಾಂತಿಯ ವಲಯ'(ಗೋಲ್ಡೀಝೋನ್)ವು,** ನಮ್ಮ ಸೌರವ್ಯೂಹದ ವ್ಯಾಪ್ತಿಯಲ್ಲಿ ಕೇವಲ 'ಭೂಮಿಗೆ' ಮಾತ್ರ ಇದೆ. ಆಧುನಿಕ ಖಭೌತೀಯ ವಿಜ್ಞಾನದ ಸಂಶೋಧನೆಗಳೂ ಸಹಿತ ಈ ವಿಷಯವನ್ನು **'ವೈಶ್ವಿಕ ಜೀವಶಾಸ್ತ್ರದ(Cosmic Biology**) ವಿಭಾಗದಲ್ಲಿ ಕೂಲಂಕಷವಾಗಿ ಅಧ್ಯಯನದ ಪ್ರಕ್ರಿಯೆಯಲ್ಲಿ ರೂಪಣೆಗೊಳ್ಳುತ್ತಿವೆ. ಭೂಮಿಗೆ ಹೊಂದಿಕೊಂಡಿರುವ **'ತೇಜಸ್ತರಗೋಳ'** [**ಸ್ಟ್ರೆಟೋಸ್ಫೇರ್(Stratosphere)**] ದಲ್ಲಿ ಈ 'ಜೀವಾಂಕರ'ದ ನಿರ್ಧಾರವಾಗುತ್ತಿದೆ ಎನ್ನುವದನ್ನು ಸಂಶೋಧನೆಗಳು ಅಂಗೀಕರಿಸಿವೆ.

ಈ ವಿಷಯವನ್ನೇ ವೇದಾಂತದ ಅಧ್ಯಯನಗಳೂ ಹೇಳುತ್ತಿವೆ. ಈ ಹಂತದಲ್ಲಿ – ಅಂದರೆ – ರೂಪಾಂತರಗೊಳ್ಳುವ ಹಂತದಲ್ಲಿ – ಸೂರ್ಯ, ಸೂರ್ಯವ್ಯೂಹದ ಸದಸ್ಯರಾಗಿರುವ ಇತರ ಗ್ರಹಗಳು ಮತ್ತು ಭೂಮಿಯು ಆಯಾ ಅವಧಿಯಲ್ಲಿ ಇರುವ ನಕ್ಷತ್ರಗಳ ಸ್ಥಾನಮಾನದ ಹಿನ್ನೆಲೆಯಲ್ಲಿ, ಅವಕಾಶದಲ್ಲಿ ಈ ಎಲ್ಲ ಗ್ರಹ–ನಕ್ಷತ್ರಗಳ ಸಂಗಡ, ಸಂಪೂರ್ಣ ನಿಯಂತೃ ಆಗಿರುವ ಸೂರ್ಯನ 'ಸೂಕ್ಷ್ಮಕಿರಣದ ಪ್ರಭಾವ'ವೂ ಸಂಲಗ್ನಗೊಂಡು 'ಈ ಜೀವಿಯ' ಸ್ವರೂಪ ನಿರ್ಧಾರವಾಗುತ್ತದೆ. ಈ ವಿಷಯದ ಬಗೆಗೆ ವಿವರವಾಗಿಯೇ ಶ್ರೀ ಅರವಿಂದರು **'ಸಾವಿತ್ರಿ'**(7–11–486) ರಲ್ಲಿ ಪಥ ತೋರಿದ್ದಾರೆ. [ನೋಡಿ: ರಕ್ಷಾಪುಟ 2].

ಈ ತೇಜಸ್ತರಗೋಳದಲ್ಲಿಯೇ **"**ಓಝೋನ್**"** ಇರುತ್ತದೆ. ಇಲ್ಲಿ ಉಷ್ಣತೆಯು ಸರ್ವಕಾಲಕ್ಕೂ ಸ್ಥಿರಾಂಕದಲ್ಲಿಯೇ ಇರುತ್ತದೆ. ಇದೊಂದು **ವೈಶ್ವಿಕ–ಊಷ್ಮನಿಯಂತ್ರಕ ಯಂತ್ರ** (Universal Incubator) ಇದ್ದ ಹಾಗೆ ಇದೆ. ಭೂಮಿಯ ಮೇಲೆ ಘಟಿಸುವ ಯಾವುದೇ ಉತ್ಪಾತವಾಗಲೀ, ಅವಕಾಶದಲ್ಲಿ ಘಟಿಸುವ ಅನೂಹ್ಯ ಘಟನಾವಳಿಗಳಾಗಲಿ ಯಾವುದೂ ಇದನ್ನು ವಿಚಲನೆಗೆ ಒಳಪಡಿಸುವದಿಲ್ಲ. ಹೀಗಾಗಿಯೇ ಇದಕ್ಕೆ **'ಸ್ವರ್ಣಮಯ–ಸುರಕ್ಷಾ ವಲಯ'**

ಎಂದು ಕರೆಯುತ್ತಾರೆ. ಹೀಗಾಗಿಯೇ ಇಲ್ಲಿ ಆತ್ಮವು ಜೀವಾಂಕುರದ ಸ್ವರೂಪದಲ್ಲಿ ಸ್ವ–ರೂಪಧಾರಣೆಗೊಳ್ಳುತ್ತದೆ. ತದನಂತರದ ಹಂತದಲ್ಲಿ ಭೂಮಿಯ ಮೇಲೆ ಸೂಕ್ತ ಆಕಾರವನ್ನು (ದೇಹವನ್ನು) ಪಡೆದುಕೊಳ್ಳುತ್ತದೆ.

ಹೀಗೆ ಆತ್ಮವು ಆಕಾರಗೊಳ್ಳಲು ನಿರ್ಧರಣೆಗೊಳ್ಳುವ ಅವಧಿಯಲ್ಲಿ, ಈ ತೇಜಸ್ತರಗೋಳದಲ್ಲಿ ಇರುವ ಸಂದರ್ಭದಲ್ಲಿ ಆಕಾಶದಲ್ಲಿ ಇರುವ ಗ್ರಹ–ನಕ್ಷತ್ರಗಳ ಸ್ಥಾನ–ಮಾನ ಮತ್ತು ಅವುಗಳಿಂದ ಆಗಮಿಸುವ ಕಿರಣಗಳು, ನಿಯತಿಯ ಅನುಸಾರವಾಗಿ ಪುನರಾವರ್ತಿತಗೊಳ್ಳುತ್ತಿರುತ್ತವೆ. ಇಂತಹ ಪುನರಾವರ್ತಿತ ಕ್ರಿಯೆಯು ಸಾಮಾನ್ಯವಾಗಿ – ಭೂ–ಬದುಕಿನ ಕಾಲಗಣನಾ ಕ್ರಮಾಂಕದಲ್ಲಿ – ಒಂದು ವರ್ಷದ ಆವರ್ತನೆಯಲ್ಲಿ ಘಟಿಸುತ್ತಿದೆ. ಈ ಆವರ್ತಿತ ಘಟನೆಯನ್ನೇ ನಾವು **‘ಜನ್ಮ ದಿನದ ಆಚರಣೆ’** ಎಂದು ಆಚರಿಸುತ್ತಿದ್ದೇವೆ. ಹೀಗಾಗಿ ಜನ್ಮ ದಿನಕ್ಕೆ ಈ ವಿಶೇಷಗಳ ಸ್ಪಂದನದ ಅನುಭಾವದ ಅನುಸ್ಪಂದನದ ಸ್ಮರಣೆಯ ಸಮಯವಾಗಿರುತ್ತದೆ. ಇದನ್ನು ಸ್ಮರಿಸಿಕೊಂಡು, ನಿಯತಿಯ ನಿಪುಣತೆಗೆ ಸಮರ್ಪಣಾ ಮನೋಭಾವದಲ್ಲಿ ಗೌರವ ಸಲ್ಲಿಸುವ ಕರ್ತವ್ಯವೇ “ಜನ್ಮ ದಿನದ ಆಚರಣೆ”ಯಾಗಿದೆ. ವೈಶ್ವಿಕ ಕಾಲಗಣನಾ ಕ್ರಮದಲ್ಲಿಯೂ ಸಹಿತ ಒಂದು ಯುಗವು ತನ್ನ ಅವಧಿಯನ್ನು ಮುಕ್ತಾಯಗೊಳಿಸಿ, ಮತ್ತೆ ನವಜನ್ಮ ತಳೆಯುವ ಅವಧಿಯೂ ಸಹಿತ ಇದೇ ರೀತಿಯಲ್ಲಿ, ನಕ್ಷತ್ರಗಳ ಸ್ಥಾನಮಾನವನ್ನೇ ಅವಲಂಬಿಸಿರುತ್ತದೆ ಎನ್ನುವದನ್ನು ‘ಸಪ್ತರ್ಷಿ ಮಂಡಳವು ಮಘಾ ನಕ್ಷತ್ರ’ವನ್ನು ಪ್ರವೇಶ ಮಾಡುವಾಗ ನವಯುಗದ ಪ್ರಾರಂಭವಾಗುತ್ತದೆ ಎನ್ನುವದು ಒಂದು ವೈಜ್ಞಾನಿಕ ಸಿದ್ಧಾಂತವೇ ಇದೆ. ಹೀಗೆ ಅವಕಾಶದಲ್ಲಿರುವ ಅನಂತತೆಯೂ ಸಹಿತ ಈ ರೀತಿಯ ನಿಯತಿನಿಗದಿತವಾಗಿರುವ ಆವರ್ತನಗಳಲ್ಲಿಯೇ ವಿಕಸನವಾಗುತ್ತಿದೆ, ಹೀಗಾಗಿ ಇದು ಕೇವಲ ಮಾನವನ ಬದುಕಿನಲ್ಲಿ ಮಾತ್ರವಲ್ಲದೇ, ಇಡೀ ವಿಶ್ವದ ಘಟನಾವಳಿಗಳಲ್ಲಿ ಪ್ರಕೃತಿ ಸಹಜ ವ್ಯವಸ್ಥೆಯೂ ಆಗಿದೆ. ಮಾನವನ ಸೀಮಿತ ಅವಧಿಯ ಬದುಕು, ಅಗಾಧವಾಗಿರುವ ಪ್ರಕೃತಿಯ ರೂಪಾಂತರದ ಚಕ್ರೀಯ ಗತಿಯನ್ನು ದೃಷ್ಟಿಸಲು ಇನ್ನೂ ಸಮರ್ಥವಾಗಿಲ್ಲ. ಹಾಗೆಂದು, ಮಾನವನು ತನ್ನ ಕಾಲಗಣನಾ ವ್ಯವಸ್ಥೆಯಲ್ಲಿ, ಪುನರಾರ್ತಿತಗೊಳ್ಳುತ್ತಿರುವ ಕೆಲವು ಘಟನಾವಳಿಗಳು, ತನ್ನ ಸುತ್ತಲೂ ಇರುವ ನಿಸರ್ಗದಲ್ಲಾಗುತ್ತಿರುವ ಈ ಚಕ್ರೀಯ ಅವಸ್ಥಾ ಹಂತದ ಪುನರಾವರ್ತನೆಗಳನ್ನು ಕಂಡುಕೊಂಡ ಮಾನವನ ಚಿಂನತವು, ಅದನ್ನೇ ತನ್ನ

ಬದುಕಿನಲ್ಲಿಯೂ ಅನ್ವಯಿಸಿಕೊಂಡು, ಸೃಷ್ಟಿಯ ರಹಸ್ಯವನ್ನು ಅರಿಯಲು ಪ್ರಯತ್ನಿಸಿತು. ಇದಕ್ಕಾಗಿಯೇ ಜನ್ಮದಿನವೆನ್ನುವದು ಅತ್ಯಂತ ಮಹತ್ವದ ದಿನವಾಗಿಯೇ ಆಚರಿಸಲ್ಪಡುತ್ತದೆ.

'ಸೂರ್ಯನ ಆತ್ಮ ಮತ್ತು ಮಾನವನ ಆತ್ಮ ಒಂದೇ' ಎಂದು ತೈತ್ತಿರೀಯೋಪನಿಷತ್ತು ಹೇಳುತ್ತಿದೆ. ಇದು ಪ್ರಾರಂಭಗೊಳ್ಳುವ ಪ್ರಪ್ರಥಮ ಘಟನೆಯನ್ನು 'ರಥಸಪ್ತಮೀ' ಎಂದು ನಿಗದಿಗೊಳಿಸಿ ಆಚರಿಸಲಾಗುತ್ತಿದೆ. ಮಾಘ ಮಾಸದ ಶುಕ್ಲ ಪಕ್ಷದ ಪಂಚಮೀ ತಿಥಿಯನ್ನು ಈ ರಥಸಪ್ತಮೀ ಎಂದು ಆಚರಿಸಲಾಗುತ್ತಿದೆ. ಇದು **"ಭೂಮಿಯ ಜನ್ಮ ದಿನವೇ"**? ಎನ್ನುವದು ಒಂದು ಜಿಜ್ಞಾಸೆ ಇದೆ. ಖಭೌತೀಯ ಆಧುನಿಕ ಸಂಶೋಧನೆಗಳೂ ಸೂತ್ರೀಕರಿಸಿರುವ ಹಾಗೆ, ಈ ದಿನದಂದು ಸೂರ್ಯನು ಸಮಭಾಜಕವೃತ್ತದಲ್ಲಿಯೇ ಭೂಮಿಗೆ ಗೋಚರನಾಗುತ್ತಾನೆ.

ಕೃತ ಯುಗದಲ್ಲಿ ನಕ್ಷತ್ರ ವರ್ಷ ಗಣನಾ ಕ್ರಮಾಂಕ, ತ್ರೇತಾ ಯುಗದಲ್ಲಿ ಸೌರವರ್ಷ ಕಾಲಗಣನಾ ಕ್ರಮಾಂಕ, ದ್ವಾಪರದಲ್ಲಿ ಚಾಂದ್ರವರ್ಷ ಕಾಲಮಾಪನದ ಪದ್ಧತಿ ಇದ್ದದ್ದು ಇತಿಹಾಸ ಸಿದ್ಧವಿದೆ. ಹಾಗಾದರೆ ಈ 'ಕಲಿಯುಗದ ಅವಧಿ'ಯಲ್ಲಿ ನಾವು ಯಾವ ಯಾವ ಕಾಲಗಣನಾ ಕ್ರಮವನ್ನು ಅನುಸರಿಸುತ್ತಿದ್ದೇವೆ ಎಂದು ಗಮನಿಸಿದರೆ, ಅದು ದ್ವಾಪರ ಯುಗದ 'ಚಾಂದ್ರ ಗಣನಾ ಪದ್ಧತಿಯ' ಛಾಯೆಯಾಗಿಯೇ ಇದೆ. ಈಗಲೂ ಹಬ್ಬ-ಹರಿದಿನಗಳು, ಜನ್ಮದಿನಗಳು ಇತ್ಯಾದಿ ಎಲ್ಲ ಸಂಗತಿಗಳನ್ನೂ ನಮ್ಮ "ಪಂಚಾಂಗಗಳು" ಹೇಳುತ್ತಿರುವ ಸಮಯದಲ್ಲಿಯೇ ಆಚರಿಸುತ್ತಿದ್ದೇವೆ. ಹಾಗಾದರೆ ಯುಗ ಪರಿವರ್ತನೆ ಆದಾಗಲೆಲ್ಲವೂ ಕಾಲಗಣನಾ ಕ್ರಮಾಂಕವೂ ಪರಿವರ್ತನೆ ಆಗಲೇಬೇಕಲ್ಲವೇ? ಇಲ್ಲವೇ ನಾವಿನ್ನೂ ದ್ವಾಪರ ಯುಗದ ಛಾಯೆಯಲ್ಲಿಯೇ ಇದ್ದೇವೆಯೇ? ಕಲಿಯುಗ ಪ್ರವೇಶ ಎನ್ನುವದು ಕೇವಲ ಪೌರಾಣಿಕ ಘಟನೆಯಾಗಿದೆಯೇ? ಈ ಮೊದಲಿನ ಮೂರೂ ಯುಗಗಳ 'ಮೌಲ್ಯಗಳು' – ಯುಗಪುರುಷರಾಗಿರುವ ರಾಮ, ಕೃಷ್ಣ ಮತ್ತು ಬುದ್ಧನ ಅವಧಿಯಲ್ಲಿ ರೂಪುಗೊಂಡಿದ್ದ ಸಂಗತಿಗಳು ಇದೀಗ ತಮ್ಮ ಪಯಣವನ್ನು ಸಂಪನ್ನಗೊಳಿಸಿಕೊಂಡಿವೆಯೇ? ಹೊಸ ಮೌಲ್ಯಕ್ಕೆ ಪಥ ನಿರ್ಮಾಣವಾಗುತ್ತಿದೆಯೇ? ಅಥವಾ ಈ ಯುಗಕ್ಕೆ 'ಯುಗಮೌಲ್ಯವೇ" ರೂಪಿತಗೊಂಡಿಲ್ಲವೇ?

ಇಂತಹ ಸಂಕೀರ್ಣಮಯ ಸಂದರ್ಭದಲ್ಲಿ ನೂತನ ಮಾರ್ಗವೊಂದನ್ನು ರೂಪಿಸಿ, ಅದರೆಡೆಗೆ ಸಂಕೇತಿಸುತ್ತಿರುವ ಶ್ರೀ ಅರವಿಂದರ ಈ 'ಜನ್ಮದಿನದ ರಹಸ್ಯ'ದ ಬಗೆಗೆ ಗಂಭೀರವಾದ ಅಧ್ಯಯನವೇ ಬೇಕಾಗಿದೆ. ಹೊಸ ಮಾರ್ಗರಚನೆಯ ಅವಧಿಯಲ್ಲಿ ಮಾರ್ಗದರ್ಶಕರು ಯಾರೂ ಇರುವದಿಲ್ಲ. ಸವಾಲನ್ನು ಸ್ವೀಕರಿಸಿ ಮುಂದೆ ಮುಂದೆ ಸಾಗುವ ಅಭೀಪ್ಸೆಯೊಂದು ಇದ್ದಲ್ಲಿ, ಎದುರಾಗಬಹುದಾದ ಅಡೆ–ತಡೆಗಳೇ ಮಾರ್ಗದರ್ಶಕವಾಗಿ ಪರಿವರ್ತಿತಗೊಳ್ಳುತ್ತವೆ.

"ಆರ್" ಎನ್ನುವವರಿಗೆ... ಅವಳ ಜನ್ಮದಿನದ ನಿಮಿತ್ತವಾಗಿ ಶ್ರೀ ಅರವಿಂದರು ಬರೆದ ಒಂದು ಕವನದಲ್ಲಿ ಈ ಎಲ್ಲ ವಿವರಗಳನ್ನು ಕಾಣಬಹುದು. ಇಡೀ ಭೂಮಂಡಲದ ಸರ್ವಜೀವಿಗಳ ಜನ್ಮವೂ ಸಹಿತ ಒಂದು ನಿರ್ದಿಷ್ಟ ಉದ್ದೇಶ ಸಂಪೂರ್ಣತೆಗಾಗಿಯೇ ಘಟಿಸುತ್ತಿದೆ ಎನ್ನುವದನ್ನು, ಪ್ರಾಣಿಗಳ ಜನ್ಮದಿನವನ್ನು ಸಹಿತ ಆಚರಿಸುವ ಮೂಲಕ ತೋರಿಸಿಕೊಟ್ಟಿದ್ದಾರೆ. ಈ ಮೂಲಕ ವಿಭೂತಿ ಪುರುಷರು ನಿಗದಿತ ಮುಹೂರ್ತದಲ್ಲಿ ಮಾತ್ರವೇ ಅವತರಣಗೊಂಡು ಬರುವ ಹಂತದಲ್ಲಿ, ಇಂತಹ ವಿಭೂತಿಮಯ ಸ್ವರೂಪಕ್ಕೆ ಕಾರಣವಾಗುವ ಗ್ರಹ–ತಾರೆಗಳ ಸ್ಥಾನಗಳ ವ್ಯವಸ್ಥೆ ಎಲ್ಲರಿಗೂ ಲಭ್ಯವಾಗುವದಿಲ್ಲ. ಆದರೆ, ಈ ರೀತಿ ಅವತರಣಗೊಂಡು (ಊರ್ಧ್ವದಿಂದ ಅವತರಣಗೊಂಡು ಬರುವ ವಿಭೂತಿ ಪುರುಷನು) ನಿರ್ಮಾಣ ಮಾಡುವ ಪಥದ ಮೂಲಕ ಆರೋಹಣ ಗೈದು ಆ ಊರ್ಧ್ವವನ್ನು ತಲುಪಬಹುದು ಎನ್ನುವದನ್ನು, ಅದಕ್ಕೆ ಬೇಕಾದ ವೈಶ್ವಿಕ ಘಟನಾವಳಿಗಳು, ಜನ್ಮದಿನದಂದೇ ಅನುಕೂಲ ಸ್ವರೂಪವಾಗಿರುವದನ್ನು ನೆನಪಿಸಿಕೊಳ್ಳಲೂ ಈ ರೀತಿಯಲ್ಲಿ 'ಜನ್ಮದಿನಾಚರಣೆ'ಗೆ ಅತ್ಯಂತ ಮಹತ್ವದ ಸ್ವರೂಪ ಪ್ರಾಪ್ತಿಯಾಗಿದೆ. [**ಪಿಪಿಕೆ**]



***ಪ್ರೀತಿಯ ಶ್ರೀಮಾತೆಯವರೆ, ಹುಟ್ಟು ಹಬ್ಬದ ಮಹತ್ವತೆ ಏನು, ಅದನ್ನು ಸ್ಮರಿಸಿಕೊಳ್ಳುವ ಗುಣಧರ್ಮವನ್ನು ಬಿಟ್ಟು, ಆ ಸಂದರ್ಭದ ಅನುಕೂಲತೆ ಏನು ತಿಳಿಸುವಿರಾ?***

ವಿಶ್ವಾತ್ಮಕ ಶಕ್ತಿಗಳು ಲಯಬದ್ಧ(ವಿಶ್ವಸೂತ್ರದ ಛಂದ)ವಾಗಿರುವುದರಿಂದ, ಪ್ರತಿ ವರ್ಷದ ಹುಟ್ಟುಹಬ್ಬದ ದಿನ, ಅವರ ಗ್ರಹಿಸುವಿಕೆಯು ಅಂದು ವಿಶೇಷವಾಗಿರುತ್ತದೆ. ಆದುದರಿಂದ ಈ ದಿನದ ಗ್ರಹಿಸುವಿಕೆಯ ಅನುಕೂಲತೆಯನ್ನು, ಒಳ್ಳೆಯ ಸಂಕಲ್ಪ ಮಾಡುವುದರ ಮೂಲಕ ಮತ್ತು ತಮ್ಮ ಸಮಗ್ರ ಬೆಳವಣಿಗೆಯ ದಾರಿಯಲ್ಲಿ ಹೊಸತನದ ಪ್ರಗತಿಯನ್ನು ಬಯಸುವ ಮೂಲಕ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/308** **– ಶ್ರೀಮಾತೆ**

# ಜನ್ಮದಿನಗಳ ಮಹತ್ವ

**– ಅನುವಾದ: ಪ್ರೊ. ವೀರಭದ್ರಪ್ಪ ಕೆ., ರಾಯಚೂರು**

(ಶ್ರೀಮಾತೆಯವರೊಂದಿಗಿನ ಸಂಭಾಷಣೆ ಮೋನಾ ಸರ್ಕಾರ ನೆನಪಿಸಿಕೊಂಡಂತೆ. ಮೂಲ ಫ್ರೆಂಚ್ ಭಾಷಣದ ಅನುವಾದವನ್ನು ಶ್ರೀಮಾತೆಗೆ ಓದಿದ್ದು)

*ನಾಳೆ ನಿನ್ನ ಹುಟ್ಟು ಹಬ್ಬವೆ?*

ಹೌದು, ಶ್ರೀಮಾತೆ

*ನಿನಗೆ ಎಷ್ಟು ವರ್ಷವಾಗುತ್ತೆ?*

ಇಪ್ಪತ್ತಾರು, ಶ್ರೀಮಾತೆ

*ನಾನು ನಿನ್ನನ್ನು ನಾಳೆ ನೋಡುತ್ತೇನೆ, ಮತ್ತು ನಿನಗೆ ವಿಶೇಷವಾದದ್ದನ್ನು ಕೊಡುತ್ತೇನೆ, ನೀನು ನೋಡುತ್ತಿಯಾ, ಅದು ಭೌತಿಕ ವಸ್ತು ಎಂದು ನನ್ನರ್ಥವಲ್ಲಾ, ಅದು.. ನಾನೊಂದು ಕಾರ್ಡನ್ನು ಕೊಡುತ್ತೇನೆ, ಮತ್ತು ಅದಷ್ಟೆ – ಆದರೆ ಏನೋ ಸ್ವಲ್ಪ....., ನೀನು ನಾಳೆ ಕಾಣುತ್ತೀಯಾ, ಮನೆಗೆ ಹೋಗು ಮತ್ತು ನೀನದನ್ನು ಸ್ವೀಕರಿಸಲು ಸುಮ್ಮನೆ ನಿನ್ನನ್ನು ನೀನು ತಯಾರಿ ಮಾಡಿಕೊ.*

ಸರಿ, ಶ್ರೀಮಾತೆ

*ನಿನಗೆ ಗೊತ್ತೇನು, ನನ್ನ ಮಗುವೆ, ಹುಟ್ಟುಹಬ್ಬವು ಯಾವ ಮಹತ್ವವನ್ನು ಸಾರುತ್ತದೆ? ಅದೇನೆಂದರೆ, ನಾವು ಹುಟ್ಟುಹಬ್ಬಕ್ಕೆ ಏನು ಹಾರೈಸುತ್ತವೆ?*

ಅದೇ ರೀತಿ, ಅದರರ್ಥ ಏನೆಂದು ನನಗೆ ಗೊತ್ತಿದೆ, ಶ್ರೀಮಾತೆ, ಆದರೆ ವಿಶೇಷ ಮಹತ್ವತೆ ನೀವು ಹೇಳುವುದು, ನನಗದು ಗೊತ್ತಿಲ್ಲಾ, ಹೌದು, ಇದು ನಿಜವಾಗಿ ಜೀವನದಲ್ಲಿ ಒಂದು ವಿಶೇಷ ದಿನ. ವರ್ಷದಲ್ಲಿ ಅದೊಂದು ದಿನ ಸರ್ವೋತ್ತಮವಾದ್ದು ನಮ್ಮೊಳಗೆ ಇಳಿದು ಬರುತ್ತದೆ – ಅಥವಾ ಶಾಶ್ವತನ ಜೊತೆ ಮುಖಾಮುಖಿಯಾಗುತ್ತೇವೆ – ಆ ಒಂದು ದಿನ ನಮ್ಮ ಆತ್ಮವು ಶಾಶ್ವತನ ಸ್ಪರ್ಶಕ್ಕೆ ಬರುತ್ತದೆ ಮತ್ತು, ನಾವು ಸ್ವಲ್ಪ ಪ್ರಜ್ಞಾಯುತವಾಗಿ ಉಳಿದರೆ, ನಾವು ಆತನ ಸಾನಿದ್ಯವನ್ನು ನಮ್ಮೊಳಗೆ ಸಂವೇದಿಸಬಹುದು. ನಾವು ಈ ದಿನ ಸ್ವಲ್ಪ ಶ್ರಮಪಟ್ಟರೆ, ಹಲವು ಜನ್ಮದ ಕೆಲಸಗಳನ್ನು ಪೂರ್ಣಗೊಳಿಸಬಹುದು, ಮಿಂಚಿನ ಬೆಳಕಿನಂತೆ.

ಆದುದರಿಂದ ನಾನು ಹುಟ್ಟು ಹಬ್ಬಕ್ಕೆ ಬಹಳ ಮಹತ್ವತೆಯನ್ನು ಕೊಡುತ್ತೇನೆ – ಏಕೆಂದರೆ ಈ ಒಂದು ದಿನ ನಿಜವಾಗಿ ಒಂದಿಷ್ಟು ಹೋಲಿಸಲಾಗದ ಗಳಿಕೆಯಾಗುತ್ತದೆ ಮತ್ತು ಇದಕ್ಕಾಗಿ ನಾನು ಕೂಡಾ ಪ್ರಜ್ಞೆಯನ್ನು ಸ್ವಲ್ಪ ಮೇಲಕ್ಕೆ ತೆರೆದುಕೊಳ್ಳಲು ಕೆಲಸ ಮಾಡುತ್ತೇನೆ, ಇದರಿಂದ ಶಾಶ್ವತನ ಜೊತೆ ಮುಖಾ ಮುಖಿಯಾಗಬಹುದು. ನನ್ನ ಮಗುವೆ, ಇದೊಂದು ಬಹಳ ಬಹಳ ವಿಶೇಷ ದಿನ, ಇದೊಂದು ನಿರ್ಣಯ ತೆಗೆದುಕೊಳ್ಳುವ ದಿನ, ಈ ದಿನ ನಿಜವಾಗಿ ಪ್ರಚಂಡ ಪ್ರಗತಿಯಾಗುವುದು, ಯಾವಾಗ ನಾವು ಸರ್ವೋಚ್ಚ ಪ್ರಜ್ಞೆಯೊಂದಿಗೆ ಒಂದಾಗುವ ದಿನ. ಈ ದಿನದಂದು, ದೇವರು ನಮ್ಮನ್ನು ಉನ್ನತವಾದ ಸಂಭಾವ್ಯ ಕ್ಷೇತ್ರಕ್ಕೆ ಕೊಂಡೊಯ್ಯುವನು, ನಮ್ಮ ಆತ್ಮವು ಆ ಪರಮಾತ್ಮನ ಜ್ಯೋತಿಯ ಒಂದು ಅಂಶ. ಅದರೊಂದಿಗೆ ಕೂಡಿ ಮತ್ತು ಮೂಲದಿಂದ ಸತ್ವವನ್ನು ಹೀರಿಕೊಳ್ಳುತ್ತದೆ.

ಈ ದಿನ ಜೀವನದಲ್ಲಿ ನಿಜವಾಗಿ ಸದಾವಕಾಶ. ಇಷ್ಟೊಂದು ವಿಶಾಲವಾಗುತ್ತೇವೆ ಮತ್ತು ಗ್ರಾಹ್ಯ ಮಾಡಿಕೊಳ್ಳುತ್ತೇವೆ ಎಂದರೆ ಏನು ಕೊಟ್ಟರು ಅರಗಿಸಿಕೊಳ್ಳುತ್ತೇವೆ. ನಾನು ಬಹಳಷ್ಟು ಮಾಡಬಹುದು – ಆದುದರಿಂದ ಇದು ಮಹತ್ವದ್ದು.

ಇದೊಂದು ದಿನ ದೇವರು ತಾನೆ ದ್ವಾರಗಳನ್ನು ನಮಗಾಗಿ ವಿಶಾಲವಾಗಿಸುತ್ತಾನೆ. ಆತನೆ ನಮ್ಮ ಅಭೀಪ್ಸೆಯ ಜ್ವಾಲೆಯನ್ನು ಪುನಃ ಪುನಶ್ಚೇತನಗೊಳಿಸಲು ಆಹ್ವಾನಿಸುತ್ತಾನೆ. ಆತನೆ ಇದೊಂದು ದಿನ ಅದನ್ನು ನಮಗೆ ಕೊಡುತ್ತಾನೆ, ನಾವು ಕೂಡಾ, ನಮ್ಮ ವೈಯಕ್ತಿಕ ಪ್ರಯತ್ನದ ಮೂಲಕ, ಇದನ್ನು ಹೊಂದಬಹುದು, ಇದು ತುಂಬಾ ದೂರದ, ಕಠಿಣವಾದದ್ದು ಮತ್ತು ಸುಲಭವಾದುದ್ದಲ್ಲಾ ಮತ್ತು ಇದು – ಇದೊಂದು ಜೀವನದಲ್ಲಿ ಒಂದು ಅವಕಾಶ – ಕೃಪೆಯ ದಿನ.

**18–01–60**

*(ನಂತರದ ದಿನದಲ್ಲಿ ಶ್ರೀಮಾತೆಯ ವ್ಯಾಖ್ಯಾನ)*

ಅದೊಂದು ರಹಸ್ಯವಾದ ಅಪೂರ್ವ ಘಟನೆ, ಬದಲಾಗದೆ ಘಟಿಸುತ್ತದೆ, ನಮಗರಿವಿಲ್ಲದೆ, ವರ್ಷದ ಇಂತಹ ವಿಶಿಷ್ಟವಾದ ದಿನದಂದು ಈ ದೇಹವನ್ನು ಹಿಂದೆ ಬಿಟ್ಟು ಆತ್ಮವು ಮೇಲೆ ಮೇಲೆ ಪ್ರಯಾಣ ಬೆಳೆಸುತ್ತಾ ತನ್ನ ಮೂಲದೊಂದಿಗೆ (ಪರಮಾತ್ಮ) ಕೂಡಿಕೊಳ್ಳುತ್ತದೆ. ಏಕೆಂದರೆ ಸರ್ವೋನ್ನತದ ಶಕ್ತಿ, ಬೆಳಕು (ಜ್ಞಾನ) ಮತ್ತು ಆನಂದವನ್ನು ಹೀರಿಕೊಂಡು ಪುನಃ

ತುಂಬಿಕೊಂಡು ವರ್ಷಪೂರ್ತಿ ಹುರುಪುಗೊಳ್ಳುತ್ತದೆ. ನಂತರ ಮತ್ತೆ ಮತ್ತು ಮತ್ತೆ.... ಇದು ಹೀಗೆ ಮುಂದುವರೆಯುತ್ತದೆ ವರ್ಷ ವರ್ಷದ ನಂತರ.

**ಈ ದಿನ ನಿಜವಾಗಿ ಜೀವನದಲ್ಲಿ ಒಂದು ಸದಾವಕಾಶ. ನಾವು ಎಷ್ಟೊಂದು ವಿಶಾಲ ಮತ್ತು ಗ್ರಹಿಸುತ್ತೇವೆ ಎಂದರೆ ಏನೇ ಕೊಟ್ಟರು ಅದನ್ನೆಲ್ಲಾ ಅರಗಿಸಿಕೊಳ್ಳುತ್ತೇವೆ.**

**– ಶ್ರೀಮಾತೆ**

## ಪ್ರತಿ ಘಟನೆಗೂ ನಿಗದಿತ ನಾದ–ಸ್ವರೂಪ

**– ಅನುವಾದ: ಪುಟ್ಟು ಕುಲಕರ್ಣಿ**

ಶ್ರೀಮಾತೆಯವರು ಶ್ರೀ ಅರವಿಂದರ 'ಯೋಗ ಸಮನ್ವಯ'ದ 'ನಾಲ್ಕು ಉಪಕರಣಗಳು' ವಿಷಯದ ಬಗೆಗೆ ಹೇಳುತ್ತಿದ್ದಾಗ, ಸಾಧಕರಲ್ಲಿ ಓರ್ವರು 'ಹಾಗಾದರೆ ಶ್ರೀಮಾತೆಯವರೇ, ಈ ಕಾಲದ ಉಪಕರಣತ್ವವು ಅಂತಿಮ ಹಂತದಲ್ಲಿ ಬರುತ್ತಿದೆ; ಪ್ರತಿಯೊಂದು ವಸ್ತುಗಳಲ್ಲಿಯೂ/ಘಟನೆಯಲ್ಲಿಯೂ ಅಂತರ್ಗತವಾಗಿರುವ, ಅದರದೇ ಆಗಿರುವ ಒಂದು ದೈವೀ ಸಂಚಲನದ ಕ್ರಿಯೆಯು ಮತ್ತು ನಿಗದಿತವಾಗಿರುವ ಅವಧಿಯ ಆವರ್ತನವಿರುತ್ತದೆ.... ಎಂದರೆ ಏನು? ಈ ದೈವೀ ಸಂಚಲನದ ಅವಧಿ ಎಂದರೆ ಏನು?' ಎಂದು ಪ್ರಶ್ನೆ ಕೇಳುತ್ತಾರೆ.

ಅದಕ್ಕೆ ಉತ್ತರಿಸುತ್ತಾ ಶ್ರೀಮಾತೆಯವರು, 'ಪ್ರತಿಯೊಂದು ವಸ್ತುವಿಗೂ ಅದು ಭಿನ್ನವಾಗಿಯೇ ಇರುತ್ತದೆ' ಎಂದು ಮುಂದುವರೆಸಿ, ಪ್ರತಿಯೊಂದು ಚಟುವಟಿಕೆಯಲ್ಲಿಯೂ, ಪ್ರತಿಯೊಂದು ಸಾಕ್ಷಾತ್ಕಾರದಲ್ಲೂ, ಪ್ರತಿಯೊಂದು ಸಂಚಲನದಲ್ಲೂ, ಅಲ್ಲಿ ಖಚಿತವಾಗಿಯೂ ನಿರ್ದಿಷ್ಟವಾದ ಒಂದು ಸಮಯದ ಅವಧಿ ಇದೆ. ಇಂತಹ ಅವಧಿಗಳೂ ಅಗಣಿತವಾಗಿವೆ. ಅವು ಜಟಿಲ ಸ್ವರೂಪದಲ್ಲಿವೆ. ಸಂಕೀರ್ಣಮಯವಾಗಿವೆ. ಆದರೂ ಪ್ರತಿಯೊಂದೂ ನಾದದ ಸ್ವರೂಪದಿಂದಲೇ ನಿಬಂಧನೆಗೆ ಒಳಪಟ್ಟಿರುತ್ತದೆ. ಆ ನಾದವೇ ಆ ವಸ್ತುವಿನದೇ ಅಸ್ಮಿತೆಯೂ – ಅಂದರೆ ನಾದವಾಗಿರುತ್ತದೆ.

ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ, ಅವುಗಳು ಬಾಹ್ಯದಲ್ಲಿ ಇರುವ ಸಥಿತಯ ಸೌಲಭ್ಯದ ಸಲುವಾಗಿ, ಮನುಷ್ಯ ಕುಲವು

ಸಮಯವನ್ನು–ಅವಧಿಯನ್ನು ವರ್ಷಗಳು, ತಿಂಗಳುಗಳು, ವಾರಗಳು, ದಿನಗಳು, ತಾಸುಗಳು, ನಿಮಿಷಗಳು ಮತ್ತು ಕ್ಷಣಗಳು ಎಂದೆಲ್ಲಾ ನಿರಂಕುಶ ಸ್ವರೂಪದಲ್ಲಿಯೇ ರೂಪಿಸಿಕೊಂಡಿದ್ದಾರೆ. ಏಕೆಂದರೆ ಇವೆಲ್ಲವೂ ಮನುಷ್ಯ ನಿರ್ಮಿತವೇ ಆಗಿವೆ. ಇವುಗಳಿಗೂ ಅವುಗಳದೇ ಆದ ಕೆಲವೊಂದು ನೈಜ ಅಂಶಗಳೂ ಇವೆ. ಏಕೆಂದರೆ ಇವೆಲ್ಲವೂ ಆ ವೈಶ್ವಿಕ ಸಂಚಲನದ ಅಂಶಾಂಶಗಳೇ ಆಗಿವೆ. ಸಾಧ್ಯವಿದ್ದಷ್ಟೂ ಈ ದಿಸೆಯಲ್ಲಿ ಅವು ಸಹಕರಿಸುತ್ತಿವೆ.

ಹೀಗಿರುವದರಿಂದಲೇ, ಈ ಮೂಲಕವಾಗಿ ನಾವು ಜನ್ಮ ದಿನಗಳನ್ನು ಆಚರಿಸಿಕೊಳ್ಳುತ್ತಿದ್ದೇವೆ. ಉದಾಹರಣೆಗೆ ನೋಡುವದಾದಲ್ಲಿ, ಪ್ರತಿಯೊಂದು ಅಸ್ತಿತ್ವದಲ್ಲಿ ಈ ರೀತಿಯ ನಾದ–ಸ್ಪಂದನದ ಸ್ವರೂಪವಿದ್ದು, ಅದು ನಿಯಮಾನುಸಾರವಾಗಿಯೇ, ಮತ್ತೆ ಮತ್ತೆ ಆಗಮಿಸುತ್ತಿದ್ದು (ಆವರ್ತನಗೊಳ್ಳುತ್ತಿದ್ದು), ಸಾದೃಶ್ಯಗೊಳ್ಳುತ್ತಿರುವ ಸಂದರ್ಭಗಳಾಗಿದ್ದು, ಅಂತಹ ಸಂದರ್ಭಗಳಲ್ಲಿಯೇ ನಮ್ಮ ಜನ್ಮವೂ ಆಗಿರುತ್ತದೆ. ಇಂತಹ ಎಲ್ಲ ಸಂಚಲನಗಳನ್ನು ನೀನು ನೋಡಿದಾಗ (ದೃಷ್ಟಿಸಿದಾಗ), ಅವುಗಳಲ್ಲಿ ಇರುವ ನಾದದ–ಸ್ವರೂಪವು ಗೋಚರಕ್ಕೆ ಬರುತ್ತದೆ. ಅದು ಅಂತಃಶ್ಚೇತನದ ಸಂಚಲನವಾಗಿದೆ ಎನ್ನುವದನ್ನು ನೀನು ಈ ರೀತಿಯಲ್ಲಿ ಅರಿತುಕೊಂಡಾಗ, ಅದರಲ್ಲೂ ಕೇವಲ ಅದರ ಜ್ಞಾನವನ್ನು ಹೊಂದುವದರ ಸಲುವಾಗಿ ಮಾತ್ರವಲ್ಲದೇ, ಅದಕ್ಕೆ ಪ್ರತಿಕ್ರಿಯೆ ನೀಡುವ ವೈಯಕ್ತಿಕ ವಿಷಯವೂ ಇರುತ್ತದೆ. ಏಕೆಂದರೆ ಇಲ್ಲಿ ಏರಿಳಿತಗಳೂ ಇರುತ್ತವೆ. ಬಹುತೇಕವಾಗಿ, ಅತ್ಯಂತ ಸುಸಂಗತವಾಗಿರುವ ನಿಬಂಧನಾಪೂರ್ವಕವಾಗಿರುವ ಅವಧಿಗಳ ಆವರ್ತನಾ ಕ್ರಮಾಂಕವಿರುತ್ತದೆ. ಏಕಕಾಲಕ್ಕೆ ಅದು ಪ್ರಗತಿದಾಯಕವೇ ಮುಂದು–ವರೆಯುತ್ತಿರುತ್ತದೆ, ಮತ್ತೆ ಪುನರಾವರ್ತನೆಗೊಳ್ಳುತ್ತ ಇರುತ್ತದೆ. ಇಲ್ಲಿಯೇ ಅಡೆ–ತಡೆಗಳೂ ಕಷ್ಟಗಳೂ ಇರುತ್ತವೆ. ಜೊತೆಗೆ ಸಹಾಯವೂ ಇರುತ್ತದೆ. ಒಂದೊಮ್ಮೆ ಪ್ರತಿ ವ್ಯಕ್ತಿಯೂ ಜಾಗೃತನಾಗಿದ್ದಲ್ಲಿ, ಅವನಿಗೆ ತನ್ನ ಅಂತರಂಗದಲ್ಲಿ ಇರುವ ನಾದವೇ ತನ್ನದೇ ಆದ ಸ್ವರೂಪದ ನಾದವಾಗಿರುವದನ್ನು ಅನುಭಾವಿಸುತ್ತಾನೆ. ಅಲ್ಲಿರುವ ನಾದವು ಅವನ ಪಕ್ಕದಲ್ಲಿರುವ ನಾದವಾಗಿರುವದಿಲ್ಲ.

ಕಾಲ–ಋತುಮಾನಗಳು ನಿಗದಿತವಾಗಿರುವ ನಾದ–ಸ್ಪಂದದಲ್ಲಿ ಅನುಸರಿಸುತ್ತಿರುವಾಗ, ಬಹುತೇಕವಾಗಿ ಅವು ನಿತ್ಯ–ನಿಯಮಿತವಾಗಿಯೇ ಸಮಗ್ರವಾಗಿರುತ್ತವೆ. ಅದಕ್ಕೆ ಪ್ರತಿಸ್ಪಂದಿಯಾಗಿ ವೈಯಕ್ತಿಕ ಜೀವನವೂ ತನ್ನದೇ ಋತುಮಾನ(ಕ)ಗಳನ್ನು ಹೊಂದಿರುತ್ತದೆ. ಯಾವಾಗ ಓರ್ವ ವ್ಯಕ್ತಿಯು ತನ್ನನ್ನೇ

ತಾನು ಜಾಗೃತ ಸ್ವರೂಪದಲ್ಲಿ ಅರಿತುಕೊಳ್ಳುತ್ತಾನೆಯೋ, ಅಲ್ಲಿಯೂ ಸಹಿತ ಇದೇ ಸ್ವರೂಪದ ಸಾದೃಶ್ಯಮಯ ಪುನರಾವರ್ತಿತ ಘಟನೆಗಳು ನಿಯಮಿತ ಮಧ್ಯಂತರದಲ್ಲಿ ಘಟಿಸುತ್ತಿರುವದನ್ನು ಕಾಣಬಹುದಾಗಿದೆ. ಈಗಲೂ ಸಹಿತ ಕೆಲವೊಂದು ಹಂತದಲ್ಲಿ ಹೆಚ್ಚಿನ ಸಂವೇದನಾಶೀಲತೆಯನ್ನು ಹೊಂದಿದ ಸ್ವಭಾವದ ವ್ಯಕ್ತಿಗಳು ತಮ್ಮ ಜೀವನದ ಅವಧಿಯಲ್ಲಿ ಕೆಲವೊಂದು ವಾರ ಅಥವಾ ತಿಂಗಳು, ಅಥವಾ ಕೆಲವೊಂದು ತಾಸಿನಲ್ಲಿ ಮಾತ್ರ ಯಾವುದೇ ಕಾರ್ಯವನ್ನೂ ಅತ್ಯಂತ ಸುಲಭವಾಗಿಯೇ ಮಾಡಲಾಗುತ್ತದೆ ಎನ್ನುವದನ್ನು ಅನುಭವಿಸಿರುತ್ತಾನೆ. ಅದೇ ರೀತಿಯಲ್ಲಿ ಮತ್ತೆ ಕೆಲವರಿಗೆ ನಿಗಿದಗೊಳಿಸಲ್ಪಟ್ಟಿರುವ ಅವಧಿಯಲ್ಲಿ–ಸಮಯದಲ್ಲಿ ಕಷ್ಟಗಳು–ಅಡೆತಡೆಗಳನ್ನು ಎದುರಿಸುವ ಅನುಭವವೂ ಇರುತ್ತದೆ. ಇವುಗಳಿವೆ ವಿರುದ್ಧವಾಗಿ, ಕೆಲವೇ ಕೆಲವು ನಿರ್ದಿಷ್ಟ ಘಟನೆಯಲ್ಲಿ ಮಾತ್ರ ಹೆಚ್ಚಿನ ಸ್ಫೂರ್ತಿಯನ್ನು ಹೊಂದುವ ಘಟನೆಗಳೂ ಇವೆ. ಆದರೆ ಇವೆಲ್ಲವನ್ನೂ ಅವರವರೇ ತಮ್ಮ ಅಂತರ್‌ನಿರೀಕ್ಷಣೆಯಲ್ಲಿಯೇ ಕಂಡುಕೊಳ್ಳಬೇಕಾಗುತ್ತದೆ. ಸ್ವಾಭಾವಿಕವಾಗಿಯೇ ಇದು ಪೂರ್ಣತ್ವದ ಹಂತದಿಂದ ದೂರವೇ ಇರುತ್ತದೆ. ಒಂದು ವೇಳೆ ಅಲ್ಲಿ ಅಷ್ಟೊಂದು ತೊಂದರೆದಾಯಕವಾಗಿರುವ ಸಂದರ್ಭವಿದ್ದಲ್ಲಿ, ಅದನ್ನೂ ಸಹಿತ ಅಷ್ಟೇ ಸುಲಭದಲ್ಲಿಯೇ ನಿವಾರಿಸಿಕೊಳ್ಳಲೂ ಸಾಧ್ಯವಿದೆ. ಒಂದು ವೇಳೆ ಅದು ಸಹಾಯ ಮಾಡುತ್ತಿದ್ದಲ್ಲಿ ಆಗ ಅದರ ಉಪಯೋಗವನ್ನೂ ಪಡೆದುಕೊಳ್ಳಬಹುದಾಗಿದೆ.

ಒಟ್ಟಿನಲ್ಲಿ ಪ್ರತಿಯೊಂದು ಘಟನೆಯು ನಿಗದಿತವಾಗಿರುವ ನಾದ–ಸ್ಪಂದದಲ್ಲಿಯೇ ಇರುತ್ತದೆ. ಒಂದೊಮ್ಮೆ ಇದು ನಾದದ ಅತ್ಯಂತ ಸಂಕೀರ್ಣಮಯತೆಯಲ್ಲಿ ಅಪರಂಪಾರವಾಗಿರುವಂತೆ ಇದ್ದಲ್ಲಿ, ಅದು ನಾವು ಕಾಣುತ್ತಿರುವ ಪರಿಣಾಮಗಳಲ್ಲಿ ಮಾತ್ರ ಇರುತ್ತದೆ. ಅಲ್ಲಿಯೂ ಸಹಿತ ಕೆಲವೊಮ್ಮೆ ಏನೂ ಇಲ್ಲವೆಂದೇ ಕಾಣುವ ಹಂತದಲ್ಲಿ ಇರುತ್ತದೆ. ಏಕೆಂದರೆ ಮೊದಲೇ ನೊಡಿದಂತೆ ಅದೆಲ್ಲವೂ ಸಂಕೀರ್ಣಮಯವಾಗಿರುತ್ತದೆ.

*ಅದರ ಉಪಯೋಗವನ್ನು ನಾವು ಯಾವ ರೀತಿಯಲ್ಲಿ ಪಡೆದುಕೊಳ್ಳಲು ಸಾಧ್ಯವಾಗುತ್ತದೆ? ಶ್ರೀಮಾತೆಯವರೇ...*

ಅದೋ, ಇದನ್ನು ಈ ರೀತಿಯಲ್ಲಿ ಹೇಳುವದಾದಲ್ಲಿ,.... ನಿಮಗೆ ಗೊತ್ತಿರುವಂತೆಯೇ.... ನಾನೀಗ ಯೋಗದ ಕುರಿತು ಮಾತನಾಡುತ್ತಿರುವೆ, ಇದೇ

ಸಂರ್ಭದಲ್ಲಿ ನಿನ್ನಲ್ಲಿ ಕೆಲವು ಈ ರೀತಿಯ ಪುನರಾವರ್ತನಗಳು ಜರುಗುತ್ತಿರುವದನ್ನು ನೀನು ಅನುಭವಿಸುತ್ತಿದ್ದೀಯಾ, ಉದಾಹರಣೆಗೆ ಹೇಳುವದಾದಲ್ಲಿ, ಒಂದು ನಿಗದಿತ ದಿನದಲ್ಲಿ ಅದರಲ್ಲೂ ನಿಗದಿತವಾಗಿರುವ ಘಳಿಗೆಯಲ್ಲಿ ಮತ್ತೆ ಕೆಲವು ಸಂಧರ್ಭಗಳಲ್ಲಿ ನಿನಗೆ ಏಕಾಗ್ರತೆಯನ್ನು ಸಾಧಿಸಿಕೊಳ್ಳಲು ಸುಲಭವಾಗಿ ಸಾಧ್ಯವಾಗುತ್ತಿದೆ. ಆಗ ನಿನಗೆ ಧ್ಯಾನವನ್ನು ಮಾಡುವದೂ ಸಹಿತ ಸುಲಭವಾಗಿರುತ್ತದೆ. ಅಂತಹ ಸಂದರ್ಭದಲ್ಲಿ ನೀನು ಇದನ್ನೆಲ್ಲ ಸುಲಭವಾಗಿಯೇ ಕಾಣುತ್ತಿದ್ದೀ ಅಲ್ಲವೇ?

ಸ್ವಾಭಾವಿಕವಾಗಿ ನೀನು ಅದಕ್ಕೆ ಸಂಪೂರ್ಣ ಶರಣಾಗತನಾಗಬೇಕಿಲ್ಲ (ಗುಲಾಮನಾಗಬೇಕಿಲ್ಲ). ಆದರೆ ಅದನ್ನು ನೀನು ಉಪಯೋಗ ಮಾಡಿಕೊಳ್ಳಬಹುದು. ಆದರೆ ಅದೇ ಅವಶ್ಯಕವಾಗಿರುವಂತೆ ಮಾತ್ರ ಅಲ್ಲ. ಧ್ಯಾನಸ್ಥರಾಗದಿದ್ದರೂ 'ಆ ಸಮಯವು' ಸರಿದುಹೋಗುತ್ತದೆ. ಆದರೆ ಅದೊಂದು ನಿಜವಾಗಿಯೂ ಒಳ್ಳೆಯ ಸಹಕಾರಿಯಾಗಿದ್ದಲ್ಲಿ ಅದರ ಉಪಯೋಗವನ್ನು ಪಡೆದುಕೊಳ್ಳಬಹುದು. ಇದೆಲ್ಲವೂ ಅದನ್ನು ಗ್ರಹಿಸಿಕೊಳ್ಳುವದರ ಮೇಲೆ ಅವಲಂಬಿತವಾಗಿರುತ್ತದೆ. ನೀನು ನಿನ್ನಷ್ಟಕ್ಕೆ ನೀನೇ ನಿನ್ನಲ್ಲಿ ಅಭ್ಯಾಸ ಮಾಡುತ್ತಿದ್ದಲ್ಲಿ, ನೀನು ಇದರ ಬಗೆಗೆ ಜಾಗೃತಿಯನ್ನು ಪಡೆದುಕೊಳ್ಳುವೆ. ಕೇವಲ ವ್ಯಕ್ತಿಗತ ಅಂಶಗಳನ್ನು ಮಾತ್ರ ಅವಲಂಬಿಸದೇ, ಅದು ಬಹುತೇಕವಾಗಿ ಪ್ರಕೃತಿಯ ಅಂಶಗಳನ್ನು–ನಿಬಂಧನೆಗಳನ್ನು ಅವಲಂಬಿಸಿಕೊಂಡಿರುತ್ತದೆ. ನಿನ್ನ ಸಾಧನೆಯಲ್ಲಿ ಹೆಚ್ಚಿನ ಅಡೆತಡೆಗಳನ್ನು ಎದುರಿಸುವ ಸಂದರ್ಭಗಳು ಬರಬಹುದು, ಅದೂ ನಿನ್ನಲ್ಲಿಯೇ ನೀನು ಜ್ಞಾನದ ವಿಕಾಸ ಮತ್ತು ಚೈತನ್ಯದ ವಿಕಾಸದತ್ತ ತೀವ್ರತರವಾಗಿರುವ ರೀತಿಯಲ್ಲಿಯೇ ಮುನ್ನುಗ್ಗುತ್ತಿರುವ ಕಾಣಬಹುದಾದ ಸಂದರ್ಭಗಳಲ್ಲಿಯೂ ಸಹಿತ ಇದು ಇದೇ ರೀತಿಯಲ್ಲಿ ಇರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/333–34 – ಶ್ರೀಮಾತೆ**

**ಇಂದ್ರಿಯ ರೂಪದಲ್ಲಿರುವ ಭೌತಿಕದ ಕರ್ಣಗಳು ಆಲಿಸದ ಮತ್ತು ಅಸ್ತಿತ್ವದಲ್ಲಿ ಇರುವ ವಸ್ತುಗಳಲ್ಲಿಯೂ ಇರುವ ನಾದಕ್ಕಿಂತ ಬೇರೆಯದೇ ಆದ 'ಒಂದು ವಿಶಿಷ್ಟ ನಾದ'ವು ಪ್ರತಿಯೊಂದು ವಸ್ತುವಿನಲ್ಲಿಯೂ ಅಂತರ್ಗತವಾಗಿರುತ್ತದೆ.**

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/283 – ಶ್ರೀ ಅರವಿಂದರು**

ನೊಗಹೊತ್ತ ಜಡದ ಜಗವದುವು ಗಾಣದೋಪಾದಿಯಲ್ಲಿ ಸತತ
ತನ್ನ ಮೈಸುತ್ತ ತಾನೆ ಸುತ್ತುತಿರಲಲ್ಲಿ ಚೈತನ್ಯ ನಿರತ

ನಮ್ಮ ಶಕ್ತಿಯಿಂದಾಚೆ ಆಚೆಗಿಹ ಸಂಕಲ್ಪ ರೂಪು ಪಡೆಯೆ
ಪರಿತ್ಯಕ್ತಗೊಂಡು ಈ ಜಡದ ಜಗದ ಮೇಲೀಗ ತಾನೆ ಉಳಿಯೆ
ತಿರುಗಣಿಯ ಸುಳಿಗೆ ಗಿರಗಿರನೆ ಸುತ್ತಿ ನಿತ್ಯದಲಿ ಭ್ರಮಣಶೀಲ
ಪರಿಮಿತದ ಪರಿಧಿ ನಿರ್ಧರಣೆಗೆಂದು ನಾವಿಂದು ಸುತ್ತುತೆಲ್ಲ;

ಜಡೆಗಟ್ಟಿ ಜಟಿಲ ಸಂಕೀರ್ಣಗೊಂಡ ಯಾಂತ್ರಿಕದ ಬದುಕಿನೊಳಗೆ
ಗುರಿಕಾರನಿರದೆ ಗುರಿ ತಪ್ಪಿ, ದೈವವೆಂದವರ ಮಧ್ಯದೊಳಗೆ
ಸಾವು–ನೋವುಗಳ ಪತನ ಕೋಟಳೆಯ ಸಂಕಷ್ಟ ದಾರಿ ಸುತ್ತ
ಅಲ್ಲೆಮ್ಮ ಬದುಕ ರಕ್ಷೆಗಿದೆ ಸತತ ಚಾಚಿರುವ ಅಭಯ–ಹಸ್ತ

ಅಗಣಿತದ ಕಾಯ ಜೊತೆ ಜನ್ಮಗಳಲಿ ಅದು ನಮ್ಮ ಸನಿಹದಲ್ಲಿ;
ಆ ಪರಮ ಫಲವು ಅನಿವಾರ್ಯವಾಗಿ ದೊರಕಲೆನೆ ಬಯಸುತಲ್ಲಿ
ಚಂಚಲತೆ ಇರದ ಅದರ ಗ್ರಾಹ್ಯದಲಿ ನಮ್ಮ ರಕ್ಷೆಗಿಹುದಿಲ್ಲಿ
ಯಾವ ಕೃತುಶಕ್ತಿ ವಿಚಲಿಸದು ಅದನು ಮೃತ್ಯು ಸಹ ಸೋಕದಿಲ್ಲಿ

ಕಾಲ ನಿಯತಿಯಲಿ ಋತದ ಅಮರತ್ವ ಚಿದ್ಬ್ರಹ್ಮವಾಗಿ ಸತ್ಯ,
ನಮ್ಮಾತ್ಮಗಳಿಗೆ ಆಶ್ವಾಸ ನೀಡೆ ಆ ಪರಮದೇವ ನಿತ್ಯ
ಬೇಗುದಿಗೆ ಸಿಲುಕಿ ಬೆಂದ ಜೀವನವ ಜೊತೆಜೊತೆಗೆ ಮೃತ್ಯುವನ್ನು
ಆ ಮೊದಲ ಮನುಜನಾ ಹೃದಯವನು ಪ್ರತಿಭಟಿಸೆ ನಿತ್ಯ ತಾನು

ಈ ಜಗದ ರಚನೆ ಗೈದವನು ತಾನೆ ಜಗದೊಡೆಯ ನಿತ್ಯದಲ್ಲಿ;
ಆ ಪಥದ ಮೇಲೆ ಅವನ ಪದಗುರುತು ನಮ್ಮ ಭ್ರಮೆಯೆಲ್ಲ ಅಲ್ಲಿ
ಅವ ಕಾರ್ಯಗೈವ ನಮ್ಮ ದಾರುಣದ ಕಾಲಗತಿ ಸೂತ್ರಗಳಲಿ
ನಮ್ಮ ಜನ್ಮಗಳ ಶ್ರೇಣಿಶ್ರೇಣಿಯಲಿ ಘಟಿಸುತಿಹ ಘಟನೆಗಳಲಿ

ಸಂಘರ್ಷದಲ್ಲಿ ಜೊತೆ ಶ್ರಮದಿ ಸಹಿತ ಕಠಿಣಾತಿಕಠಿಣದುಸಿರು
ಇವುಗಳಾಧರಿಸಿ ಇವ ಕಾರ್ಯಗೈವ ಪರಿಪೂರ್ಣಗೊಳಿಸೆ ತೇರು
ನಮ್ಮ ಪಾಪಗಳ ಮತ್ತೆ ಕಷ್ಟಗಳ ಜೊತೆಯಲ್ಲಿ ಅಶ್ರುಬಿಂದು
ಕಾರ್ಯಗೈವನಿವ ಭವಬದುಕು ದಿವದಿ ಅವಕಾಶ ಪಡೆಯಲೆಂದು

ನಮ್ಮ ನಿಜ್ಞಾನವನ್ನು ನಿರ್ನಾಮಗೊಳಿಸಲೆನೆ ಸತ್ತ್ವತನುವು;
ಯಾವ ರೂಪದಲು ಬಂದರೂ ಅದನು ಬಿಡದೆ ಧರಿಸುತಿಹ ನಾವು,
ಯಾವ ವೇಷದಲು ಯಾವ ಭಾವದಲು ಸಂಕೀರ್ಣ ದೋಷ–ಮೇಳ
ಮತ್ತೆ ಪ್ರಚಲಿತದ ನಮ್ಮ ವಿಧಿಲಿಖಿತ ರೂಪಿಸಿರೆ ಹಾಕಿ ತಾಳ,

ಏನೊಂದನೀಗ ನಾವರಿಯದಿರುವ ಜೊತೆ ಕಾಣದಿರಲು ಸಹಿತ
ಆದರೂ ಅದರ ತಾತ್ಪರ್ಯ ಮತ್ತೆ ಸಂಚಿತದ ಭಾವ ವಿಹಿತ,
ಈ ಎಲ್ಲ ಬಲ್ಲ ತಲ್ಲಣದಿ ಕೂಡ ನಮ್ಮನ್ನು ಬಿಡದೆ ಇಂದು
ಆ ಸರ್ವಶಕ್ತ ಮಾರ್ಗದರ್ಶನಕೆ ಮುಂಚೂಣಿಯಲ್ಲಿ ನಿಂದು

ಭವ್ಯ ವಿಭಜನದ ಧರ್ಮದಂತೀಗ ಭಾಗಗೊಂಡಿರುವ ಜಗದಿ
ನಂತರದಿ ನಿತ್ಯ ಈಗಲ್ಲಿ ನಾವು ಕಾರ್ಯದಲಿ ತೊಡಗಿ ಮುದದಿ
ಆ ಪರಮದೇವನಾನಂದ ಹರ್ಷ ಜೊತೆಗದ್ವೈತವೂ ಸಿಕ್ಕು
ನಿಯತಿಯಲಿ ಬಂದು ಇವು ನಮಗೆ ಇಂದು ಆಜನ್ಮ–ಸಿದ್ಧ–ಹಕ್ಕು

ಅಜ್ಞಾತ ವಿಶ್ವದವಧಿ ದರ್ಶಕದಿ ದಿನವೊಂದು ನಿಗದಿಯಾಗಿ
ಉನ್ನತದ ಸೃಷ್ಟಿಯಾಗಲೆನೆ ಪುಣ್ಯದಾಚರಣೆ ಖಚಿತವಾಗಿ;
ನಮ್ಮಾತ್ಮವದರ ವೈವಿಧ್ಯ ಪದಗುರುತ ನ್ಯಾಯಬದ್ಧಗೊಳಿಸಿ
ಆತ್ಮಗತವಾದ ಸರ್ವಸ್ವ ಪೂರ್ಣ, ಇಲ್ಲದಿರನಂತವಾಸಿ

ದೀರ್ಘಾತಿದೀರ್ಘ ದೂರದಲಿ ಸ್ಥಿತದ ಅನಂತಾನಂತ ಬಲವು
ಘನಶಾಂತವೀಗ ನಿರ್ಮಾಯ ಮೌನ ಜೊತೆಜೊತೆಗೆ ಇರಲು ಒಲವು
ಸಂಮಿಲನಗೊಂಡ ಸಂಚಲನದಲ್ಲಿ ಸ್ಪಂದಿಸುತ ನಿಯತಿ ಕರೆಗೆ
ಕೊನೆಗಿಂತು ಕ್ರಿಯೆಯು ಉತ್ಕ್ರಾಂತಿಯಲೆಯ ಸರಣಿಯದು ಪೂರ್ಣದೆಡೆಗೆ.

**ಕನ್ನಡ: ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ': ದಳ 1 ರೇಣು ಪುಟ 59)**

---

**ಟಿಪ್ಪಣಿ:**

ಸತ್ತ್ವತನು; ರಜೋಗುಣದ ಚಾಂಚಲ್ಯ ಮತ್ತು ತಮೋಗುಣದ ತಾಮಸದಿಂದ ಮುಕ್ತವಾದ ಶುದ್ಧ ತತ್ತ್ವದಿಂದ ರೂಪಾಯಣಗೊಂಡಿರುವ ವಿಗ್ರಹ. ಪ್ರತಿಮೆ.

Nescience ಎಂದರೆ ನಿರ್ಜ್ಞಾನ/ಅವಿದ್ಯೆ



ಜನ್ಮದಿನಗಳ ವಿಷಯದಲ್ಲಿ, ಅಲ್ಲಿರುವ ಹಲವಾರು ವೈಶ್ವಿಕ–ನಾದಗಳ ಮಧ್ಯೆ 'ಒಂದು ನಾದ'ವಿದೆ. ಅದು ಈ ವಿಶ್ವದ ಲೀಲೆಗಳಲ್ಲಿ, ಆ ಸೂರ್ಯ ಮತ್ತು ಗ್ರಹಗಳ ಜೊತೆಗೆ ಸಂಪರ್ಕವನ್ನು ರೂಪಿಸುತ್ತಿದೆ. ಇದು ಈ ರೀತಿಯಲ್ಲಿ ಸಂಪರ್ಕವನ್ನು ಸಾಧಿಸಿದ ದಿನವೇ 'ಜನ್ಮದಿನವನ್ನಾಗಿ' ರೂಪಿಸುತ್ತದೆ. ಇದು ಪುನರಾವೃತ್ತಿಗೊಳ್ಳಬೇಕಾದರೆ, ಈ "ಭೌತಿಕ–ಜೀವ"ವು ಹೆಚ್ಚು ಹೆಚ್ಚು ಸುನಮ್ಯತೆಯನ್ನು ಹೊಂದಿರಬೇಕಾಗುತ್ತದೆ. ಈ ಸುನಮ್ಯತೆಯನ್ನು ರೂಪಿಸುವ ಸಲುವಾಗಿಯೇ ಈ ಶ್ರೀಮಾತೆಯು ಜನ ಸಮುದಾಯದಲ್ಲಿ ಅವರವರ ಜನ್ಮದಿನದಂದು ಅವರೆಲ್ಲರನ್ನೂ ದೃಷ್ಟಿಸುತ್ತಾಳೆ.

## ಆರ್.. ಎನ್ನುವವರಿಗೆ
## ಅವಳ ಜನ್ಮದಿನದಂದು...

ಕಲ್ಯಾಣ ಕೃಪೆದುಂಬಿ ಆವೃತ್ತ–ಸರಣಿಗಳ
ಪಡಮರಳಿ ತರುತಲಿದೆ ನಿನ್ನುದಿತ ಉಷೆಯ–ಘಳಿಗೆ
ಯೌವನದ ಗರಿಮೆಯಾ ಶಾಶ್ವತದ ಕುಲಚಿಹ್ನೆ
ಅಲ್ಲುದಿತ ಅಲೆಯೊಂದು ಗಮಿಸುತಲಿ ಊರ್ಧ್ವದೆಡೆಗೆ

ಸಾವಿರದ ಊರ್ಮಿಗಳ ಮೇಳದಾ ಆಂತರ್ಯ
ಕಿಕ್ಕಿರಿದ ಹಾಸಿನಲಿ ಅರ್ಣವದಿ ಇದು ತರಂಗ
ನಿಯತಿಮಯ ನಾದವದು ಲಹರಿಯಲಿ ತೀರದೆಡೆ
ನೂಕುಬಲ, ಖಚಿತವಿದೆ ಅಲ್ಲೆಮ್ಮ ಜೀವ–ರಂಗ

ಸಂಚಲಿತ ಈ ಶಕ್ತಿ ಅರ್ಣವದ ಸಾಮರ್ಥ್ಯ
ಶಾಶ್ವತವು, ಮುಕ್ತತ್ವ ಜೊತೆಗಜೇಯದಾ ಸ್ಪಂದ
ಇದರ ಈ ಸಂವೇಗ ಅನುಸರಣಗೊಳ್ಳುತಲಿ
ಅದರ ಸರಣಿಗಳ ಅವಧರಣ ನಿತ್ಯ ಛಂದ

ಹ್ಲಾದದಲಿ ಆ ಕೃಪೆಗೆ ಜೊತೆ ನಿತ್ಯ ತಾರುಣ್ಯ
ಅರ್ಣವದ ಆ ತೀರದೆದೆಯತ್ತ ಗುರಿಯನಿರಿಸಿ
ಕರ್ಣಧಾರತ್ವದವನೀ ಧ್ವನಿಯ ವಿಶ್ವಾಸ
ಪ್ರಭುವಿನಾ ದಯೆಯೆಮ್ಮ ರಕ್ಷೆಯಾ ಕವಚವೆನಿಸಿ

ತೋಷವದು ತುಂಬಿರಲಿ, ಅಂಜದಿರು ಉಬ್ಬರದಿ
ತಬ್ಬಲೆನೆ ನುಗ್ಗುತಿಹ ಸೊಕ್ಕಿನಾ ಅಲೆಯ ದಾಳಿ
ಘೋರ ಜಂಝಾವಾತ ಆ ಸಿಡಿಲಿನಬ್ಬರದಿ
ಸರ್ವವನು ನೊಣೆಯಲೆನೆ ಬೀಸುತಿಹ ಕಾಳಿ–ಗಾಳಿ

ನಮ್ಮ ಈ ಕಪ್ತಾನ ಸತತದಲು ತನ್ನದೇ
ಬಿಗಿಬಂಧ ಬಂಧದಲಿ ಚುಕ್ಕಾಣಿ ಹಿಡಿದುಕೊಂಡು
ನಿದ್ರೆಗೊಳ್ಳನವ ಯಾವ ಸಮಯಕು, ಪರಿಪೂರ್ಣ,
ನಿಯತಿಯಾ ನಿಯಮದಲಿ ಸತತದಲಿ ತೊಡಗಿಕೊಂಡು

ಒಂದೊಮ್ಮೆ ಸಂತಪ್ತ ಜಲಧಿಯಾ–ಪಾತ್ರದಲಿ
    ನೀ ವಿಫಲ ಅರಸಲೆನೆ ತೋಷ–ಧಾರೆಯ ಗಗನ
ಬೆದರದಿರು ಎಂದಿಗೂ, ಆದಿತ್ಯನಿಹ ನಿನಗೆ
    ತಮದಲ್ಲು ಜೊತೆಜೊತೆಗೆ ಬೆಳಗಿನಲು ಸತತ ಗಮನ

ವಿಜಯದುಬ್ಬರದ ಸಲಿಲದಲಿ ಮುಳುಗಿದವನೂ
    ಎಲ್ಲಿ ಮುಳುಗಿಹನವನು? ಅವನದೇ ಹೃದಯದೊಳಗೆ
ಯಾರಿಗಿವ ಒಮ್ಮೊಮ್ಮೆ ವಿಜಯವನು, ಶುಭ–ತೋಷ
    ಕೊಟ್ಟರೂ ಕೆಲವರಿಗೆ ವಿಶ್ರಾಂತಿ ಚಿರದ ಘಳಿಗೆ

ಆದರೀಗಿದೋ ನೋಡಿತ್ತ ನೀ ಬೆಳಗುಗಳ
    ನಿನಗಾಗಿ ಕಾದಿರುವ ದೀಪ್ತಿಮಯ ತೇಜದಲ್ಲಿ
ಧಾರೆಯಲಿ ಸುರಿಯುತಿಹ ಬಿರುಮಳೆಯ ರಭಸದಲಿ
    ಜೊತೆಗೆ ಬಿರುಗಾಳಿ ದಾಳಿಯಾ ಆಚೆಯಲ್ಲಿ

ನನಗಿದೋ ದೃಷ್ಟ ದರ್ಶನಕೆ ತಾ ಲಭ್ಯವಾಗಿ
    ಸಂತಸದ ಭಾಗ್ಯ–ವಿಧಿ, ನಿಯತಿಯಲಿ ಲಿಖಿತವಾಗಿ
ನಿತ್ಯದಲು ಉಜ್ವಲದಿ ಪ್ರಜ್ವಲನಗೊಳಿಸಲೆನೆ
    ನಿನಗಿದೋ ನಿರ್ಧರಿತ ಸಾಕಾರ ಸತ್ಯವಾಗಿ

ಅವನ ಆ ಕೃಪೆ ಕರುಣೆ ದೊರೆಯಲೆನೆ ಎಂದೆಂದು
    ಆತ್ಮವಿಶ್ವಾಸವದು ತುಂಬಿರಲಿ ಭಾವಗೊಂಡು
ಹಂಬಲಿಸು ಅವನಿಚ್ಛೆಗಾಗಿಯೇ ಸತತದಲು
    ಮುನ್ನಡೆಸಲವನೀಗ; ಅಡಗಿದ್ದರೂನು ಸತತ

ಘಟಿತಗಳಲೆಲ್ಲವೂ ಅವನನ್ನೆ ಕಾಣುತಿರು
    ಅದು ಪಕ್ವಗೊಳಿಸುತಿಹ ಫಲಿತದಾ ಪಥವು ಈಗ
ಅದಕಾಗಿ ವಿಕಸನದ ರೂಪಿತದಿ ಅಂಕುರವು
    ನಿನ್ನದೇ ಬಹುಮೂಲ್ಯ ಜನ್ಮವೀಗ

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/280–81 – ಶ್ರೀ ಅರವಿಂದರು**

**ಅನುವಾದ: ಪುಟ್ಟು ಕುಲಕರ್ಣಿ**

## ಶ್ರೀ ಅರವಿಂದರು ಶಿಷ್ಯರಿಗೆ ರೂಪಿಸಿದ ಜನ್ಮದಿನದ ಸಂದೇಶಗಳು

ಆ ಪರಮಾತ್ಮನ ಜೊತೆಗೆ ಆ ದಿವ್ಯಮಾತೆಯ ಕೃಪಾದೃಷ್ಟಿಗೆ ಅತ್ಯಂತ ಸಮೀಪದಲ್ಲಿಯೇ ಇರುವಂತೆಯೇ ಬದುಕನ್ನು ರೂಪಿಸಿಕೊಳ್ಳಿ. ಅನ್ಯಥಾ ಏನೂ ಬೇಕಾಗಿಲ್ಲ. ಆ ದೈವೀ ಅಸ್ತಿತ್ವದಿಂದಾಗಿ ಯಾವುದೂ ಅನುಪಯುಕ್ತವಾಗಿ ಉಳಿದಿರುವದಿಲ್ಲ.

*

ನಿಮ್ಮ ಅಂತರಂಗದ ಆಂತರ್ಯದಲ್ಲಿರುವ ಚೇತನದ ಸ್ತರಕ್ಕಿಂತಲೂ ಮತ್ತೂ ಆಳವಾಗಿ ಪಯಣಿಸಿ, ಅಲ್ಲಿ ನಿಮ್ಮ ಸಲುವಾಗಿಯೇ ಸ್ಥಿತವಿರುವ ಆತ್ಮದ ಘನಶಾಂತ–ಪ್ರಶಾಂತ ಪ್ರಕಾಶಮಯವಾಗಿರುವ ಮೌನವನ್ನು, ಮುಕತ್ತ್ವವನ್ನು ಮತ್ತು ಆಧ್ಯಾತ್ಮಿಕ ವ್ಯಾಪ್ತಿಯನ್ನು ಪಡೆದುಕೊಳ್ಳುವಿರಿ. ಅಲ್ಲಿ ಆ ದಿವ್ಯತ್ವದ ಅಸ್ತಿತ್ವವು ನೇರಾನೇರವಾಗಿ ಸ್ಪರ್ಶಕ್ಕೆ ದೊರಕುತ್ತದೆ.

*

ಆ ಆಂತರ್ಯದ ಚಿತ್ಸೂರ್ಯನು ಪ್ರಶಾಂತತೆಯಲ್ಲಿ ಜೊತೆಗೆ ಮನಸ್ಸನ್ನು ಉಜ್ಜ್ವಲಗೊಳಿಸಲಿ, ಇದರ ಜೊತೆಗೆ ಹೃದಯದೊಳಗೆ ಸಂಪೂರ್ಣವಾಗಿ ಜಾಗೃತಗೊಂಡು ಮಾರ್ಗದರ್ಶನ ನೀಡಲಿ.

*

ನಿಮ್ಮ ಹೃದಯದಲ್ಲಿಯೇ ಪ್ರಶಾಂತ ಘನದ ಶಾಂತತೆಯಲ್ಲಿ ಮನಸ್ಸನ್ನು ಆ ದೈವೀ ಸಾನಿಧ್ಯದ ಸಲುವಾಗಿಯೇ ಮುಕ್ತಗೊಳಿಸಿಕೊಂಡಿರಿ; ಶಾಂತ ಸ್ವಭಾವದ, ಸುಸ್ಥಿರದ ಮನಸ್ಸು ಮತ್ತು ಹೃದಯದಲ್ಲಿ ಆ ದಿವ್ಯತ್ವವು, ಯಾವಾಗಲೂ ಪ್ರಶಾಂತವಾಗಿರುವ ನೀರಿನಲ್ಲಿರುವ ಸೂರ್ಯನಂತೆಯೇ ಇರುತ್ತದೆ.

*

ಅಧಿಚೇತನದತ್ತ ಸತತ ಆರೋಹಣವಿರಲಿ, ಅದರ ಪ್ರಕಾಶವೇ ಸ್ವಭಾವವನ್ನು ನಿಯಂತ್ರಿಸುವ ಹಾಗೂ ರೂಪಾಂತರಗೊಳಿಸುವಂತಾಗಲಿ.

*

ಅಸ್ತಿತ್ವಕ್ಕೆ ತನ್ನನ್ನು ತಾನೇ ಸಮರ್ಪಿಸಿಕೊಳ್ಳುವ ಹೃದಯವು ಮತ್ತು ಅದರ ಸ್ವಭಾವವು ಅಚೇತನಾವಸ್ಥೆಯಲ್ಲಿಯೂ ಸಹಿತ ಇರುವದು. ಇದರ ಜೊತೆಗೆ (ನಿಮ್ಮ) ಸ್ವಭಾವವನ್ನು ಸತ್ಯದ ಪ್ರಕಾಶದೆಡೆಗೆ ಹಾಗೂ ಚೇತನದ ನೆಲೆಗೆ, ನಿಮ್ಮದೇ ಆತ್ಮದ ಅಸ್ತಿತ್ವದ ಮೂಲಕವೇ ಸರ್ವಸ್ವವನ್ನೂ ಪಡೆಯುವ ಸ್ವಭಾವಕ್ಕೆ ಸಿದ್ಧಗೊಳ್ಳಿ.

*

**ಹೃದಯದ ಹಿಂದೆ ಇರುವ ಗವಸು ಹಾಗೂ ಮನಸ್ಸಿನ ಮೇಲೆ ಇರುವ ಮುಚ್ಚಳವೊಂದು, ನಮ್ಮನ್ನು ಆ ದಿವ್ಯತ್ವದಿಂದ ದೂರವಿಡುತ್ತದೆ. ಪ್ರೇಮ ಮತ್ತು ಭಕ್ತಿಭಾವವು ಈ ಗವಸನ್ನು ಕತ್ತರಿಸುತ್ತದೆ. ಮನಸ್ಸಿನ ಪ್ರಶಾಂತ ಘನವು ಮುಚ್ಚಳದ ಸಾಂದ್ರತೆಯನ್ನು ಕಡಿಮೆ ಮಾಡುತ್ತ ಕರಗಿಸಿ ಬಿಡುತ್ತದೆ.**

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/839 – ಶ್ರೀ ಅರವಿಂದರು**

ನಿಮ್ಮ ಅಂತರಂಗದಲ್ಲಿರುವ ಅಭೀಪ್ಸೆಯ ಮೇಲೆ ಯಾವಾಗಲೂ ಅಂಟಿಕೊಂಡೇ ಇರಬೇಕು. ಅದು ಹೃದಯದ ಆಳದಲ್ಲಿ ಸ್ಥಿರಗೊಳ್ಳುವವರೆಗೂ, ಈ ಪ್ರಯತ್ನವು ಮುಂದುವರೆಯಲಿ; ಮನಸ್ಸಿನ ಮೇಲೆ ಬಾಹ್ಯ ಘಟನೆಗಳ ಮೂಲಕ ಬರುವ ಅಡೆತಡೆಗಳು ಮತ್ತು ಈ ಭೌತಿಕವು, ಈ ಹೃತ್ಪೂರ್ವಕವಾಗಿರುವ ಪ್ರೇಮ ಹಾಗೂ ಅಭೀಪ್ಸೆಯ ಮೂಲಕ ಕರಗಿ ಬಿಡುತ್ತದೆ.

ಯಾವಾಗಲೂ ಹೃದಯ ಹಾಗೂ ಮನಸ್ಸನ್ನು ಮುಕ್ತವಾಗಿರಿಸಿಕೊಳ್ಳಿ. ಜೊತೆಗೆ ಅಂತರ್ಮುಖವಾಗುವತ್ತ ಅವುಗಳ ಚಲನೆಯನ್ನು ಸ್ಥಿರಗೊಳಿಸಿರಿ. ಆ ಮೂಲಕ, ಆ ಸ್ಪರ್ಶವು ಅಂತರಂಗದಲ್ಲಿಯೇ ಆಗಮಿಸಿದಾಗ ಅಥವಾ ಆ ಊರ್ಧ್ವದಿಂದ ಆ ಪ್ರವಾಹವು ಆಗಮಿಸಿದಾಗ, ಅಂತಹ ಸ್ಪರ್ಶವು ಆಗಮಿಸಿದಾಗ, ಊರ್ಧ್ವದೆಡೆ ಸಾಗಲು ನಿಮ್ಮನ್ನು ನೀವು ಸದಾ ಸಿದ್ಧವಾಗಿರಿಸಿಕೊಂಡಿರಿ.

*

ಆ ದೈವೀ ಕೃಪೆಯ ಸಲುವಾಗಿಯೇ ನಿಮ್ಮ ಆತ್ಮವನ್ನು ಸದಾ ಕಾಲದಲ್ಲೂ ಸಿದ್ಧಗೊಳಿಸಿಕೊಂಡೇ ಇರಿ. ಹೀಗಿದ್ದರೆ ಮಾತ್ರ, ಅದು ಯಾವುದೇ ಅವಧಿಯಲ್ಲಿ ಬಂದರೂ, ಸ್ವೀಕರಿಸಲು ಸನ್ನದ್ಧಗೊಂಡಿರುತ್ತದೆ.

*

ನಮ್ಮಲ್ಲಿ ಮತ್ತು ಈ ಜಗತ್ತಿನಲ್ಲಿ ಅತ್ಯಂತ ಅವಶ್ಯಕವಾಗಿರುವದೇನೆಂದರೆ, ಒಂದು ದೃಢಚಿತ್ತದಿಂದ ಕಾರ್ಯ ಮಾಡುವ ಇಚ್ಛೆ. ಅಲ್ಲಿ ಖಂಡಿತವಾಗಿಯೂ ಆಧ್ಯಾತ್ಮಿಕ ಫಲಿತ ಇದ್ದೇ ಇರುತ್ತದೆ. ಚೇತನದ ವಿಕಸನವಾಗಲಿ ಮತ್ತು ಆತ್ಮದ ಸದಾ ಸಿದ್ಧತೆಯ ಹಂತವಾಗಲಿ, ಈ ದಿವ್ಯ ಪ್ರಕಾಶದ ಹಾಗೂ ಶಕ್ತಿಯ ಸ್ಪರ್ಶಕ್ಕೆ ಪ್ರಗತಿಯಾಗಲು ಸಾಧ್ಯವಾಗುತ್ತದೆ.

*

ಯಾವಾಗ ನಮ್ಮ ಅಚೇತನದಲ್ಲಿ, ಆ ಪ್ರಕಾಶವು ಪ್ರವೇಶಿಸುವದೋ, ಆಗ ಅಲ್ಲಿರುವ ನಮ್ಮ ಎಲ್ಲ ಅಡೆತಡೆಗಳೂ (ಬೇಲಿಗಳು) ಆ ಬೆಳಕನ್ನೂ ತಡೆಯಲು ಪ್ರಯತ್ನಿಸುತ್ತವೆ. ಅಥವಾ ಸತ್ಯದ ಚೇತನವು ರೂಪಾಂತರನದ ಪ್ರಕ್ರಿಯೆಯಲ್ಲಿ ಅವತರಿಸುವದನ್ನು ಸೀಮಿತಗೊಳಿಸುತ್ತಿರುತ್ತದೆ.

**ನವ ಜನ್ಮದಿನವು ನಿಮ್ಮ ಹೃದಯದಲ್ಲಿ ಪ್ರಕಟಗೊಳ್ಳಲು ಸಿದ್ಧವಿದೆ. ಅದು ತೋಷಪೂರ್ಣವೂ, ಪ್ರಶಾಂತವಾಗಿದ್ದುಕೊಂಡೇ ನಿಮ್ಮ ಅಸ್ತಿತ್ವದ ಎಲ್ಲ ವಿಭಾಗಗಳಲ್ಲಿಯೂ ಘಟಿಸುವಂತಿರಲಿ. ನಿಮ್ಮ ಮನಸ್ಸಿನಲ್ಲಿ ಎಲ್ಲ ಸ್ತರಗಳಲ್ಲಿಯೂ ಘಟಿಸುವಂತಿರಲಿ. ನಿಮ್ಮ ದೃಷ್ಟಿಕೋನದಲ್ಲಿ ಹಾಗೂ ನಿಮ್ಮ ಇಚ್ಛೆಯಲ್ಲಿ, ನಿಮ್ಮ ಸಂವೇದನೆಯಲ್ಲಿ... ಒಟ್ಟಿನಲ್ಲಿ ನಿಮ್ಮ ಜೀವನದಲ್ಲಿ ಅಭಿವ್ಯಕ್ತಗೊಳ್ಳಲಿ.**

**ನಿಮ್ಮ ಜೀವನದ ಪ್ರತಿಯೊಂದು ದಿನವನ್ನೂ 'ಅದರ' ಪ್ರಗತಿ ಹಾಗೂ ಅದರ ಮಹತ್ತರವಾಗಿರುವ ಪೂರ್ಣತೆಯನ್ನು ಪಡೆಯುವ ಹಂತದವರೆಗೂ ಪ್ರಗತಿಗೊಳ್ಳುವಂತೆ ಸಿದ್ಧವಿರಿ. ಏಕೆಂದರೆ ನಿಮ್ಮಲ್ಲಿರುವದೆಲ್ಲವೂ ಆ ಶ್ರೀಮಾತೆಯ ಶಿಶುವಿನೋಪಾದಿಯಲ್ಲಿಯೇ ಇರುವ ಶಕ್ತಿಯಾಗಿದೆ. ಆ ಪ್ರಕಾಶವಾಗಿದೆ. ಆ ಸಾನಿಧ್ಯವು ನಿಮ್ಮನ್ನು ಆವರಿಸಿಕೊಳ್ಳುವಂತಿದೆ. ಏಕೆಂದರೆ ಆ ಆವರಣವೇ ನಿಮ್ಮನ್ನು ರಕ್ಷಿಸುತ್ತಿರುವದಷ್ಟೇ ಅಲ್ಲದೇ ನಿಮ್ಮನ್ನು ಲಾಲನೆ–ಪಾಲನೆಯನ್ನೂ ಮಾಡುತ್ತಿದೆ. ಅದು ನಿಮ್ಮಂತರಂಗದಲ್ಲಿರುವ ಹಾಗೂ ಬಾಹ್ಯದ ಸಂಗತಿಗಳೆಲ್ಲವನ್ನೂ ಒಂದೇ ಶ್ರುತಿಯಲ್ಲಿ ಸಮರಸಗೊಳಿಸಿ, 'ಅದರ ಅಭಿವ್ಯಕ್ತಿ'ಯಾಗಿರುವ ಶಾಂತಿ, ಸಾಮರ್ಥ್ಯ ಹಾಗೂ ಆನಂದವನ್ನಾಗಿಸುತ್ತದೆ.**

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 25/838 – ಶ್ರೀ ಅರವಿಂದರು**

ಆ ಪ್ರಕಾಶದ ಎಡೆಗೆ ಶ್ರುತಿಗೊಳ್ಳುವದನ್ನೇ ಸತತವಾಗಿರಿಸಿಕೊಳ್ಳುವದೇ ಇದೀಗ ಇರುವ ಅತ್ಯಂತ ಪ್ರಮುಖವಾಗಿರುವ ಅವಶ್ಯಕತೆಯಾಗಿರುತ್ತದೆ. ಆ ಪ್ರಕಾಶವು ನಮಗೆ ಈಗ ಅತ್ಯಂತ ಸಮೀಪದಲ್ಲಿಯೇ ಇದೆ. ಅದು ನಾವು ತಿಳಿದುಕೊಂಡಿರುವದಕ್ಕಿಂತಲೂ ಅತೀ ಸಮೀಪದಲ್ಲಿಯೇ ಇದೆ, ಹೀಗಾಗಿ ಅದು ಯಾವುದೇ ಸಂದರ್ಭದಲ್ಲಾದರೂ ಪ್ರಕಾಶಗೊಳ್ಳಬಹುದು.

*

ನಿಮ್ಮ ಹೃದಯದಲ್ಲಿ ಅಚ್ಚೊತ್ತಿ ನಿಂತಿರುವ 'ಅಹಂ'ನ್ನು ಕಿತ್ತು ಹಾಕಿ. ಅಲ್ಲಿ ಶ್ರೀಮಾತೆಯ ವಾತ್ಸಲ್ಯವು ನೆಲೆಯೂರುವಂತೆ ರೂಪುಗೊಳಿಸಿಕೊಳ್ಳಿ. ಮನಃಪೂರ್ವಕವಾಗಿಯೇ ನಿಮ್ಮ ಎಲ್ಲ ವೈಯಕ್ತಿಕ ನಿರ್ಣಯಗಳನ್ನು ಹಾಗೂ ವಿಚಾರಗಳನ್ನು ನಿಮ್ಮ ನಿಮ್ಮ ಮನಸ್ಸಿನಲ್ಲಿಯೇ ಎರಕ ಹಾಕಿಕೊಳ್ಳಿ. ಆಗ ಮಾತ್ರ ನೀವು ಅವಳನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ. ಅಲ್ಲಿ ಯಾವುದೇ ಕಾರಣಕ್ಕೂ ನಿಮ್ಮ ಸ್ವ–ಇಚ್ಛೆಯ ಗೀಳು, 'ಅಹಂ'ಕಾರ–ಪೂರ್ಣವಾಗಿರುವ ಚಲನೆಗಳು, ವ್ಯಕ್ತಿ ಪ್ರಧಾನತೆಯ ಕಾರ್ಯಗಳು ಯಾವುದೇ ಕಾರಣಕ್ಕೂ ಇರದಂತೆ ನೋಡಿಕೊಳ್ಳಿ. ವ್ಯಕ್ತಿಗತ ಪ್ರೇಮ ಮತ್ತು ಪ್ರಾಮುಖ್ಯತೆಗೆ ಅಹಂ ಎನ್ನುವದು ಅತೀ ಮಹತ್ವವಾಗಿರುವದೇ ಕಾರಣವಾಗಿರುವದರಿಂದ ಮಮಕಾರದಿಂದ ದೂರವಿರಿ. ಆಗ ಮಾತ್ರ ಶ್ರೀಮಾತೆಯ ಶಕ್ತಿಯು ನಿಮ್ಮಲ್ಲಿ ಸುಸ್ಪಷ್ಟವಾಗಿ ಲೀಲೆಗಳನ್ನು ತೋರಿಸಲು ಸಾಧ್ಯವಾಗುತ್ತದೆ. ಈ ಮೂಲಕ ನಿಮ್ಮ ಅಕ್ಷಯ ಸ್ವರೂಪದ ಶಕ್ತಿಯನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಏಕೆಂದರೆ ನೀನು ಇದನ್ನೇ ಆಶಿಸುತ್ತಿದ್ದೀಯಾ. ಈ ಮೂಲಕ ನಿನ್ನ ಸೇವೆಯೂ ಪರಿಪೂರ್ಣವಾಗುತ್ತದೆ.

*

ತತ್ತ್ವ ನಿಷ್ಠೆ, ಭಕ್ತಿ, ಆತ್ಮ ಸಮರ್ಪಣೆಯ ಕಾರ್ಯ ಮತ್ತು ಸೇವೆ, ನಿರಂತರವಾಗಿರುವ ಅಭೀಪ್ಸೆ, ಇವೆಲ್ಲವೂ ಅತ್ಯಂತ ಸರಳವಾಗಿರುವ ಹಾಗೂ ಹೆಚ್ಚು ಹೆಚ್ಚು ಪರಿಣಾಮಕಾರಿಯಾಗಿರುವ ಮಾರ್ಗಗಳಾಗಿವೆ. ಈ ಮೂಲಕವೇ ಆತ್ಮವು ಸಾನಿಧ್ಯದಲ್ಲಿರುವ ಆ ದಿವ್ಯತ್ವಕ್ಕೆ ಆಜ್ಞಾನುಧಾರಿ–ಯಾಗಲು ಸೂಕ್ತವಾಗಿರುತ್ತದೆ. ಅರ್ಹವಾಗಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/246–47 – ಶ್ರೀ ಅರವಿಂದರು**

# ನವ ಜನ್ಮ

**– ಅನುವಾದ: ಡಾ॥ ಬಿ.ಆರ್. ಭೀಡ್, ರಾಯಚೂರು**

## ಅಂತರಾತ್ಮನ ನವ ಜನ್ಮ

ಅಂತರಾತ್ಮ ಅಥವಾ ಚೈತ್ಯ ಪುರುಷ ಯಾವಾಗಲೂ ದೈವೀ ಸತ್ಯದ ಜೊತೆ ನೇರ ಸಂಪರ್ಕದಲ್ಲಿರುತ್ತಾನೆ. ಆದರೆ ಅನೇಕರಲ್ಲಿ ಅವನು ಭೌತಿಕ ಪ್ರಕೃತಿ, ಪ್ರಾಣಿಕ ಮತ್ತು ಮಾನಸಿಕ ಸತ್ತೆಗಳ ಹಿಂದೆ ಮರೆಯಾಗಿರುತ್ತಾನೆ. ಯಾರೇ ಆಗಲಿ ಯೋಗಾಭ್ಯಾಸದ ಮೂಲಕ ಮನ ಮತ್ತು ಬುದ್ಧಿಗಳಲ್ಲಿ ಸಾಕ್ಷಾತ್ಕಾರ ಪಡೆಯಬಹುದು; ಶಕ್ತಿ ಸಂಪಾದನೆ ಮಾಡಿ ಎಲ್ಲ ರೀತಿಯ ಪ್ರಾಣಿಕ ಭೋಗಗಳನ್ನು ಅನುಭವಿಸಬಹುದು; ಅನೇಕ ಆಶ್ಚರ್ಯಕರ ಭೌತಿಕ ಸಿದ್ಧಿಗಳನ್ನು ಪಡೆದುಕೊಳ್ಳಲೂ ಬಹುದು.

ಆದರೆ, ಹಿಂದಿರುವ ರಹಸ್ಯವಾದ ಆತ್ಮ ಶಕ್ತಿ ಪ್ರಕಟವಾಗದೇ ಹೋದರೆ, ಯಾವ ನೈಜ ಸಿದ್ಧಿಯೂ ಲಭಿಸಿದಂತಲ್ಲ.

ಈ ಯೋಗದಲ್ಲಿ ಅಂತರಾತ್ಮನೊಬ್ಬನೇ ಸಾಧಕನ ಸಂಪೂರ್ಣ ಪ್ರಕೃತಿಯನ್ನು ಅತಿಮಾನಸದ ಬೆಳಕಿಗೆ ಒಡ್ಡಬಲ್ಲದು. ಕೊನೆಗೆ ಆತ್ಯಂತಿಕ ಆನಂದದ ಸ್ಥಿತಿಗೆ ಒಯ್ಯುವುದು ಕೂಡ ಅದುವೇ. ಉನ್ನತೋನ್ನತ ಸ್ತರಗಳಿಗೆ ಮನವು ತಾನಾಗಿ ಏರಿ ಹೋಗಬಹುದು, ಅಥವಾ ಅಪಾರವಾಗಿ ಬೆಳೆದು, ನಿರ್ಗುಣತ್ವವನ್ನು ಸಂಪಾದಿಸಿ, ಆಧ್ಯಾತ್ಮೀಕೃತವಾಗಿ ನಿಷ್ಕ್ರಿಯ ಮೋಕ್ಷ ಅಥವಾ ನಿರ್ವಾಣವನ್ನು ಹೊಂದಬಹುದು. ಆದರೆ ಅತಿಮಾನಸವು ಕೇವಲ ಆಧ್ಯಾತ್ಮೀಕರಣ ಹೊಂದಿದ ಮನಸ್ಸಿನಲ್ಲಿ ಸರಿಯಾದ ತಳಹದಿಯನ್ನು ಕಂಡುಕೊಳ್ಳಲಾರದು. ಅಂತರಾತ್ಮನು ಚೆನ್ನಾಗಿ ಜಾಗ್ರತಗೊಂಡರೆ, ಮಾನಸಿಕ–ಪ್ರಾಣಿಕ–ಭೌತಿಕಗಳನ್ನು ದಾಟಿ ಚೈತ್ಯ ಪ್ರಜ್ಞೆಯಲ್ಲಿ ಹೊಸ ಹುಟ್ಟು ಪಡೆದರೆ ಈ ಪೂರ್ಣ ಯೋಗವನ್ನು ಕೈಕೊಳ್ಳಲು ಸಾಧ್ಯವಾಗುವುದು. ಅನ್ಯಥಾ (ಕೇವಲ ಮನಃಪ್ರಾಣಗಳ) ಯಾವ ಬೇರೆ ಶಕ್ತಿಗಳಿಂದಲೂ ಸಾಧ್ಯವಾಗದು. ಅಂತರಾತ್ಮನು ಸತ್ತೆಯ ಹೊಸ ಜನ್ಮವನ್ನು ನಿರಾಕರಿಸಿದರೆ, ಶ್ರೀಮಾತೆಯ ಮೂಲಕ ಹೊಸ ಹುಟ್ಟು ಪಡೆದು ಬರಲು ನಿರಾಕರಿಸಿದರೆ ಮಾತ್ರ – ಬೌದ್ಧಿಕ ಜ್ಞಾನ, ಮಾನಸಿಕ ಪರಿಕಲ್ಪನೆ ಅಥವಾ ಪ್ರಾಣಿಕ ಬಯಕೆಗಳಿಗೆ ಕಟ್ಟುಬಿದ್ದು – ಸಾಧನೆಯಲ್ಲಿ ವೈಫಲ್ಯ ಅನುಭವಿಸಬೇಕಾಗುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/337–38 – ಶ್ರೀ ಅರವಿಂದರು**

**ಹೊಸ ಜನ್ಮ ಅಂದರೇನು?**

ಹೊಸ ಜನ್ಮವೆಂದರೆ ಆಧ್ಯಾತ್ಮಕ ಜೀವನಕ್ಕೆ, ಆಧ್ಯಾತ್ಮಿಕ ಪ್ರಜ್ಞೆಗೆ ಕಾಲಿಡುವುದು. ಆರಂಭ ಮಾಡುವುದು. ಆತ್ಮದಲ್ಲಿರುವ (ಶಕ್ತಿಯನ್ನು) ವೈಯಕ್ತಿಕ ಜೀವನದಲ್ಲಿ ಅನುಷ್ಠಾನಕ್ಕೆ ತಂದು ಬದುಕನ್ನು ಸಂಪೂರ್ಣವಾಗಿ ಅದರ ಆಧೀನದಲ್ಲಿ ಇರಿಸಿಬಿಡುವುದು. ತನ್ನ ಸತ್ತೆಯನ್ನು ಕೂಡ ಆ ಶಕ್ತಿಯೇ ಆಳುವಂತೆ ಮಾಡುವುದು. ಆದರೆ, ಅತಿಮಾನಸ ಜಗತ್ತಿನಲ್ಲಿ ಆತ್ಮವೇ ಎಲ್ಲದರ ಪ್ರಭುವಾಗಿರುವುದು. ಸಮಸ್ತ ವ್ಯಕ್ತ ಜಗತ್ತಿನ ಸ್ವಾಮಿ ಅದೇ ಆಗಿರುವುದು. ಸಹಜವಾಗಿ, ತಾನೇ ತಾನಾಗಿ ಎಲ್ಲವನ್ನೂ ಪ್ರಜ್ಞಾಯುಕ್ತವಾಗಿಯೇ ನಡೆಸುವುದು.

ವೈಯಕ್ತಿಕ ಅಸ್ತಿತ್ವಕ್ಕೆ ಬಂದರೆ ಮಾತ್ರ ಆಗ ವ್ಯತ್ಯಾಸ ಕಂಡುಬರುವುದು. ಕೇವಲ ಆತ್ಮದ ಬಗ್ಗೆ ದೊಡ್ಡ ದೊಡ್ಡ ಮಾತನಾಡುವುದು, ಓದುವುದು, ಅಧ್ಯಯನ ಮಾಡುವುದು, ಅದರ ಬಗ್ಗೆ ಸ್ವಲ್ಪಮಟ್ಟಿಗೆ ತಿಳಿದುಕೊಂಡಿರುವುದು, ಇದೆಲ್ಲ ಸರಿ, ಆದರೆ ಪ್ರಜ್ಞೆಯಲ್ಲಿ ಗಟ್ಟಿಯಾಗಿ ಬೇರೂರಿರದೇ ಹೋಗಿದ್ದರೆ, ಆ ವ್ಯಕ್ತಿಯು ಆಧ್ಯಾತ್ಮಿಕ ಬದುಕಿಗೆ ಇನ್ನೂ ಜನ್ಮ ತಾಳಿಲ್ಲವೆಂದೇ ಅರ್ಥ. ಯಾವಾಗ ವ್ಯಕ್ತಿಯು ಆಧ್ಯಾತ್ಮಿಕ ಬದುಕಿಗೆ ಜನ್ಮ ತಾಳುವುನೋ ಆಗ ಭೌತಿಕ ಅಸ್ತಿತ್ವಕ್ಕಿಂತ ಅದೇ ಹೆಚ್ಚು ಜೀವಂತ, ಸ್ಪಷ್ಟ ಮತ್ತು ಸತ್ಯವಾದ ಸಂಗತಿಯಾಗಿ ಮಾರ್ಪಡುವುದು. ಇದೇ ಮುಖ್ಯವಾದ ಭೇದ. ಆತ್ಮವೇ ಸತ್ಯವೆಂಬ ಅರಿವು ಮೂಡಿದಾಗ, ಆಧ್ಯಾತ್ಮಿಕ ವಾತಾವರಣವನ್ನು ಮುಕ್ತವಾಗಿ ಜೀವಿಸಲು ಬಂದಾಗ, ತಾನು ಆಚೆಯ ಬದಿಗೆ, ಅಂದರೆ ಆಧ್ಯಾತ್ಮದ ಜೀವನಕ್ಕೆ ಕಾಲಿಟ್ಟಿರುವುದಾಗಿ ಅವನಿಗೆ ಅರಿವಾಗುವುದು. ಆದರೆ, ಎಲ್ಲಿಯವರೆಗೆ ನಿಮಗದು ಅಸ್ಪಷ್ಟ ಸಂಗತಿಯಾಗಿದೆಯೋ, ಅದರ ಬಗ್ಗೆ ಕೇಳಿದ್ದೀರಿ ಆದರೆ ದೃಢವಾದ ಅನುಭವ ಇಲ್ಲವೋ, ಅದು ಇದೆ ಎಂದು ಗೊತ್ತಿದೆ ಆದರೆ ಅದರ ಅಸ್ತಿತ್ವದ ಅನುಭವ ಇನ್ನೂ ಆಗಿಲ್ಲವೆಂದರೆ, – ಹೊಸ ಜನ್ಮ ಇನ್ನೂ ಬಂದಿಲ್ಲವೆಂದೇ ಅರ್ಥ. ಎಲ್ಲಿಯ ವರೆಗೆ ನೀವು "ನಾನಿದನ್ನು ಬಲ್ಲೆ, ನೋಡಬಲ್ಲೆ, ಮುಟ್ಟಬಲ್ಲೆ; ನನಗಾಗುವ ಹಸಿವಾಗಲೀ ನೋವಾಗಲೀ ನಿದ್ರೆಯಾಗಲೀ ನನ್ನನ್ನು ಜಡವಾಗಿ ಮಾಡುತ್ತವೆ, ಆದರೆ ಇದು, ಇದು ಸತ್ಯ, ಇದು ಗಟ್ಟಿ.." ಎಂದು (ಶ್ರೀಮಾತೆ ನಗುತ್ತಾರೆ) ಹೇಳುವಿರೋ ಅಲ್ಲಿಯ ತನಕ ನೀವಿನ್ನೂ ಆ ಕಡೆಗೆ ಹೋಗಿಲ್ಲ, ಆಧ್ಯಾತ್ಮಿಕ ಜನ್ಮ ತಾಳಿಲ್ಲ ಎಂದು ಅರ್ಥ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/430–31 – ಶ್ರೀಮಾತೆ**

## ಬಹಳಷ್ಟು ಜನ ಸೆರೆಯಾಳಾಗಿಯೇ ಬದುಕುತ್ತಾರೆ

ನಿಜವಾಗಿ ಬಹಳಷ್ಟು ಜನ ಸೆರೆಯಾಳುಗಳ ತರಹ ಎಲ್ಲ ಬಾಗಿಲು ಕಿಟಕಿ ಬಂದು ಮಾಡಿಕೊಂಡೇ ಬದುಕುತ್ತಾರೆ. ಸಹಜವಾಗಿ ಉಸಿರು ಗಟ್ಟುವಂಥ ವಾತಾವರಣದಲ್ಲಿ ಜೀವಿಸುತ್ತಾರೆ. ಬಾಗಿಲು ಕಿಟಕಿಗಳನ್ನು ತೆರೆಯಬಲ್ಲ ಬೀಗದ ಕೈ ಅವರ ಬಳಿಯೇ ಇರುತ್ತದೆ, ಆದರೆ ಅದನ್ನು ಬಳಸುವುದಿಲ್ಲ, ತಮ್ಮ ಬಳಿ ಇದೆ ಅನ್ನುವುದು ಕೂಡ ಗೊತ್ತಿಲ್ಲದಂತೆ ಬದುಕುತ್ತಾರೆ. ಹೇಗೋ ಗೊತ್ತಾಯಿತು, ಯಾರೋ ಹೇಳಿದರು, ಬಹು ದೀರ್ಘಕಾಲದ ನಂತರ ಗೊತ್ತಾಯಿತು ಅನ್ನಿ ಆಗಲೂ ಅವರು ಬಾಗಿಲು ತೆರೆಯುವುದಿಲ್ಲ. ಭಯ! ಬಾಗಿಲು ಕಿಟಕಿಗಳನ್ನು ತೆರೆಯುವ ಶಕ್ತಿ ಈ ಬೀಗದ ಕೈಯಲ್ಲಿ ಇದೆಯೋ ಇಲ್ಲವೋ? ತೆರೆಯುವುದು ಒಳ್ಳೆಯದೋ, ಕೆಟ್ಟದ್ದೋ? ಎಂಬ ಅಸ್ಪಷ್ಟ ಹೆದರಿಕೆ ಕಾಡುತ್ತದೆ. ತೆರೆಯುವುದೇ ಸರಿ, ಅದೇ ಒಳ್ಳೆಯದು ಎಂದು ಒಂದೊಮ್ಮೆ ಅನಿಸಿದರೂ, ಒಂದು ತೆರನಾದ ಭಯ, ಹಿಂಜರಿಕೆ ಇರುತ್ತದೆ. ಇಷ್ಟು ದಿನ ಮುಚ್ಚಿದ ಬಾಗಿಲು ತೆರೆದುಬಿಟ್ಟರೆ ಏನಾಗುವುದೋ ಯಾರಿಗೆ ಗೊತ್ತು; ಬೆಳಕಿನಲ್ಲಿ, ಸ್ವಾತಂತ್ರ್ಯದಲ್ಲಿ ನಾವೇ ಕಳೆದು ಹೋಗಿಬಿಟ್ಟರೆ? ಸುಮ್ಮನೆ ಇಲ್ಲದ ಉಸಾಬರಿ ಏಕೆ? ಈಗಿದ್ದೇವಲ್ಲ, ಇಷ್ಟಿದ್ದರೆ ಸಾಕು, ಹೀಗೆಯೇ ಇದ್ದರೆ ಚೆನ್ನ ಎಂಬ ಭೀತಿ. ತಮ್ಮ ಅಸತ್ಯ ತಮ್ಮ ಬಂಧನವನ್ನು ಅವರು ಇಷ್ಟ ಪಡುತ್ತಾರೆ. ಅವರೊಳಗಿನ ಯಾವುದೋ ಒಂದು ಅಂಶ ಅದನ್ನು ಇಷ್ಟಪಡುತ್ತದೆ. ಅಂತೆಯೇ ಅದಕ್ಕೆ ಜೋತು ಬೀಳುತ್ತದೆ. ಬಂಧನ, ಮಿತಿ ಇಲ್ಲದೇ ಹೋದರೆ ತಮ್ಮತನ ಎಲ್ಲಿ ಕಳೆದು ಹೋಗಿಬಿಡುವುದೋ ಎಂಬ ಆತಂಕ ಅವರಿಗೆ.

ಅಂತೆಯೇ ಇದು ತುಂಬ ಕಷ್ಟಕರವೂ ದೀರ್ಘವೂ ಆದ ಪಯಣವಾಗಿದೆ. ನಮ್ಮ ಇರುವುಕೆ ಕೊನೆಗೊಳ್ಳುವುದನ್ನು ಒಪ್ಪಿಕೊಂಡೆವೆಂದಾದರೆ, ಎಲ್ಲವೂ ಬದಲಾಗುವುದು. ಸುಲಭ, ಶೀಘ್ರ ಹಾಗೂ ಸಂತೋಷದಾಯಕವಾಗುವುದು. ಅಂದರೆ ಜನರು ತಿಳಿದುಕೊಂಡಿರುವಂಥ ರೀತಿಯ ಸುಖ ಅಲ್ಲ, ಅದು ಅಷ್ಟು ಸರಳವೂ ಅಲ್ಲ. ವಾಸ್ತವವಾಗಿ ಬಹಳ ಕಡಿಮೆ ಜನ ಹೋರಾಡಲು ಇಷ್ಟಪಡುವುದಿಲ್ಲ. ಬಹಳ ಜನರು ಕತ್ತಲೆ ಎಂಬುದು ವಸ್ತು ಅಥವಾ ಸಂಗತಿ ಅಲ್ಲವೆಂದು ಒಪ್ಪುವುದಿಲ್ಲ. ಕತ್ತಲೆ ಅಂದರೆ ಬೆಳಕು ಇರದ ಅಥವಾ ಕಡಿಮೆ ಇರುವ ಸ್ಥಳ ಎಂಬುದು ಗೊತ್ತಿದ್ದರೂ ಒಪ್ಪಿಕೊಳ್ಳುವುದಿಲ್ಲ. "ನೆರಳು ಇಲ್ಲದೇ ಹೋದರೆ ಚಿತ್ರ ಹೇಗೆ? ಹೋರಾಟ ಇಲ್ಲದೇ ವಿಜಯ ಹೇಗೆ ಸಾಧ್ಯ. ದುಃಖವಿಲ್ಲದೇ ಸುಖ ಸಿಗಲು ಸಾಧ್ಯವಿಲ್ಲ" ಎಂಬುದು ಸಾಮಾನ್ಯವಾಗಿ ಎಲ್ಲರ ನಂಬಿಕೆ. ಯಾರು ಎಲ್ಲಿಯ ವರೆಗೆ ಈ ರೀತಿ ಯೋಚನೆ ಮಾಡುತ್ತಾರೆಯೋ ಅಲ್ಲಿಯವರೆಗೆ ಅವರು ಆತ್ಮ ಪ್ರಜ್ಞೆಯಲ್ಲಿ ಜನ್ಮ ತಾಳುವುದಿಲ್ಲ.

# ಸ್ಮರಣೆಗಳು ಮತ್ತು ಉಪಾಖ್ಯಾನಗಳು

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

## ಚಂಪಕಲಾಲರವರ ಜನ್ಮದಿನ

ನನ್ನ ಜನ್ಮದಿನದ ಮುನ್ನಾ ದಿನವಾದ ಇಂದು ಶ್ರೀಮಾತೆಯವರು ನನ್ನ ಕುತ್ತಿಗೆಯ ಸುತ್ತ ತುಳಸಿ ಮಾಲೆಯನ್ನು ಕಟ್ಟಿ ಹೇಳಿದರು: "ಭಕ್ತಿಯಿಂದ ನಿನ್ನನ್ನು ನೀ ಕಟ್ಟಿಕೊ." ತುಳಸಿಗೆ ಭಕ್ತಿಯ ಪ್ರಾಧಾನ್ಯತೆಯನ್ನು ಕೊಟ್ಟಿರುವುದು ನಿಮಗೆ ಗೊತ್ತು.

**ಚಂಪಕಲಾಲರ ಮಾತುಗಳು: 1.2.1929**

## ದ್ಯುಮನ್‌ರವರ ಜನ್ಮ ದಿನ

ಆ ದಿನಗಳಲ್ಲಿ, ಕೆಳಗಡೆ ಅಂಗಳದಲ್ಲಿ ಜಮಾವಣೆಯಾದ ಆಶ್ರಮವಾಸಿಗಳಿಗೆ ಶ್ರೀಮಾತೆಯವರು ತಮ್ಮ ದರ್ಶನವನ್ನು ಒಂದು ಸಣ್ಣ ತಾರಸಿಯಿಂದ (ಮಾಧವ ರವರ ಕಛೇರಿಯ ಮೇಲಿರುವ) ಕೊಡುತ್ತಿದ್ದರು. ಶ್ರೀಮಾತೆಯವರ ಕೋಣೆಯ (ತಮ್ಮ ಸ್ವಂತ ಕೋಣೆಯ ಮೇಲಿರುವ) ಹೊರಗಡೆಯ ತಾರಸಿಯನ್ನು ಕಸಗೂಡಿಸುವ ಕೆಲಸ ದ್ಯುಮನ್‌ರವರದ್ದಾಗಿತ್ತು. ದ್ಯುಮನ್ ಮತ್ತು ಪೂಜಾಲಾಲ್ ರವರುಗಳ ಕಚೇರಿಯ ಕಡೆಯಿಂದ ಏಣಿಯನ್ನೇರಿ ಮೇಲೆ ಹೋಗುತ್ತಿದ್ದರು.

ದ್ಯುಮನ್ ಅವರ ತಾರಸಿ ಕಡೆಗಿರುವ ಶ್ರೀಮಾತೆಯವರ ಕೋಣೆಯ ಬಾಗಿಲು ಸಾಮಾನ್ಯವಾಗಿ ಮುಚ್ಚಲ್ಪಟ್ಟಿರುತ್ತಿತ್ತು; ಯಾಕೆಂದರೆ, ಸರಿಯಾಗಿ ಅದರ ಮಗ್ಗುಲಲ್ಲಿ ಕೆಲವೊಮ್ಮೆ ಶ್ರೀ ಅರವಿಂದರು ಪತ್ರ ವ್ಯವಹಾರವನ್ನು ಮಾಡಲಿಕ್ಕೆ ಕುಳಿತುಕೊಳ್ಳುತ್ತಿದ್ದರು. ಶ್ರೀಮಾತೆಯವರ ಆಸನವು ಪಶ್ಚಿಮ ಗೋಡೆಯ ಮುಂದೆ ಇತ್ತು. ಒಂದೊಂದು ಸಲ ಶ್ರೀಮಾತೆಯವರು ಮತ್ತು ಶ್ರೀ ಅರವಿಂದರು ಬೆಳಗಿನವರೆಗೂ ಕೆಲಸವನ್ನು ಮಾಡುತ್ತಿದ್ದರು. ದ್ಯುಮನ್ ಅವರು ಕಸ ಗೂಡಿಸುವಾಗ, ಶ್ರೀಮಾತೆಯವರಿಗೆ ಅವನೊಡನೆ ಮಾತನಾಡಬೇಕೆನಿಸಿದಾಗ, ಬಾಗಿಲನ್ನು ಸ್ವಲ್ಪವೇ ತೆರೆದು ಅದರಿಂದ ಇಣುಕಿ ಮಾತನಾಡುತ್ತಿದ್ದರು.

ಇಂದು ಶ್ರೀ ಅರವಿಂದರು 72 ಪತ್ರಗಳಿಗೆ ಉತ್ತರಿಸಿದ್ದಾರೆ, ಇದೊಂದು ಗಮನಾರ್ಹ ಸಂಗತಿ! ಎಂದು ಮಾತೆಯವರು ದ್ಯುಮನ್‌ರವರಿಗೆ ಹೇಳಿದರು.

“ಇಂದು ಬುಧವಾರ, ಪಾಕಶಾಲೆಯಲ್ಲಿ ವಿಶೇಷವಾದ ಅಡುಗೆ ಇದೆ ಮತ್ತು ನಿನ್ನ ಜನ್ಮದಿನವಿದೆ. ಆದ್ದರಿಂದ ವಿಶೇಷವಾದ ಅಡುಗೆಯನ್ನು ಮಾಡಲು ತಾರಾಳಿಗೆ ಹೇಳು,” ಎಂದು ಶ್ರೀಮಾತೆಯವರು ಅವರಿಗೆ ಹೇಳಿದರು. ಒಟ್ಟು ಹನ್ನೊಂದು ಭಕ್ಷ್ಯಗಳನ್ನು ತಯಾರಿಸಲಾಯಿತು.

**ಚಂಪಕಲಾಲರ ಮಾತುಗಳು: 19.6.1935**

## ಎರಡು ಕಮಲಗಳು

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

ಶ್ರೀಮಾತೆಯವರಿಗೆ ಏನೋ ಒಂದನ್ನು ಅರ್ಪಿಸಬೇಕೆಂದುಕೊಂಡಿದ್ದೆ. ಆದ್ದರಿಂದ, ಒಂದು ಬಿಳಿ ತಾವರೆ ಮತ್ತು ಒಂದು ಕೆಂಪು ತಾವರೆಯ ವರ್ಣಚಿತ್ರ ಬಿಡಿಸುವ ಕಲ್ಪನೆ ನನಗೆ ಬಂತು.

ವಿಚಿತ್ರವೆಂಬಂತೆ, ಎರಡು ಸುಂದರವಾದ ತಾವರೆ ಹೂಗಳನ್ನು ಪಡೆದುಕೊಂಡು ವರ್ಣಚಿತ್ರವನ್ನು ಬಿಡಿಸಲು ಪ್ರಾರಂಭಿಸಿದೆ. ಆದರೆ ಬೇರೆ ಕೆಲಸಗಳಿದ್ದುದರಿಂದ, ಒಂದೇ ದಿನದಲ್ಲಿ ಚಿತ್ರಬಿಡಿಸುವ ಕೆಲಸವನ್ನು ಪೂರ್ತಿ ಮಾಡಲಾಗಲಿಲ್ಲ. ಬೇರೆ ವರ್ಣಚಿತ್ರಗಳಂತೆ ಇವುಗಳನ್ನೂ ಸಹ ಮಧ್ಯಾಹ್ನದ ಊಟದ ಸಮಯದಲ್ಲಿ ಬಿಡಿಸಿದೆ. ಆ ಸಮಯದಲ್ಲಿ ಚಿತ್ರ ಬಿಡಿಸುವುದೆಂದರೆ ನನಗೆ ತುಂಬಾ ಖುಷಿ. ಅವುಗಳನ್ನು ಪೂರ್ತಿ ಮಾಡಲು ಕೆಲ ದಿನಗಳೇ ಬೇಕಾದವು.

ಒಂದೇ ಪ್ರಯತ್ನದಲ್ಲಿ ಬಣ್ಣವನ್ನು ಮಾಡಿದ್ದರೆ, ಅದು ಸ್ವಾಭಾವಿಕವಾಗಿಯೇ ಉತ್ತಮವಾಗಿರುತ್ತಿತ್ತು. ಆದರೂ, ಅದರ ಪರಿಣಾಮ ಅಷ್ಟೊಂದು ಕೆಟ್ಟದಾಗಿರಲಿಲ್ಲ. ಅತ್ಯಂತ ಉತ್ಸಾಹದಿಂದ ನಾನು ವರ್ಣಚಿತ್ರಗಳನ್ನು ನನ್ನ ಜನ್ಮದಿನವಾದ 2ನೇ ಫೆಬ್ರವರಿ 1940ರಂದು ಶ್ರೀಮಾತೆಯವರಿಗೆ ಅರ್ಪಿಸಲೆಂದು ತೆಗೆದುಕೊಂಡು ಹೋದೆ. ಶ್ರೀಮಾತೆಯವರು ಅವುಗಳನ್ನು ಸ್ವೀಕರಿಸಿ ಹೀಗೆ ಹೇಳಿದರು: “ಓಹ್! ಬಹಳ ಸುಂದರ! ಬಹಳ ಸುಂದರ!” ಅವುಗಳನ್ನು ಬಿಡಿಸಲು ನನಗೆ ಸಮಯ ಹೇಗೆ ಸಿಕ್ಕಿತೆಂದು ಆಶ್ಚರ್ಯಪಟ್ಟರು. ಅವುಗಳನ್ನು ತಮ್ಮೆರಡೂ ಕೈಗಳಿಂದ ಎತ್ತಿಕೊಂಡು ನಗುವಿನೊಂದಿಗೆ ಹೀಗೆ ಹೇಳಿದರು: “ನಾನು ಅವುಗಳನ್ನು ನಿನಗೇ ನೀಡಿದ್ದೇನೆ, ಚಂಪಕಲಾಲ್! ತೆಗೆದುಕೊ, ಅವುಗಳು ನಿನಗಾಗಿ. ಅವು ಸುಂದರವಾಗಿವೆ, ಅವುಗಳನ್ನು ನೀನು ಇಟ್ಟುಕೊ.”

ನಾನು ಮರುತ್ತರ ನೀಡಲಿಲ್ಲ ಮತ್ತು ಅವುಗಳನ್ನು ತೆಗೆದುಕೊಳ್ಳಲಿಲ್ಲ. ಅವರು ಮತ್ತೊಮ್ಮೆ ಹೇಳಿದರು: "ಅವುಗಳನ್ನು ತೆಗೆದುಕೊ, ಚಂಪಕಲಾಲ್, ಅವುಗಳನ್ನು ನನ್ನ ಕಾಣಿಕೆಯಾಗಿ ನಿನಗೆ ನೀಡುತ್ತಿದ್ದೇನೆ."

ಚಂಪಕಲಾಲ್: "ಆದರೆ, ಶ್ರೀಮಾತೆಯವರೆ! ಅವುಗಳನ್ನು ನಾನು ನಿಮಗಾಗಿ ತಯಾರಿಸಿದ್ದೇನೆ."

ನನ್ನ ಮನಸ್ಥಿತಿಯನ್ನು ಅರಿತುಕೊಂಡು, ಶ್ರೀಮಾತೆಯವರು ಒಂದು ಉಪಾಯವನ್ನು ಹುಡುಕಿದರು. ಅವರು ಮತ್ತೊಂದು ನಗೆ ಬೀರಿ, ಮೆಲುಧ್ವನಿಯಲ್ಲಿ ನಮ್ರವಾಗಿ ಹೇಳಿದರು: "ಚಂಪಕಲಾಲ್, ನಾನು ಇವುಗಳನ್ನು ಶ್ರೀ ಅರವಿಂದರ ಹತ್ತಿರ ತೆಗೆದುಕೊಂಡು ಹೋಗುತ್ತೇನೆ ಮತ್ತು ಅವುಗಳ ಮೇಲೆ ಬರೆಯುವಂತೆ ಕೇಳಿಕೊಳ್ಳುತ್ತೇನೆ."

ನಾನು ಹೇಳಿದೆ (ಚಂಪಕಲಾಲ್): "ಶ್ರೀಮಾತೆಯವರೆ! ಅವುಗಳನ್ನು ಶ್ರೀ ಅರವಿಂದರ ಹತ್ತಿರ ತೆಗೆದುಕೊಂಡು ಹೋಗುತ್ತಿದ್ದೀರಾ? ಹಾಗಾದರೆ, ಅವುಗಳ ಮಹತ್ವವನ್ನು ಬರೆಯುವಂತೆ ನೀವು ಹೇಳಿದರೆ ತುಂಬಾ ಒಳ್ಳೆಯದು. ಶ್ರೀಮಾತೆಯವರೆ! ಶ್ರೀ ಅರವಿಂದರು, ಶ್ವೇತ ತಾವರೆಯ ಚಿತ್ರದ ಮೇಲೆ ಬರೆಯಲಿ ಮತ್ತು ನೀವು ಕೆಂಪು ತಾವರೆಯ ಚಿತ್ರದ ಮೇಲೆ ಬರೆಯಿರಿ."

ಶ್ರೀಮಾತೆಯವರು ವರ್ಣಚಿತ್ರಗಳನ್ನು ಶ್ರೀ ಅರವಿಂದರ ಹತ್ತಿರ ತಂದಾಗ ನಾನು ಅಲ್ಲಿಯೇ ಇದ್ದೆ. ಅವರು ಅವುಗಳನ್ನು ಶ್ರೀ ಅರವಿಂದರಿಗೆ ತೋರಿಸಿ ಹೀಗೆ ಹೇಳಿದರು: "ನೋಡಿ, ಅವುಗಳು ಎಷ್ಟು ಸುಂದರವಾಗಿವೆ! ಇವತ್ತು ಚಂಪಕಲಾಲ್ ರವರ ಜನುಮ ದಿನ; ಈ ವರ್ಣಚಿತ್ರಗಳನ್ನು ಅವನು ನನಗಾಗಿ ಬಿಡಿಸಿದ್ದಾನೆ. ನೀವು ಅವುಗಳ ಮೇಲೆ ಮಹತ್ವವನ್ನು (ತಾವರೆಗಳ) ಬರೆದರೆ ನಾನು ಅವುಗಳನ್ನು ಅವನಿಗೆ ಕೊಡುತ್ತೇನೆ. ನೀವು ಶ್ವೇತ ತಾವರೆಯ (ವರ್ಣಚಿತ್ರ) ಮೇಲೆ ಬರೆಯಬೇಕೆಂದು ಮತ್ತು ನಾನು ಕೆಂಪು ತಾವರೆಯ ಮೇಲೆ ಬರೆಯಬೇಕೆಂದು ಅವನ ಅಪೇಕ್ಷೆ."

ಒಂದು ಸುಂದರವಾದ ನಗುವಿನೊಂದಿಗೆ "ಹುಂ" ಎಂದು ಹೇಳಿ ಶ್ರೀ ಅರವಿಂದರು ಶ್ವೇತ ತಾವರೆ ವರ್ಣಚಿತ್ರದ ಮೇಲೆ ಹೀಗೆ ಬರೆದರು:

**ಅದಿತಿ**

‘ಚಂಪಕಲಾಲ್’ನಿಗೆ

ಆಶೀರ್ವಾದಗಳೊಂದಿಗೆ

2.2.40

ಶ್ರೀ ಅರವಿಂದರು

ಅದನ್ನು ಬರೆದ ನಂತರ ಅವರು ನನ್ನೆಡೆ ನೋಡಿ ಮುಗುಳ್ನಕ್ಕರು. ನಂತರ, ಕೆಂಪು ತಾವರೆಯ ಮೇಲೆ ಶ್ರೀಮಾತೆಯವರು ಹೀಗೆ ಬರೆದರು:

**ಅವತಾರ**

ಶ್ರೀ ಅರವಿಂದರು

‘ಚಂಪಕಲಾಲ’ನಿಗೆ

ನನ್ನ ಪ್ರೀತಿಯ ಕಂದನಿಗೆ, ಆಶೀರ್ವಾದಗಳೊಂದಿಗೆ

2.2.40

ಶ್ರೀಮಾತೆಯವರು

ಈ ತಾವರೆಗಳನ್ನು ಯಾರಿಗೂ ತೋರಿಸಬಾರದೆಂದು ಶ್ರೀಮಾತೆಯವರು ನನಗೆ ಹೇಳಿದರು.

ಹಲವು ವರ್ಷಗಳ ನಂತರ ಈ ವರ್ಣಚಿತ್ರಗಳಿಂದ ಪಡಿಯಚ್ಚುಗಳನ್ನು ಮಾಡಿಸಿ ವಿತರಣೆಗಾಗಿ ಮುದ್ರಿಸಿದರು. ಒಂದು ಸಮಯದಲ್ಲಿ ಆ ವರ್ಣಚಿತ್ರಗಳನ್ನು ಯಾರಿಗೂ ತೋರಿಸಬಾರದೆಂದು ಏಕೆ ಹೇಳಿದ್ದರು ಎಂದು ನನ್ನನ್ನು ಕೇಳಬೇಡಿ. ನಿಸ್ಸಂಶಯವಾಗಿ ಸಂದರ್ಭಗಳು ಬದಲಾದವು ಮತ್ತು ಶ್ರೀಮಾತೆಯವರು ಮೊದಲ ಸಂದರ್ಭದಲ್ಲಿ ಭಿನ್ನವಾದ ಪರಿಸ್ಥಿತಿಗಳಲ್ಲಿ ಏನನ್ನು ಹೇಳಿದ್ದರೋ ಅದಕ್ಕೆ ಎಂದಿಗೂ ಗಟ್ಟಿಯಾಗಿ ನಿಲ್ಲಲಿಲ್ಲ. ಈ ರೀತಿಯ ಎಷ್ಟೋ ನಿದರ್ಶನಗಳಿವೆ.

## ಮೊದಲ ಮೂಲಪಾಠ (ವರ್ಣಮಾಲೆ)

ಇಂದು ಒಂದು ಮಗುವಿನ ಜನ್ಮದಿನವಿತ್ತು. ಆ ಮಗುವಿನ ಪೋಷಕರು, ತಮ್ಮ ಮಗು ಮೊದಲ ವರ್ಣಮಾಲೆಯನ್ನು ಶ್ರೀಮಾತೆಯವರಿಂದ ಕಲಿಯಬೇಕೆಂದು ಬಯಸಿದ್ದರು. ಶ್ರೀಮಾತೆಯವರು ದಯೆವುಳ್ಳವರು, ಅವರು ಆ ಮಗುವಿನ ಕೈಗೆ ಒಂದು ಪೆನ್ನನ್ನು ಕೊಟ್ಟು ಇಂಗ್ಲೀಷನಲ್ಲಿ 'ಓಂ' ಎಂದು ಬರೆಯುವಂತೆ ಮಾಡಿದರು.

*

## ಒಂದು ವಾನರನ ಜನ್ಮದಿನ

ಇವೊನ್‌ಳು ತಾನು ಸಾಕಿದ ಒಂದು ವಾನರನನ್ನು (ಅದರ ಹೆಸರು ಥೋಥ್ ಎಂದು) ಅದರ ಜನ್ಮದಿನದಂದು ಶ್ರೀಮಾತೆಯವರ ಹತ್ತಿರ ಕರೆದುಕೊಂಡು ಬಂದಿದ್ದಳು. ಸಂಗೀತ ಕಕ್ಷೆಯಲ್ಲಿ ಸಂದರ್ಶನವು ನಡೆಯಿತು. ಆಗ ನಾನು ಶ್ರೀಮಾತೆಯವರ ಪಕ್ಕದಲ್ಲಿದ್ದೆ.

ಥೋಥನು ಕೋಣೆಯಲ್ಲಿ ಬಂದ ಕ್ಷಣದಿಂದ ಶ್ರೀಮಾತೆಯವರೊಂದಿಗೆ ಅಷ್ಟೇ ಅಲ್ಲದೆ ನನ್ನೊಂದಿಗೂ ಸಹ, ನಾವು ಅವನಿಗೆ ಪರಿಚಯವಿದ್ದಂತೆ ವರ್ತಿಸಿದ, ಅದು ಕುತೂಹಲಕಾರಿಯಾಗಿತ್ತು. ಆತ ಶ್ರೀಮಾತೆಯವರ ಮಡಿಲಿನಲ್ಲಿ ಕುಳಿತುಕೊಂಡು ಕೈ ಜೋಡಿಸಿ ನಮಸ್ಕರಿಸಿದ ಮತ್ತು ಶ್ರೀಮಾತೆಯವರು ಅವನಿಗೆ ತಿನ್ನಲು ಶ್ರೀ ಅರವಿಂದರ ಕರುಣೆ ಹೂವನ್ನು ಕೊಟ್ಟರು; ಅವನು ಅದನ್ನು ಬಹಳ ಇಷ್ಟಪಟ್ಟ. ಅವನು ಸ್ವಲ್ಪ ಹೊತ್ತು ಆಟವಾಡಿ ನಂತರ ಕುಪ್ಪಳಿಸಿ ನನ್ನ ತಲೆಯ ಮೇಲೆ ಕುಳಿತುಕೊಂಡ ಮತ್ತು ನನ್ನೊಡನೆಯೂ ಸಹ ಆಟವಾಡಿದ! ಅತ್ಯಂತ ಮಾನವೀಯ!

ಸಾಧ್ಯವಿದ್ದಲ್ಲೆಲ್ಲ ಶ್ರೀಮಾತೆಯವರು ಸ್ವಲ್ಪ ಸಹಾಯವನ್ನು ಯಾವಾಗಲೂ ಮಾಡಿದ್ದರು.

**ಚಂಪಕಲಾಲರ ಮಾತುಗಳು: 102–06**

# ಚೈತನ್ಯಮಯೀ ಶ್ರೀಮಾತಾ

**– ಕೋ. ಚೆನ್ನಬಸಪ್ಪ**

*[2021ರ ಮಾರ್ಚ ಅವಧಿಗೆ ಶ್ರೀಮಾತಾರವಿಂದರ ಪ್ರಥಮ ಸಂದರ್ಶನಕ್ಕೆ 107 ವರ್ಷಗಳು ಪೂರ್ತಿಯಾಗುತ್ತಿವೆ. ನಿಯತಿಯ ಈ ಘಟನೆಯನ್ನು ದಿ. ಶ್ರೀ ಕೋ. ಚೆನ್ನಬಸಪ್ಪನವರು ತಮ್ಮ "ಚೈತನ್ಯಮಯೀ ಶ್ರೀಮಾತಾ" ಎನ್ನುವ ಗ್ರಂಥದಲ್ಲಿ ದಾಖಲಿಸಿದ್ದಾರೆ. ಈ ಪುಸ್ತಕವು 1988ರಲ್ಲಿ ಪ್ರಥಮ ಮುದ್ರಣ (ಕರ್ನಾಟಕ ನಿಲಯಂ, ಪುದುಚೇರಿ)ವಾಗಿದೆ. 2004ರಲ್ಲಿ ದ್ವಿತೀಯ ಮುದ್ರಣ (ಶ್ರೀ ಅರವಿಂದ ಪ್ರಕಾಶನ, ಬೆಂಗಳೂರು–86)ದಲ್ಲಿ ಪ್ರಕಾಶನಗೊಂಡಿದೆ. ಈ ಗ್ರಂಥದ ಪುಟ 79ರಿಂದ ಆಯ್ದ ಭಾಗಗಳನ್ನು ಇಲ್ಲಿ ರೂಪಿಸಲಾಗಿದೆ. (ಸಂ)]*

**"ಮೀರಾ ಮತ್ತು ರಿಷಾಡ್** ಪಾಂಡಿಚೇರಿಗೆ ತಲುಪಿದ ದಿನವೇ ಅಪರಾಹ್ನ 3.30 ಘಂಟೆಗೆ ಶ್ರೀ ಅರವಿಂದರ ದರ್ಶನಾರ್ಥವಾಗಿ 'ಅತಿಥಿ ಗೃಹಕ್ಕೆ' ಹೋದರು. ಪಶ್ಚಿಮ ದ್ವಾರದ ಮೂಲಕ ಅಂಗಳವನ್ನು ಪ್ರವೇಶಿಸಿ, ಮೆಟ್ಟಿಲು ಹತ್ತಿ ಮಹಡಿಯ ಕೊಠಡಿಯ ವರಾಂಡದಲ್ಲಿ ನಿಂತರು. ಮೆಟ್ಟಿಲುಗಳ ಬಳಿಯೇ ಶ್ರೀ ಅರವಿಂದರು ಕಾದು ನಿಂತಿದ್ದರು. ಬಂಧವರನ್ನು ಸ್ವಾಗತಿಸಿ ಅವರು ಕುರ್ಚಿಯಲ್ಲಿ ಕುಳಿತರು. ಮೀರಾ ತನ್ನ ಆಜನ್ಮ ಸಂಸ್ಕಾರವನ್ನು ಮರೆತು ಶ್ರೀ ಅರವಿಂದರಿಗೆ ದೀರ್ಘದಂಡ ಪ್ರಣಾಮ ಮಾಡಿದರು. ಮೀರಾ ಮತ್ತು ರಿಷಾಡ್ ಕೆಳಗೆ ಕುಳಿತರು. ಮೀರಾ ಪ್ಯಾರಿಸ್ಸಿನಲ್ಲಿ ಮನೋಚಕ್ಷುಗಳಿಂದ ಕಂಡು, ಚಿತ್ರ ಬಿಡಿಸಿದ ವ್ಯಕ್ತಿಯ ನಿರೀಕ್ಷಿಸಿದ್ದ ದರ್ಶನ ಸಿದ್ಧಿಸಿತ್ತು. ಮುಂದಾದುದನ್ನು ಅವರ ಮಾತಿನಲ್ಲಿಯೇ ಕೇಳೋಣ,

"ಶ್ರೀ ಅರವಿಂದರನ್ನು ನೋಡಿದ ಕೂಡಲೇ ನಾನು ಕೃಣನೆಂದು ಯಾರನ್ನು ಕರೆಯುತ್ತಿದ್ದೆನೊ ಆ ಸುಪರಿಚಿತ ವ್ಯಕ್ತಿಯನ್ನು ತಕ್ಷಣವೇ ಗುರುತಿಸಿದೆ.... ಭಾರತದಲ್ಲಿ ಅವರ ಸಾನಿಧ್ಯದಲ್ಲಿಯೇ ನನ್ನ ನೆಲೆ ಮತ್ತು ಕರ್ತವ್ಯವೆಂದು ನನಗೆ ದೃಢವಾಗಲು ಆ ಸಂದರ್ಶನವೊಂದೇ ಸಾಕು."[1]

ಶ್ರೀ ಅರವಿಂದರಾದರೂ ಮೀರಾಳನ್ನು ನೋಡಿದೊಡನೆಯೇ ಅವರಲ್ಲಿ ಶ್ರೀಮಾತೆಯ ಪ್ರಭೆಯೊಂದು ಬೆಳಗಿದುದನ್ನು ತಕ್ಷಣವೇ ಗುರುತಿಸಿದರು.

ಈ ಪ್ರಥಮ ಸಂದರ್ಶನದ ಅವಧಿಯಲ್ಲಿ ಯಾವ ಸಂಭಾಷಣೆಯೂ ನಡೆಯಲಿಲ್ಲ. ಸಂಭಾಷಣೆಯ ಅಗತ್ಯವೂ ಇರಲಿಲ್ಲ.

"ಶ್ರೀ ಅರವಿಂದರನ್ನು ನೋಡುವದಕ್ಕಿಂತ ಮೊದಲು ಈ ಜಗದೋದ್ಧಾರಕ್ಕಾಗಿ ಮಾಡಬೇಕಾದ – ಸಾಮಾಜಿಕ, ಧಾರ್ಮಿಕ, ಎಷ್ಟೋ ಸುಂದರ ಪ್ರಬಲ ಭಾವನೆಗಳನ್ನು ಅವರು(ಮೀರಾ) ಇಟ್ಟುಕೊಂಡಿದ್ದರು. ಶ್ರೀ ಅರವಿಂದರನ್ನು ನೋಡಿದೊಡನೆಯೇ ತಮ್ಮ ಮನೋವ್ಯಾಪಾರ, ಮನಃಕಲ್ಪಿತ ಭಾವನೆಗಳೆಲ್ಲ ನಿಂತುಹೋಗಲಿ ಎಂದು ಹಾರೈಸಿದರು. ಒಂದೂ ಮಾತನಾಡಲಿಲ್ಲ. ಇವರಾದರೂ (ಶ್ರೀ ಅರವಿಂದರು) ಮಾತನಾಡಲಿಲ್ಲ. ಅವರು ಶ್ರೀ ಅರವಿಂದರ ಪಾದಮೂಲದಲ್ಲಿ ಕಣ್ಮುಚ್ಚಿಕೊಂಡು, ತಮ್ಮ ಮನವನ್ನು ಅವರ ಪ್ರಭಾವದಿಂದ ತುಂಬಲು ತೆರೆದುಕೊಂಡರು. ಸ್ವಲ್ಪ ಸಮಯದ ನಂತರ ಮೇಲಿನಿಂದ ಒಂದು ಅನಂತ ನಿಶ್ಶಬ್ದವು ಬಂದು ಅವರ ಮನದಲ್ಲಿ ನೆಲೆಸಿತು. ಆ ಸುಂದರವಾದ ಮನದಿಂದ, ಇತರ ಘನವಾದ ಭಾವನೆಗಳೆಲ್ಲವೂ ಅಳಿದುಹೋದವು."[2]

ಮೀರಾ ಅವರಿಗೆ ಹೀಗಾದರೆ ಶ್ರೀ ಅರವಿಂದರಿಗೆ ಏನು ಅನಿಸಿತು? ಅದನ್ನು ನಳಿನೀಕಾಂತ ಗುಪ್ತರು ಹೀಗೆ ವರ್ಣಿಸಿದ್ದಾರೆ;

"ಶ್ರೀ ಅರವಿಂದರು ಮೀರಾ ಅವರ ಬಗ್ಗೆ ತಮ್ಮ ಪ್ರಥಮ ಪ್ರತಿಕ್ರಿಯೆಯನ್ನು ವರ್ಣಿಸುತ್ತಾ, ಅಷ್ಟೊಂದು ಪರಿಪೂರ್ಣ ಮತ್ತು ಆತ್ಯಂತಿಕ ಪ್ರಪತ್ತಿಪೂರ್ಣ ಆತ್ಮಸಮರ್ಪಣೆಯನ್ನು ತಾವು ಎಂದೂ ಕಂಡಿರಲಿಲ್ಲ ಎಂದು ಅವರು ಹೇಳುತ್ತಾರೆ. 'ಅಂತಹ ಆತ್ಮಸಮರ್ಪಣೆ ಸಂಪೂರ್ಣ ಸಮರ್ಪಣೆ ಬಹುಶಃ ಸ್ತ್ರೀಯಿಂದಲೇ ಸಾಧ್ಯವೆಂದು ಕಾಣುತ್ತದೆ' ಎಂದೂ ಹೇಳಿದರು. ಇದರ ಇಂಗಿತವೇನೆಂದರೆ ತಮ್ಮ ಗತ ಜೀವನದ ಸುಕೃತ ದುಷ್ಕೃತ್ಯಗಳನ್ನೆಲ್ಲ ಸಂಪೂರ್ಣ ಅಳಿಸಿ ಹಾಕಿದರು. ಮಗುವಿನ ಬಿಚ್ಚು ಮನಸ್ಸಿನಿಂದ ಶ್ರೀ ಅರವಿಂದರ ಸೆರಗಿನಲ್ಲಿ ಬಿದ್ದುಬಿಟ್ಟರು. ತನ್ನ ಗತ ಜೀವನವೆಲ್ಲವನ್ನೂ – ತಮ್ಮ ಆಧ್ಯಾತ್ಮಿಕ ಸಾಧನೆಯ ಸಿದ್ಧಿಯೆಲ್ಲವನ್ನೂ ತನ್ನ ಚೇತನದ ಐಶ್ವರ್ಯವನ್ನೆಲ್ಲ ತ್ಯಜಿಸಿ – ಸಮರ್ಪಿಸಿಕೊಂಡರು."[3]

ಮೀರಾ, ಮಾತಾಜಿ ಆದ ಮೇಲೆ ಈ ಸುಮುಹೂರ್ತವನ್ನು ಸ್ಮರಿಸಿಕೊಂಡು ಹೀಗೆ ಹೇಳುತ್ತಾರೆ; 'ನಾನು ಶ್ರೀ ಅರವಿಂದರನ್ನು ಪಾಂಡಿಚೇರಿಯಲ್ಲಿ ಪ್ರಥಮ ಬಾರಿ ದರ್ಶನ ಮಾಡಿದಾಗ ನಾನು ಗಾಢವಾದ ಏಕಾಗ್ರತೆಯಲ್ಲಿದ್ದೆ. ಆಗ ಅತಿಮನದಲ್ಲಿ ಮುಂದೆ ಆಗಬೇಕಾಗಿದ್ದ, ಆದರೆ ಹೇಗೋ ಏಕೊ ಇನ್ನೂ ಆವಿಷ್ಕಾರ ಆಗದಿದ್ದ ಎಷ್ಟೋ ಸಂಗತಿಗಳನ್ನು ಕಂಡೆ.

"ನಾನು ಆ ಏಕಾಗ್ರತಾ ಸ್ಥಿತಿಯಲ್ಲಿ ಇದ್ದಾಗ ಕಂಡದ್ದನ್ನು ಶ್ರೀ ಅರವಿಂದರಿಗೆ ಹೇಳಿ ಅವು ಆವಿಷ್ಕಾರ ಆಗುತ್ತವೆಯೇ ಎಂದು ಕೇಳಿದೆ. ಅವರು ಕೂಡಲೇ

"ಆಗುತ್ತವೆ" ಎಂದರು. ಅತಿಮನಸ್ಸು ಪೃಥ್ವಿಯನ್ನು ಸ್ಪರ್ಶಿಸಿದೆ ಎಂದೂ, ಅದು ಸಿದ್ಧಿಯಾಗುವುದೆಂದೂ ನಾನೂ ತಕ್ಷಣವೇ ಕಂಡೆ".[4]

ಮರುದಿನ ಮಾರ್ಚ 30, 1914. ಮಾತಾಜಿ ತಮ್ಮ ಪ್ರಾರ್ಥನಾ ದಿನಚರಿಯಲ್ಲಿ ಶ್ರೀ ಅರವಿಂದರ ದರ್ಶನದ ತಮ್ಮ ಅನುಭವವನ್ನು ಹೀಗೆ ಬರೆಯುತ್ತಾರೆ, "ಅತ್ಯಂತ ದಟ್ಟ ಅವಿದ್ಯೆಯಲ್ಲಿ ಮುಳುಗಿರುವ ಸಹಸ್ರಾರು ವ್ಯಕ್ತಿಗಳಿದ್ದರೂ ಅದರಿಂದ ಏನೂ ಆಗಲಾರದು. ಯಾಕೆಂದರೆ ನಿನ್ನೆ ನಾವು ನೋಡಿದ ಆ ಒಬ್ಬ ವ್ಯಕ್ತಿಯು ಈ ಲೋಕದಲ್ಲಿದ್ದಾರೆ ಎಂಬುದೇ ಕಗ್ಗತ್ತಲು ರೂಪಾಂತರವಾಗಿ ಬೆಳಕು ಹರಿಯುವ ದಿನ ಬಂದೇ ಬರುತ್ತದೆ ಹಾಗೂ ಭೂಮಿಯ ಮೇಲೆ ನಿನ್ನ ಪ್ರಭುತ್ವವು ಸ್ಥಾಪನೆ ಆಗುತ್ತದೆ ಎನ್ನುವದಕ್ಕೆ ಅವರ ಸಾನಿಧ್ಯವೇ ಸಾಕ್ಷಿ".

ಆ ದಿನಗಳನ್ನು ನೆನೆದು ಮುಂದೆ ಅರವತ್ತು ವರ್ಷಗಳ ನಂತರ, "ಪ್ರಥಮ ಬಾರಿ ನಾನು ಶ್ರೀ ಅರವಿಂದರನ್ನು ನೋಡಿದೊಡನೆಯೇ, ಇಲ್ಲಿ ದೇವನಿದ್ದಾನೆ ಎಂದು ತಕ್ಷಣವೇ ತಿಳಿದುಕೊಂಡೆ. ಅದೊಂದು ಸಾಕ್ಷಾತ್ಕಾರವಾಗಿತ್ತು. ಇಲ್ಲಿ ದೈವ ಇದೆ ಎಂದು ದಿಟವಾದ ಮೇಲೆ ಯಾವುದೇ ಬಗೆಯ ಸಂದೇಹ, ಪ್ರಶ್ನಿಸುವಂತಹ ವಿಷಯ ಏನಾದರೂ ಉಳಿಯುವದಾದರೂ ಹೇಗೆ? ನನ್ನ ಹೃದಯದ ಭಾರವನ್ನೆಲ್ಲ ಅವರ ಮುಂದೆ ಇಳಿಸಿ, ಅತ್ಯಂತ ಹರ್ಷ, ಆನಂದವನ್ನು ಪಡೆದು ಸುಖಿಯಾದೆ. ಇವರು ಹೇಳಿದ್ದೆಲ್ಲವೂ ಸತ್ಯವೇ ಇದೆ ಎಂದು ಒಪ್ಪಿಕೊಂಡೆ. ಸಂಶಯಕ್ಕೆ ಎಳ್ಳಷ್ಟೂ ಎಡೆಯಿರಲಿಲ್ಲ. ನನ್ನ ಭಾವನೆಗಳೆಲ್ಲ ಮನಃಕಲ್ಪಿತ ಭ್ರಮೆಯೆಂದು ಅವರು ಹೇಳಿದೊಡನೆಯೇ ಆ ಭ್ರಮಾಲೋಕದಲ್ಲಿ 14 ವರ್ಷ ಜೀವಿಸಿದ್ದರೂ ಅವೆಲ್ಲ ಕೂಡಲೇ ಕಡಿದುಕೊಂಡು ಬಿದ್ದವು."[5]

ಮೀರಾ ಪ್ಯಾರೀಸನಲ್ಲಿ ಇದ್ದಾಗ ಆಧ್ಯಾತ್ಮಿಕ ಸಾಹಿತ್ಯವನ್ನು ಆಳವಾಗಿಯೇ ಅಭ್ಯಾಸ ಮಾಡಿದ್ದರೆನ್ನುವದನ್ನು ಈ ಹಿಂದೆ ಗಮನಿಸಿದ್ದೇವೆ. ಭಾರತೀಯ ತತ್ತ್ವ ಶಾಸ್ತ್ರದಲ್ಲಿ ಸಮಾಧಿಯ ವಿಚಾರವಾಗಿ ಪುಂಖಾನುಪುಂಖವಾಗಿ ವ್ಯಾಖ್ಯಾನಿಸಿರುವದು ಲೋಕ ವಿಖ್ಯಾತವಿದೆ. ಈ ಬಗ್ಗೆ ಶ್ರೀ ಅರವಿಂದರು ಏನು ಹೇಳುವರೋ ಎಂಬ ಆಸಕ್ತಿ ಮೀರಾಗೆ ಇತ್ತು. ಅವರಿಗೆ ಇಂಥ ಸಮಾಧಿಯ ಅನುಭವ ಆಗಿರಲಿಲ್ಲ. ಇದು ಕೆಳಮಟ್ಟದ ಲಕ್ಷಣವೆ ಎಂದು ಒಮ್ಮೆ ಕೇಳುತ್ತಾರೆ;

"ನಾನು ಇಲ್ಲಿಗೆ ಬಂದಾಗ ಶ್ರೀ ಅರವಿಂದರನ್ನು ಮೊಟ್ಟಮೊದಲು ಕೇಳಿದ ಪ್ರಶ್ನೆಗಳಲ್ಲಿ ಒಂದು – ಸಮಾಧಿಯ ಬಗೆಗೆ ನಿಮ್ಮ ಅಭಿಪ್ರಾಯ ಏನು? ನೆನಪು

ಉಳಿಯದ ಆ ಪರವಶದ ಸ್ಥಿತಿ ಎಂಥಾದ್ದು? ಯಾವುದೋ ಒಂದು ಆನಂದಮಯ ಸ್ಥಿತಿಯಲ್ಲಿ ಪ್ರವೇಶಿಸಿದಂತಾಗುತ್ತದೆ. ಅದರಿಂದ ಹೊರಬಂದ ಮೇಲೆ ಏನಾಯಿತು ಎಂಬುದರ ನೆನಪು ಏನೇನೂ ಇರುವದಿಲ್ಲ".

ಆಗ ಅವರು ನನ್ನತ್ತ ನೋಡಿ, ನನ್ನ ಇಂಗಿತ ಏನೆಂಬುದನ್ನು ಗ್ರಹಿಸಿ, 'ಅದು ಪ್ರಜ್ಞಾಹೀನ ಸ್ಥಿತಿ' ಎಂದು ಹೇಳಿದರು. ಅದನ್ನು ವಿವರವಾಗಿಯೇ ಕೇಳಬೇಕೆಂದು 'ಹಾಗೆಂದರೇನು' ಎಂದೆ. ಅದಕ್ಕವರು 'ಸಮಾಧಿ ಎಂದು ಕರೆಯುವ ಸ್ಥಿತಿಗೆ ಪ್ರವೇಶಿಸಿದಾಗ ನಿನ್ನ ಪ್ರಜ್ಞಾ ಸತ್ತೆಯಿಂದ ಹೊರಗೆ ಹೋಗಿ, ನಿನ್ನ ಇನ್ನೊಂದು ಸಂಪೂರ್ಣ ಪ್ರಜ್ಞಾಹೀನ ಸ್ಥಿತಿಯೊಳಗೆ ಪ್ರವೇಶಿಸುವೆ ಅಥವಾ ನಿನ್ನ ಜಾಗ್ರತ ಪ್ರಜ್ಞಾವಸ್ಥೆಗೆ ಹೋಲುವಂತಹ ಚೇತನ ಅಲ್ಲಿರುವದಿಲ್ಲ. ನಿನ್ನ ಪ್ರಜ್ಞಾ ಕ್ಷೇತ್ರದಿಂದ ಆಚೆ ಹೋಗಿ ಪ್ರಜ್ಞೆ ಲುಪ್ತವಾಗಿ ಬಿಡುತ್ತದೆ. ಆಗ ನೀನು ಅಪರುಷ ಸ್ಥಿತಿಯಲ್ಲಿ ಇರುತ್ತೀ. ಅಂದರೆ ನೀನು ಪ್ರಜ್ಞಾಹೀನ ಸ್ಥಿತಿಯಲ್ಲಿ ಇರುವೆ. ಆದ್ದರಿಂದಲೇ ಸಹಜವಾಗಿ (ಅದರಿಂದ ಹೊರಬಂದ ಮೇಲೆ) ಅದರ ನೆನಪು ಏನೂ ಉಳಿದಿರುವದಿಲ್ಲ. ಯಾಕೆಂದರೆ ಯಾವುದರ ಪ್ರಜ್ಞೆಯೂ ಆಗ ನಿನಗಿರುವದಿಲ್ಲ.'

'ಇಂತಹ ಅನುಭವ ನನಗೆಂದಿಗೂ ಆಗಿಲ್ಲ' ಎಂದು ನಾನು ಹೇಳಿದಾಗ, ಅವರು 'ನನಗಾದರೂ ಆಗಿಲ್ಲ' ಎಂದರು.[6]

ಮುಂದೊಮ್ಮೆ ಶ್ರೀ ಅರವಿಂದರೇ ಹೇಳಿದಂತೆ, ಅವರು ಅಪಾರವಾಗಿ ಗ್ರಂಥಾಧ್ಯಾಯನ ಮಾಡಿ, ತತ್ತ್ವಶಾಸ್ತ್ರ ವಿದ್ವಾಂಸರಂತೆ ಘನವಾದ ಪಾಂಡಿತ್ಯವನ್ನು ಸಂಪಾದನೆ ಮಾಡಿದ್ದಾರೆಂದು ತಿಳಿಯಿತು. ಅವರು ಫ್ರಾನ್ಸಿನಲ್ಲಿ ಇದ್ದಾಗ, ಗೀತೆ, ಉಪನಿಷತ್ತುಗಳು, ಯೋಗ ಸೂತ್ರಗಳು, ನಾರದ ಭಕ್ತಿ ಸೂತ್ರ, ಮುಂತಾದ ಆಧ್ಯಾತ್ಮ ಸಾಹಿತ್ಯವನ್ನು ಭಾಷಾಂತರಿಸಿದ್ದಾರೆಂದು ತಿಳಿದು ಇನ್ನೂ ಆಶ್ಚರ್ಯವಾಯಿತು.

---

1. The Mother on Herself p. 43
2. On the Mother, Vol 1 ಕೆ.ಆರ್. ಶ್ರೀ ಅಯ್ಯಂಗಾರ ಪುಟ 85
3. Reminiscences –by Nalinikant Gupta p.81
4. Mother on Herself p.47-48
5. Glimps of the Mother's Life p.132,133
6. Glimps of the Mother's Life p.134

# ದಿವ್ಯ ಜೀವನ

## (ಅನುಸ್ಪಂದನ–4)

**– ಜಾನ್ವಿ**

### ಸರ್ವವ್ಯಾಪಿಯಾದ ಸತ್ತೆ

ವಿಶುದ್ಧ ಆತ್ಮವು ನಮ್ಮೊಳಗೆ ತನ್ನ ಸ್ವಭಾವಗತ ಸಂಪೂರ್ಣ ಸ್ವಾತಂತ್ರ್ಯವನ್ನು ಪ್ರಕಟಿಸಲು ಬಯಸುತ್ತದೆ; ವಿಶ್ವ ಮೃತ್ತಿಕೆ ಅಥವಾ ಜಡ ಪದಾರ್ಥವು ನಮ್ಮ ಪ್ರಕಟಣೆಯ ಆಧಾರವೂ, ರೂಪಾಕಾರಗಳನ್ನು ಎರಕ ಹೊಯ್ಯುವ ಅಚ್ಚು ಆಗಿಯೂ ಇರಲು ಹಕ್ಕೊತ್ತಾಯ ಮಾಡುತ್ತದೆ. ನಾವು ಈ ಎರಡೂ ಬೇಡಿಕೆಗಳನ್ನು ಮನ್ನಿಸಿದ್ದೇವಾದ್ದರಿಂದ, ತೀರ ವಿರುದ್ಧವೆಂದು ತೋರುವ ಇವುಗಳನ್ನು ಸಮನ್ವಯಗೊಳಿಸುವ ಸತ್ಯವನ್ನು ಕಂಡುಹಿಡಿಯಬೇಕಾಗಿದೆ. ನಿಯಮ, ಬೇಡಿಕೆ, ಹಕ್ಕೊತ್ತಾಯ, ಪ್ರಾರ್ಥನೆ ಹೀಗೆ ಏನೇ ಇರಲಿ, ಅದು ಮಾನವನ ಮನಸ್ಸಿಗೆ ತೀವ್ರವಾಗಿ ನಾಟುತ್ತಿದೆ ಅಂದರೆ, ಅಲ್ಲಿ ಕೇವಲ ತಪ್ಪು, ಭ್ರಮೆ ಇರಲು ಸಾಧ್ಯವಿಲ್ಲ, ಅಲ್ಲಿ ಸತ್ಯ ರಹಸ್ಯವಾಗಿ ಅಡಗಿರಲೇಬೇಕು. ಹೀಗಿರುವಾಗ ಪ್ರಬಲವಾದ ಬೇಡಿಕೆಗಳನ್ನು ತಳ್ಳಿ ಹಾಕಲಾಗದು. ಆದರೆ ಜಡ ಪದಾರ್ಥ ಮತ್ತು ಆತ್ಮ ಚೈತನ್ಯ ಎರಡನ್ನೂ ಸಮನ್ವಯ ಮಾಡುವುದು ಸುಲಭವೇನಲ್ಲ. ಹೇಗಾದರೂ ಮಾಡಿ, ಅಲ್ಲಿ ಇಲ್ಲಿ ತೇಪೆ ಹಚ್ಚಿದಂತೆ ಮಾಡಿ ಸಂಧಾನ ಮಾಡಬಹುದೇನೋ; ಆದರೆ ಅದು ಶಾಶ್ವತ ಪರಿಹಾರವಾಗದು. ನಿಜವಾದ ಸಮನ್ವಯ ಆಂತರಿಕ ತಾದಾತ್ಮ್ಯದಿಂದ ಬರಬೇಕು.

ವಿಶ್ವ ಪ್ರಜ್ಞೆಯಲ್ಲಿ ಜಡ ಪದಾರ್ಥಕ್ಕೆ ಆತ್ಮವು ಸತ್ಯವಾಗಿಯೂ, ಆತ್ಮಕ್ಕೆ ಜಡ ದ್ರವ್ಯವೂ ಸತ್ಯವಾಗಿಯೂ ತೋರುವಂಥ ಸಮಾಗಮ ಬಿಂದುವನ್ನು ನಾವೀಗಾಗಲೇ ಕಂಡುಕೊಂಡುದ್ದೇವೆ. ಏಕೆಂದರೆ ಅಲ್ಲಿ ಪ್ರಾಣ ಮತ್ತು ಮನಸ್ಸು ಮಧ್ಯವರ್ತಿ ತತ್ವಗಳಷ್ಟೇ ಹೊರತು, ವಿಭಜನೆ ಮಾಡುವ, ಬೇರ್ಪಡಿಸುವ ತತ್ವಗಳಲ್ಲ. ವಿಶ್ವಪ್ರಜ್ಞೆಯನ್ನು ಪಡೆದ ಮನಸ್ಸು, ಏಕತೆ ಮತ್ತು ಅನೇಕತೆಗಳನ್ನು ಒಂದೇ ಎಂದು ಕಾಣಬಲ್ಲ ಬೆಳಕನ್ನು ಹೀರಿಕೊಂಡು ಬೆಳೆಯುತ್ತದೆ, ಅವೆರಡರ ನಡುವಿನ ಸಂಬಂಧದ ಸೂತ್ರವನ್ನು, ಸಂಪರ್ಕದ ಸೇತುವೆಯನ್ನು ಕಂಡುಕೊಂಡು ಅವುಗಳ ನಡುವಿನ ದೈವೀ ಸಾಮರಸ್ಯವನ್ನು ಗುರುತಿಸುತ್ತದೆ. ಆಗ ಅದು

ಭಗವಂತ ಮತ್ತು ಜಗದ ಜೀವನದ ನಡುವೆ ಗಟ್ಟಿಯಾದ ಬಂಧವನ್ನು ಬೆಸೆಯುವ ಉಪಕರಣವಾಗುತ್ತದೆ. ಸಾಕ್ಷಾತ್ಕಾರ ಹೊಂದಿದ ಮನಸ್ಸಿಗೆ, ಜಡ ಪದಾರ್ಥವು ಆತ್ಮಚೈತನ್ಯದ ಸಾಕಾರರೂಪವಾಗಿಯೂ, ಶರೀರವಾಗಿಯೂ ತೋರುವುದು ಅದೇ ರೀತಿ ಆತ್ಮವೂ ಸಹ, ಅದೇ ಮನಃಪ್ರಾಣ ಶರೀರಗಳೆಂಬ ಉಪಕರಣಗಳ ಮೂಲಕ ಜೀವಾತ್ಮವಾಗಿ, ಸತ್ಯವಾಗಿ, ಸತ್ವವಾಗಿ ಕಾಣಿಸಿಕೊಳ್ಳುತ್ತದೆ. ಆಗ ಜಡ ಪದಾರ್ಥ ಮತ್ತು ಆತ್ಮ ಎರಡೂ ಪರಸ್ಪರ ಸತ್ಯ, ದೈವೀ ಏಕತೆಯ ಘಟಕಗಳೆಂದು ಒಪ್ಪಿಕೊಳ್ಳುತ್ತವೆ. ಅವೆರಡೂ ಪರಮೋಚ್ಚ ಪ್ರಜ್ಞೆಯ ಅಥವಾ ಚಿತ್‌ಶಕ್ತಿಯ ಮಾಧ್ಯಮಗಳೆಂಬ ಅರಿವಾಗುತ್ತದೆ. ಆ ಸತ್ಯವೇ ಭೌತಿಕ ಜಗದಲ್ಲಿ ಸರ್ವತ್ರ ಪ್ರಕಟವಾಗಿದೆ, ಅದೇ ಏಕೈಕ ಅಸ್ತಿತ್ವ ಎಂಬ ಗಟ್ಟಿಯಾದ ಅನುಭವವೂ ಆಗುತ್ತದೆ. ಏಕತೆ ಮತ್ತು ಅನೇಕತೆಗಳ ನಡುವಿನ ವೈರುಧ್ಯ ಮಾಯವಾಗಿ ಅವುಗಳ ನಡುವಿನ ಅವಿಭಕ್ತಿತೆಯ ಸಾಕ್ಷಾತ್ಕಾರವಾಗುತ್ತದೆ.

ಈ ಬೆಳಕಿನಲ್ಲಿ ನೋಡಿದಾಗ ನಮಗೆ ಈ ಭೂಮಿಯ ಮೇಲೆ ದಿವ್ಯ ಜೀವನದ ಸಾಧ್ಯತೆಯ ಬಗ್ಗೆ ವಿಶ್ವಾಸ ಮೂಡುತ್ತದೆ. ವಿಜ್ಞಾನವು ವಿಶ್ವಾತ್ಮವು ವಿಕಾಸದ ಅರ್ಥವಂತಿಕೆಯನ್ನು, ಜೀವಂತಿಕೆಯನ್ನು ಅನಾವರಣಗೊಳಿಸಲು ಪ್ರಯತ್ನ ಮಾಡುತ್ತಿದ್ದರೆ, ಎಲ್ಲ ಧರ್ಮಗಳು ಮತ್ತು ಆಧ್ಯಾತ್ಮಿಕ ಚಿಂತನೆಯು ಮಾನವನನ್ನು ದೇವ ಮಾನವನನ್ನಾಗಿ ಮಾಡಲು ಹವಣಿಸುತ್ತಿವೆ ಎಂಬ ಸತ್ಯದ ಅರಿವಾಗುತ್ತದೆ.

ಹಾಗಾದರೆ, ನಿಷ್ಕ್ರಿಯ, ನಿಶ್ಚಲ ಆತ್ಮ, ವಿಶುದ್ಧ, ಸ್ವಯಂಭೂ ಮತ್ತು ಸ್ವಾನಂದರತ ಆತ್ಮವೇ ಏಕೈಕ ಸತ್ಯವೆಂಬ ವೈರಾಗ್ಯದ ಪರಿಕಲ್ಪನೆಯನ್ನು ಹೇಗೆ ಸಮನ್ವಯ ಮಾಡುವುದು? ಎಂಬ ಪ್ರಶ್ನೆ ಬರುತ್ತದೆ. ಆದರೆ ಅದೇನೂ ಅಂಥ ಪರಿಹರಿಸಲಾಗದ ಸಮಸ್ಯೆ ಏನಲ್ಲ. ನಿಷ್ಕ್ರಿಯ ಮತ್ತು ಸಕ್ರಿಯ ಬ್ರಹ್ಮ ಎರಡೂ ಬೇರೆ ಬೇರೆ ಅಲ್ಲ, ಅವೆರಡೂ ಏಕೈಕ ಬ್ರಹ್ಮನ ಎರಡು ಮುಖಗಳು, ಅವು ಪರಸ್ಪರ ವಿರೋಧ ಅಲ್ಲ. ನಿಷ್ಕ್ರಿಯ ಮೌನದೊಳದಿಂದ ಜಗತ್ತು ನಿರಂತರ ಪ್ರಕಟವಾಗುತ್ತ ಮುಂದುವರಿಯುತ್ತಿರುತ್ತದೆ. ಶಬ್ದವು (ಅಥವಾ ನಾದವು) ಮೌನದೊಳಗಿರುವುದನ್ನು ಪ್ರಕಟಪಡಿಸಿ ತೀರಿಸುವಂತೆ, ನಿಷ್ಕ್ರಿಯ ಬ್ರಹ್ಮದೊಳಗಿನಿಂದ ಜಗತ್ತು ಪ್ರಕಟವಾಗಿ ತೋರುತ್ತದೆ. ಮೂಲದಲ್ಲಿರುವ ನಿಷ್ಕ್ರಿಯ ಅಥವಾ ತಟಸ್ಥ ಸ್ಥಿತಿಯಿಂದಾಗಿಯೇ ಅಸಂಖ್ಯಾತ ವಿಶ್ವ ವ್ಯವಸ್ಥೆಗಳು, ಕ್ರಿಯೆಗಳು ರೂಪತಾಳಲು ಸಾಧ್ಯವೆಂಬ

ಸಂಗತಿಯನ್ನು ನಾವು ತಿಳಿದುಕೊಳ್ಳಬೇಕು. ಏಕೆಂದರೆ ಈ ಚಲನೆಯು, ಅಸಂಖ್ಯಾತ ವಿಶ್ವ ವ್ಯವಸ್ಥೆಗಳು ತಮ್ಮ ಶಕ್ತಿಯನ್ನು ಈ ನಿಷ್ಪಕ್ಷಪಾತ, ತಟಸ್ಥ ಧೋರಣೆಯ ನಿರ್ವಿಕಾರ ಸತ್ತೆಯ ಮೂಲಕವೇ ಪಡೆಯಲು ಸಾಧ್ಯ.

ಅದೇ ರೀತಿ ಮಾನವನಾದರೂ ಸಹ ಈ ಬ್ರಹ್ಮ ವಸ್ತುವಿನ ಪರಮ ಶಾಂತಿಯನ್ನು, ತಾಟಸ್ಥ್ಯವನ್ನು ಪಡೆದಾಗ ಮಾತ್ರ ಪರಿಪೂರ್ಣನಾಗಲು ಸಾಧ್ಯ. ಅಂತರಂಗದಲ್ಲಿ ಇಂಥ ಶಾಂತಿ ಇರುವಾಗ ಮಾತ್ರ ವೈವಿಧ್ಯಮಯ ಕ್ರಿಯೆಗಳಿಗೆ ಬೇಕಾದ ಶಕ್ತಿ ಅಖಂಡವಾಗಿ ದೊರೆಯಬಲ್ಲದು. ಆದ್ದರಿಂದ ಮೌನವು (ಅಥವಾ ಶಾಂತಿಯು) ಕ್ರಿಯೆಯ ನಿರಾಕರಣೆ ಅಲ್ಲ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು.

ಆದರೆ, ಸಂಪೂರ್ಣ ಕ್ರಿಯಾ ನಿವೃತ್ತಿಯ ಅಸತ್ Non Being ಬಗ್ಗೆ ಏನು ಹೇಳುವುದು? ಅಸದ್ವಾ ಇ ದಮಗ್ರ ಆ ಸೀತ್, ತತೋ ವೈ ಸದಜಾಯತ ಎಂದು ತೈತ್ತಿರೀಯ ಹೇಳುತ್ತದೆ. ಹಾಗಿದ್ದರೆ, ಪುನಃ ಎಲ್ಲವೂ ಅಸತ್‌ನಲ್ಲೇ ಪರ್ಯವಸಾನ ಹೊಂದುವುದು ಅನಿವಾರ್ಯ ಎಂಬ ಅರ್ಥ ಬರುವುದಲ್ಲ ಎಂಬ ಆಕ್ಷೇಪ ಸಹಜವಾಗಿ ಬರುತ್ತದೆ. ಆನಂತವಾದ, ಅನಿರ್ದಿಷ್ಟ indisicrimate ಅಸ್ತಿತ್ವವೇ ಎಲ್ಲ ನಿರ್ದಿಷ್ಟ ಆಕಾರಗಳ, ಸಾಧ್ಯತೆಗಳ ಮೂಲ ಅನ್ನುವುದಾದರೆ, ಅದೇ ಏಕೈಕ ಸತ್ಯವಾಗಿರುತ್ತ ವಿಶ್ವದ ಸತ್ಯತೆಯನ್ನು ನಿರಾಕರಿಸಿದಂತಾಗುವುದಿಲ್ಲವೇ? ಆಗ ಬುದ್ಧ ಪ್ರಣೀತ ಮತಗಳ ಪೈಕಿ ಕೆಲವು ಹೇಳುವಂತೆ, ಸಂಪೂರ್ಣ ನಿರ್ವಾಣವೇ ಕೊನೆಯ ಸತ್ಯ, ಆತ್ಮ, ಅಹಂ ಎಲ್ಲವೂ ಸುಳ್ಳು, ಕಾಲ್ಪನಿಕ ಎಂದು ಹೇಳಬೇಕಾಗುವುದು.

ಆದರೆ, ತುಸು ಆಳವಾಗಿ ಆಲೋಚನೆ ಮಾಡಿದರೆ ಈ ಶಬ್ದಗಳು ನಮ್ಮನ್ನು ಹೇಗೆ ಮೋಸ ಮಾಡುತ್ತವೆ ಎಂಬುದು ಗೊತ್ತಾಗುತ್ತದೆ. ಮಾನಸಾತೀತವಾದ ಅನುಭವಗಳನ್ನು ವಿವರಿಸುವಲ್ಲಿ ಶಬ್ದಗಳು ಸೋಲುವುದರಿಂದ ಇಂಥ ತೊಂದರೆಯಾಗುತ್ತದೆ. ಅಸತ್ ಅನ್ನುವುದು ಕೇವಲ ಒಂದು ಶಬ್ದ ಅಷ್ಟೇ; ವಸ್ತು ಸ್ಥಿತಿಯ ಅಧ್ಯಯನ ಮಾಡಿದರೆ, ಅಸತ್ ಅನ್ನುವುದ ಆನಂತ ಅಷ್ಟೇ; ಚೈತನ್ಯವೇ ಹೊರತು ಏನೂ ಅಲ್ಲದ, ಏನೂ ಇಲ್ಲದ ಸ್ಥಿತಿ ಅಲ್ಲ ಅನ್ನುವುದು ಅರಿವಾಗುತ್ತದೆ. ಅಸತ್ ಅನ್ನುವುದು ನಮ್ಮ ಇಂದ್ರಿಯಗಳು, ಸೂಕ್ಷ್ಮ ಇಂದ್ರಿಯಗಳು ಗ್ರಹಿಸಲಾಗದ ಸ್ಥತಿ, ನಮ್ಮ ಕಲ್ಪನೆಗೆ ನಿಲುಕದ ಸ್ಥಿತಿ; ಅಸತ್ ಅನ್ನುವುದು ಯಾವುದೇ ರೀತಿಯ

ಧನಾತ್ಮಕ, ಸಕಾರಾತ್ಮಕ ಅನುಭವವನ್ನು ಮೀರಿದ ಸ್ಥಿತಿ. ಎಲ್ಲವನ್ನೂ ನೇತಿ ನೇತಿ ಎಂದು ಹೇಳುತ್ತ, ನಮಗೆ ಗೊತ್ತಿರುವುದೆಲ್ಲವನ್ನು ಅಲ್ಲಗೆಳೆಯುತ್ತ ಏನೂ ಇಲ್ಲದ ಸ್ಥಿತಿಗೆ ಹೋಗುವ ಮನಸ್ಸಿನ ಉಪಕ್ರಮ ಅದು. ನಾವು ನಿಹಿಲ್ ಅಥವಾ ಅಸತ್‌ನ್ನು ತೀರ ಗಂಭೀರವಾಗಿ ಹಾಗೂ ಹತ್ತಿರದಿಂದ ಪರಿಶೀಲಿಸಿದರೆ, ನಿಹಿಲ್ ಅಥವಾ ಶೂನ್ಯವೆನ್ನುವುದು ಎಲ್ಲವನ್ನೂ, ಯಾವ ಭಾಷೆಯಿಂದಲೂ ವಿವರಿಸಲಾಗದ ರೀತಿಯಲ್ಲಿ ಸರ್ವಸ್ವವನ್ನೂ ಒಳಗೊಂಡಿರುವ ವಸ್ತು (?) ಎಂಬುದು ಅರಿವಾಗುವುದು. ಮಾನವನ ಮನಸ್ಸಿಗೆ ಅದು ಶೂನ್ಯವೆಂಬಂತೆ ತೋರುತ್ತದೆ, ಆದರೆ ಅದರಲ್ಲಿ ವಿಶ್ವದ್ರವ್ಯವೇ ಅನಭಿವ್ಯಕ್ತರೂಪದಲ್ಲಿ ಅಡಗಿರುತ್ತದೆ.

ಅಸತ್‌ನಿಂದ ಸತ್ ಪ್ರಕಟವಾಯಿತು ಎಂದು ಹೇಳುವಾಗ, ಯಾವುದು ಕಾಲಾತೀತವಾಗಿದೆಯೋ ಅದನ್ನು ಕಾಲದ ಲೆಕ್ಕದಲ್ಲಿ ಮಾತನಾಡುತ್ತಿದ್ದೇವೆ ಎಂಬ ಅರಿವು ನಮಗಿರಬೇಕು. ಏಕೆಂದರೆ, ಏನೇನೂ ಇಲ್ಲದ ಸ್ಥಿತಿಯಿಂದ ಯಾವಾಗ, ಯಾವ ದಿನದಂದು ಸತ್ ಹುಟ್ಟಿತು ಎಂಬುದನ್ನು ಯಾರು ಎಂದೆಂದಿಗೂ ನಿಗದಿಪಡಿಸಿ ಹೇಳಲು ಸಾಧ್ಯವಿಲ್ಲ ಹಾಗೆಯೇ, ಯಾವ ದಿನ ಈ ವಿಶ್ವ ಅಥವಾ ಸತ್ ಸಂಪೂರ್ಣ ಕಣ್ಮರೆಯಾಗಿ ಶೂನ್ಯವಾಗಿ ಬಿಡುವುದೆಂದು ಹೇಳಲು ಸಾಧ್ಯವಿಲ್ಲ. ಸತ್ ಮತ್ತು ಅಸತ್ ಎರಡೂ ಇವೆ ಅನ್ನುವುದಾದರೆ, ಅವೆರಡೂ ಏಕಕಾಲಕ್ಕೆ ಇರುತ್ತವೆ ಎಂದೇ ಒಪ್ಪಬೇಕಾಗುತ್ತದೆ. ಅವೆರಡೂ ಪರಸ್ಪರ ಸೇರಲಿಕ್ಕಿಲ್ಲ, ನಿಜ, ಆದರೆ ಅವು ಪರಸ್ಪರ ಇರುವಿಕೆಯನ್ನು ಸಮರ್ಥಿಸುತ್ತವೆ. ನಾವು ಕಾಲದ ಪರಿಭಾಷೆಯಲ್ಲಿ ಮಾತನಾಡುವವರಾದ್ದರಿಂದ ಅವೆರಡೂ ಕಾಲಾತೀತ, ಶಾಶ್ವತ ಎಂದೇ ಹೇಳಬೇಕಾಗುವುದು. ಇಲ್ಲಿ ಇನ್ನೊಂದು ಒಗಟಿನಂಥ ಪ್ರಶ್ನೆ ಏನೆಂದರೆ, ಶಾಶ್ವತವಾದ ಸತ್‌ನ ಬೆನ್ನು ಹತ್ತಿ ಹೋಗಿ ಅದು ಶಾಶ್ವತವಾಗಿ ಇದೆಯೋ, ಏನು ಅಸತ್‌ನಿಂದ ಬಂದಿದೆಯೋ? ಎಂಬುದನ್ನು ಹುಡುಕುವವರು ಯಾರು? ಎಲ್ಲ ಅನುಭವಗಳನ್ನೂ ಅಲ್ಲಗಳೆಯುವ ಆ ಸ್ಥಿತಿಯಲ್ಲಿ (ಅದು ಇದ್ದರೆ?) ಅಸತ್‌ನ ಅನುಭವವನ್ನು ಸಮರ್ಥಿಸುವುದಾದರೂ ಹೇಗೆ?

ವಿಶುದ್ಧ ಸತ್ತೆಯು ಕೂಡ ಅಜ್ಞೇಯವಾದ ಸ್ಥಿತಿಯೇ, ಅದು ಇಡೀ ಬ್ರಹ್ಮಾಂಡದ ಅಸಿತ್ವದ ಮೂಲಧಾರವಾಗಿದೆ. ನಾವು ಯಾವುದನ್ನು ಅಸತ್ ಎಂದು ಭಾವಿಸಿದ್ದೇವೋ ಅದು ಬ್ರಹ್ಮಾಂಡದ ಯಾವುದೇ ವಸ್ತುಗಳಿಗೆ ಬದ್ಧವಾಗಿರದೇ

ಮುಕ್ತವಾಗಿರುವ ಸ್ಥಿತಿ ಅಥವಾ ವಸ್ತು ಆಗಿದೆ. ಅಂದರೆ ನಾವು ಯಾವುದನ್ನು; 'ತದ್ ಇತಿ, ಸ ಇತಿ, ಸಾ ಇತಿ' ಎಂದು ಸಕಾರಾತ್ಮಕವಾಗಿ ಇದೆ ಎಂದು ಹೇಳುತ್ತೇವೋ ಅದರ ಮೇಲೆ ಅವಲಂಬಿತವಾಗಿರದೇ, ಸ್ವತಂತ್ರವಾಗಿರುತ್ತದೆ. ಅಂದರೆ, ಅದು ಯಾವುದೇ ನಿರ್ದಿಷ್ಟ ವಸ್ತು, ಸಂಗತಿ, ಅಥವಾ ಸ್ಥಿತಿಗೆ ಬದ್ಧವಾಗಿರದೇ, ಅವುಗಳ ಮಿತಿಯಿಂದ ಬಾಧಿತವಾಗಿರದೇ ಸ್ವತಂತ್ರವಾಗಿರುತ್ತದೆ. ಅಸತ್ ಇದು ಸತ್‌ನ್ನು ನಿರಾಕರಿಸುವುದಿಲ್ಲ, ನಿಃಶಬ್ದವು ಹೇಗೆ ಶಬ್ದವನ್ನು, ಕ್ರಿಯೆಯನ್ನು ಅಲ್ಲಗೆಳೆಯುವುದಿಲ್ಲವೋ ಹಾಗೆ ಅಸತ್ ಇದು ಸತ್‌ನ್ನು ನಿರಾಕರಿಸುವುದಿಲ್ಲ ಅವೆರಡೂ ಪರಸ್ಪರ ಪೂರಕವಾಗಿವೆ. ಅಂತೆಯೇ ಬುದ್ಧನು ನಿರ್ವಾಣದ ಸ್ಥಿತಿಯನ್ನು ತಲುಪಿದರೂ, ತನ್ನಂತಃ ಪ್ರಜ್ಞೆಯಲ್ಲಿ ಎಲ್ಲದರಿಂದ ಮುಕ್ತವಾಗಿ ನಿಂತುಕೊಂಡು.., ಅತ್ಯಂತ ಮಹತ್ವದ ಕೆಲಸ ಮಾಡಲು ಸಾಧ್ಯವಾಯಿತು.

ನಮ್ಮ ಮನಸ್ಸಿನ, ಬುದ್ಧಿಯ ಶಕ್ತಿ ತುಂಬ ಸಣ್ಣದು. ಒಂದು ವಸ್ತು ಅಥವಾ ಸ್ಥಿತಿಯನ್ನು ಹೇಳುವಾಗ, ಅದರ ವಿರುದ್ಧ ವಸ್ತು ಅಥವಾ ಸ್ಥಿತಿಯನ್ನು ಸಾರಾಸಗಟಾಗಿ ತಳ್ಳಿ ಹಾಕಿಬಿಡುವ ಸ್ವಭಾವ ಮನಸ್ಸಿನದು. ಅಜ್ಞೇಯವಾದುದರಲ್ಲಿ ಯಾವುದೋ ಒಂದಂಶವನ್ನು ಗಟ್ಟಿಯಾಗಿ ಹಿಡಿದುಕೊಂಡು ಉಳಿದೆಲ್ಲವನ್ನು ತಿರಸ್ಕರಿಸುವುದು ಅದರ ಸ್ವಭಾವ. ನಮಗೆ ತಿಳಿದಿರುವ ಅಥವಾ ಊಹಿಸಲು ಸಾಧ್ಯವಿರುವ ವಸ್ತುವನ್ನು ಅದು ಎಷ್ಟೇ ಅಮೂರ್ತವಾಗಿರಲಿ, – ನಾವು ಶಕ್ಯತೋ ದೇಶ ಕಾಲಗಳ ಸಾಪೇಕ್ಷ ಮಟ್ಟಕ್ಕೆ ಇಳಿಸಿ ತಂದು ಬಿಡುತ್ತೇವೆ. ನಾವು ತುಸು ಸಮಾಧಾನ, ಸಹನೆ ಕಲಿಯಬೇಕು, ಅಂದರೆ ಸತ್ಯವು ಕ್ಲುಪ್ತ ಕಾಲದಲ್ಲಿ ಹೇಗೆ ತಾನಾಗಿ ಪ್ರಕಟವಾಗುವುದೆಂಬುದನ್ನು ನೋಡಬಹುದು.

ವೈಯಕ್ತಿಕ ಪ್ರಜ್ಞೆಯು, – ಮನಸ್ಸಲ್ಲ ಪ್ರಜ್ಞೆ–ಸಾಪೇಕ್ಷ ಅಸ್ತಿತ್ವದ ಸ್ಥಿತಿಯನ್ನು ಮೀರಿ, ಕೇವಲ ಶುದ್ಧ ಸ್ಥಿತಿಯನ್ನು, ಅಂದರೆ ಆತ್ಮವೆಂಬುದು ಕೂಡ ಒಂದು ರೀತಿಯ ಕಲ್ಪನೆಯೇ ಅನ್ನುವ ಸ್ಥಿತಿಯನ್ನು ಮುಟ್ಟಬಹುದು. ಸಾಧ್ಯವಿದೆ. ನಿಶ್ಶಬ್ದದಾಚೆಗಿನ ಮೌನವನ್ನು ಅನುಭವಿಸುವ ಸಾಮರ್ಥ್ಯ ಪ್ರಜ್ಞೆಗಿದೆ. ಆದರೆ, ಇದೇ ಆತ್ಯಂತಿಕ ಸ್ಥಿತಿ ಎಂದು ತಿಳಿಯಬಾರದು; ಅದರಾಚೆಗೂ ಸತ್ಯ ಇದ್ದಿರಬೇಕೆಂಬುದನ್ನು ಅಲ್ಲಗಳೆಯಬಾರದು. ನಿರ್ವಾಣದ ಈ ಸ್ಥಿತಿಯು ಕೇವಲ

ಶಾಂತಿಯನ್ನು, ಪ್ರಕೃತಿಯ ಚಲನೆಯಲ್ಲಿರುವ (ವೈಯಕ್ತಿಕ ಮತ್ತು ವಿಶ್ವಾತ್ಮಕ) ಆತ್ಮಕ್ಕೆ ಸ್ವಾತಂತ್ರ್ಯವನ್ನು, ಶಾಂತಿಯನ್ನು ನೀಡುವುದೆಂಬುದೇನೋ ನಿಜ. ಆಂತರಿಕವಾಗಿ ನಿಶ್ಚಂತೆ, ನಿರ್ವಿಕಾರ ಹಾಗೂ ಏನೆಂದೂ ಉಪಾಧಿ ಇಲ್ಲದ ಶಾಂತ ಸ್ಥಿರತೆಯನ್ನು ಕಾಯ್ದುಕೊಂಡು ಬಾಹ್ಯದಲ್ಲಿ ಎಲ್ಲ ಕೆಲಸಗಳನ್ನು ಪ್ರೀತಿಯಿಂದ, ಪ್ರೇಮದಿಂದ, ಧರ್ಮದಿಂದ ಮಾಡಲು ಸಾಧ್ಯವಿದೆ. ಬಹುಶಃ ಬುದ್ಧನ ಉಪದೇಶದ ನಿಜವಾದ ಸಾರ ಕೂಡ ಇದೇ ಆಗಿರಬೇಕು. ಅಹಂಕಾರದಿಂದ ಮೇಲಕ್ಕೇರಿ, ಸ್ವಾರ್ಥದ ಕೆಲಸಗಳನ್ನು ಸಂಪೂರ್ಣ ತ್ಯಾಗ ಮಾಡಿ, ನಶ್ವರವಾದ ಶರೀರದಲ್ಲಿದ್ದರೂ ಅದಕ್ಕೆ ಅಂಟು ಬೀಳದೇ, ಜಗತ್ತಿನ ವ್ಯಾಪಾರದಿಂದ ಪಲಯನಗೈಯದೇ, ವಿಹಿತ ಕರ್ಮ ಮಾಡುತ್ತ ಬದುಕುವುದೇ ಅವನ ಉಪದೇಶದ ಮುಖ್ಯ ಬಿಂದುವಾಗಿರಬೇಕು. ಪರಿಪೂರ್ಣನಾದ ವ್ಯಕ್ತಿಯು ತನ್ನೊಳಗೆ ನಿಶ್ಚಲ ಶಾಂತಿಯನ್ನು ಹಾಗೂ ಬಾಹ್ಯದಲ್ಲಿ ಕ್ರಿಯಾಶೀಲತೆಯನ್ನು ರೂಢಿಸಿಕೊಳ್ಳುವುದು ಸಾಧ್ಯವಿದೆ. ಅಸತ್ತಿನಲ್ಲಿರಬಹುದಾದ ಸಂಪೂರ್ಣ ಸ್ವಾತಂತ್ರ್ಯವನ್ನು, ಮುಕ್ತ ಸ್ಥಿತಿಯನ್ನು ಕಾಯ್ದುಕೊಂಡು ವಿಶ್ವದಲ್ಲಿ ಸಕ್ರಿಯವಾಗಿರುವುದನ್ನು ಮುಂದುವರಿಸಿಕೊಂಡು ಹೋಗಲು ಸಾಧ್ಯವಿದೆ. ಇಂಥ ವಿರೋಧ ಅನುಭವ ಏಕಕಾಲಕ್ಕೆ ಹೇಗೆ ಸಾಧ್ಯವೇ? ಎಂದು ಅನ್ನಿಸಬಹುದು. ಮನಸ್ಸನ್ನು ಸಂಪೂರ್ಣವಾಗಿ ಅಸತ್ತಿನ ಮೇಲೆ ಕೇಂದ್ರೀಕರಿಸಿ, ಪರಿಣಾಮವಾಗಿ ವೈಯಕ್ತಿಕತೆಯನ್ನು, ವಿಶ್ವಾತ್ಮಕತೆಯನ್ನು ಮೀರಿ ನಿಂತು ಜೀವನ ಸಾಗಿಸುವುದು ಸುಲಭವಲ್ಲದಿದ್ದರೂ ಅಸಾಧ್ಯವೇನಲ್ಲ.

ವಿಶ್ವಾತ್ಮಕ ಸ್ತರದಲ್ಲಿ ಆತ್ಮ ಮತ್ತು ಜಡ ಪದಾರ್ಥಗಳ ಅಭೇದವನ್ನು ನೋಡಿದ ಮೇಲೆ, ವಿಶ್ವಾತೀತ ಸ್ತರದಲ್ಲಿ ಅವುಗಳ ಅಭೇದವನ್ನು ಗುರುತಿಸುವ ಪ್ರಯತ್ನ ಮಾಡಬೇಕಾಗಿದೆ. ಅಜ್ಞೇಯದಲ್ಲಿ ಇಂಥ ಕ್ರಿಯೆಗಳು ಇವೆ ಎಂದಾಗಲಿ, ಇಲ್ಲವೇ ಇಲ್ಲವೆಂದಾಗಲಿ ಯಾರೂ ಖಚಿತವಾಗಿ ಹೇಳಲಾರರು. ಇಂಥವು ಇವೆ, ಶಿವ ತತ್ವ ಇದೆ ಎಂದು ಹೇಳಿದರೆ ಅಜ್ಞೇಯದಲ್ಲಿ ಏನೋ ಒಂದು ಚಲನೆ ಅಥವಾ ಸ್ಥಿತಿ ಇದೆ ಎಂದು ಹೇಳಿದ ಹಾಗೆ; ಅದಿಲ್ಲ, ಇದಿಲ್ಲ ನೇತಿ ನೇತಿ ಎಂದು ಹೇಳಿದರೆ, ಅದು ಸ್ವತಂತ್ರ ವಾಗಿದೆ, ಯಾವುದರಿಂದಲೂ ಹಾಗೆಯೇ ಹೊರತು ಯಾವ ಕ್ರಿಯೆ ಅಥವಾ ಸ್ಥಿತಿ ಇಲ್ಲವೆಂದು ಹೇಳಿದ ಹಾಗಲ್ಲ ಎಂಬುದನ್ನು ನಾವು ಮೊದಲು ಅರ್ಥ ಮಾಡಿಕೊಳ್ಳಬೇಕು. ಅಜ್ಞೇಯವೆಂಬುದು ನಮಗೆ ತೀರ ಶ್ರೇಷ್ಠವಾದುದು, ಅದ್ಭುತ, ಆಶ್ಚರ್ಯಕರವಾದುದು, ಅನಿರ್ವಚನೀಯವಾದುದು;

ಏಕೆಂದರೆ ಅದು ನಮ್ಮ ಮಾನಸಿಕ ಕಲ್ಪನೆಯ ರಚನೆಯನ್ನು ನಿರಂತರ ಕಟ್ಟುತ್ತ, ಕೆಡವುತ್ತ, ಎಲ್ಲವನ್ನೂ ಮೀರಿ ಹೋಗುತ್ತ ಎತ್ತರದಲ್ಲಿರುತ್ತದೆ. ಆದರೆ ಹಾಗೆಂದು ಅದೇನೂ ದುಷ್ಟ ಆತ್ಮ, ನಮ್ಮೆಲ್ಲ ಕಲ್ಪನೆಗಳನ್ನು ಬುಡ ಮೇಲು ಮಾಡುವ ಮಾಂತ್ರಿಕನ ಹಾಗೆ ಎಂದು ಭಾವಿಸಬೇಕಾಗಿಲ್ಲ. ಇಷ್ಟೇ, ನಮ್ಮ ಬುದ್ಧಿಯನ್ನು ಮೀರಿದ ತತ್ವ, ಅನಿವರ್ಚನೀಯವಾದುದು ಎಂದಷ್ಟೇ ತಿಳಿದುಕೊಳ್ಳಬೇಕು.

ನಮ್ಮ ಸಮನ್ವಯ ಸಿದ್ಧಾಂತದ ದೃಷ್ಟಿಯಿಂದ, ಬ್ರಹ್ಮ ತತ್ವವು ಸರ್ವವ್ಯಾಪಕವಾದ ಸತ್ತೆಯೇ ಹೊರತು ಭ್ರಮೆಯ ಕಾರಣವಲ್ಲವೆಂಬ ಪರಿಕಲ್ಪನೆಯನ್ನು ಆಧಾರವಾಗಿಟ್ಟು ಹೊರಟರೆ, ಅಜ್ಞೇಯದ ಬಗೆಗಿನ ವಿವಿಧ ಪರಿಕಲ್ಪನೆಗಳ ಪರಸ್ಪರ ಸಂಬಂಧವೇನು? ಮುಂತಾದ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲೇಬೇಕಾಗುತ್ತದೆ. ಯಾವುದನ್ನೂ ನಿರಾಕರಿಸದೇ, ಯಾವುದನ್ನು ಅತಿಯಾಗಿ ಪುಷ್ಟೀಕರಿಸದೇ ಸರಿಯಾದ ಮೌಲ್ಯಮಾಪನ ಮಾಡಬೇಕಾಗುತ್ತದೆ. ಅದ್ವೈತ್ಯವು ಸರ್ವಂ ಖಲ್ವಿದಂ ಬ್ರಹ್ಮ ಎಂಬುದನ್ನು ಒಪ್ಪುತ್ತದೆ; ಬ್ರಹ್ಮದ ಅಸ್ಯತ್ವವನ್ನು ಶಾಶ್ವತ ನಿಜ ಮತ್ತು ಶಾಶ್ವತ ಭ್ರಮೆ ಎಂದು ದ್ವಿಭಾಗಿಸಲು ಅದು ಒಪ್ಪುವುದಿಲ್ಲ. ಅದರ ಬದಲಾಗಿ ಮಾಯೆ ಎಂಬ ತತ್ವವನ್ನು ನಡುವೆ ತರುತ್ತದೆ. ಆತ್ಮವೊಂದೇ ನಿಜವಾದ ಏಕೈಕ ತತ್ವ, ಏಕೈಕ ಸತ್ತೆ ಆಗಿದ್ದರೆ, ಬ್ರಹ್ಮಾಂಡದಲ್ಲಿ ಏನೆಲ್ಲ ಇದೆಯೋ ಅದೆಲ್ಲವೂ ಬ್ರಹ್ಮವೇ ಆಗಿರಬೇಕು ಅನ್ನುವುದರಲ್ಲಿ ಎರಡು ಮಾತಿಲ್ಲ. ಈ ಸತ್, ಬ್ರಹ್ಮ, ಭಗವಂತ, ದೇವರು, ಯಾವುದೇ ಹೆಸರಿನಿಂದ ಕರೆದರೂ ಅಷ್ಟೇ ಸ್ವತಂತ್ರವಾಗಿದ್ದರೆ, ಅಸಹಾಯ ಸ್ಥಿತಿಯಲ್ಲಿ ಇಲ್ಲದೇ ಹೋದರೆ, ಜಗತ್ತಿನ ರೂಪದಲ್ಲಿ ಅದರ ಪ್ರಕಟಣೆಯನ್ನು ಉದ್ದೇಶ ರಹಿತವೆಂದು ಹೇಳಲಾಗದು. ಉದ್ದೇಶ ಇದ್ದಿರಲೇಬೇಕು. ಆ ಉದ್ದೇಶ ಶೋಧನೆಯೇ ನಮ್ಮ ಗುರಿ. ವಿಶ್ವಾತೀತವಾದ ಸರಬ್ರಹ್ಮ ವಸ್ತು ಮತ್ತು ವಿಶ್ವದ್ರವ್ಯ ಇವುಗಳ ನಡುವಣ ವೈಧರ್ಮ್ಯವನ್ನು ಒಪ್ಪಿದರೂ ಸಹ ಅದು ನಮ್ಮನ್ನು ಸೋಲಿಸುವ ದುಷ್ಟ ಶಕ್ತಿ ಅಲ್ಲ, ಶತ್ರು ಅಲ್ಲ; ಮಾನವನ ಅಂತರಾಳದಲ್ಲಿನ ಅಂತಃ ಪ್ರಜ್ಞೆಯು ಇದಾವುದು ಭ್ರಮೆ–ಭ್ರಾಂತ್ರಿ ಅಲ್ಲ, ವಿಶುದ್ಧ ಜ್ಞಾನವು ಅದರ ಧ್ಯೇಯವಾಗಿರಬೇಕು. ಎಂದು ಹೇಳುತ್ತದೆಯೇ ಹೊರತು ಜಗತ್ತಿನಿಂದ ವಿಮುಖವಾಗಲು ಹೇಳುವುದಿಲ್ಲ.

ಏಕೈಕ ಆತ್ಮ ಅಥವಾ ಬ್ರಹ್ಮವಸ್ತು ಎಲ್ಲದರ ಮೂಲ, ಅದರ ಆಂತರಿಕ ಸಂಕಲ್ಪವೇ ಬ್ರಹ್ಮಾಂಡವನ್ನು ನಿರ್ಮಾಣ ಮಾಡಿದೆಯೇ ಹೊರತು, ಬೇರಿನ್ನಾವ

ಒತ್ತಡದಿಂದಲೂ ಅಲ್ಲ. ಅಂದ ಮೇಲೆ ಎಲ್ಲ ವೈರುಧ್ಯಗಳು, ವೈಪರಿತ್ಯಗಳು ಅಲ್ಲಿಂದಲೇ, ಅದರಿಂದಲೇ ಬಂದಿವೆ ಎಂಬುದು ಸಿದ್ಧವಾಗುವುದು. ಬ್ರಹ್ಮವಸ್ತು ಅವಿಚ್ಛಿನ್ನವಾಗಿರುವಂಥದು, ಅವಿಭಾಜ್ಯವಾಗಿರುವಂಥದು, ಅದು ಎಲ್ಲದರಲ್ಲೂ ಸಮಾನ ಅಂಶದಿಂದ ಇದೆ, ಎಲ್ಲದರಲ್ಲೂ ಪೂರ್ಣ ಅಂಶದಿಂದ ಇದೆ. ನಮ್ಮ ಸಾಪೇಕ್ಷ ಮಾನಸಿಕ ಪ್ರಜ್ಞೆಗೆ ಬ್ರಹ್ಮ ಭೇರೆ, ಜಗತ್ತು ಬೇರೆ ಎಂದು ತೋರುವುದೇ ಹೊರತು ಮೂಲತಃ 'ತತ್' ವಸ್ತುವೇ ಇಲ್ಲೂ, ಅಲ್ಲೂ, ಎಲ್ಲೆಲ್ಲೂ ಇದೆ. ಒಂದು ವೇಳೆ ಈ ಜಗತ್ತು ಒಂದು ಕನಸು, ಭ್ರಮೆ, ತಪ್ಪು ಕ್ರಮ ಎಂದು ಏನೇ ಹೇಳಿದರೂ ಸಹ ಅದರ ಆಧಾರವು ಸತ್ಯ ಪರಬ್ರಹ್ಮದ ಸತ್ಯ ಸಂಕಲ್ಪವೇ ಆಗಿರುವುದು. ಹೀಗಾಗಿ ಅದು ಸತ್ಯ ಕ್ರಿಯೆಯೇ ಆಗಿಬಿಡುವುದು. ತತ್ ಎಂಬ ಸತ್ಯವಸ್ತುವೇ ಕನಸಿನ ಕರ್ತೃ, ಅದೇ ಕನಸು, ಅದರ ಚಲನೆ, ನಟನೆ, ಕಥ, ಸೂತ್ರಾಧಾರ, ನಟ, ನಿರ್ದೇಶಕ ಎಲ್ಲವೂ ಸತ್ಯವಸ್ತುವೇ ಆಗಿರುವಾಗ ಯಾವುದನ್ನೂ ಸುಳ್ಳು, ಮಾಯೆ, ಮಿಥ್ಯೆ ಎಂದು ಹೇಳುವುದು? ಕನಸು, ಮಾಯೆ, ಭ್ರಮೆ ಇವೆಲ್ಲ ಕೇವಲ ಶಬ್ದ ಜಾಲ. ಅಲ್ಲಿಯೂ ಸತ್ಯ ಇದೆ, ತೋರಿಕೆಯು ಸುಳ್ಳು ಅಥವಾ ಕಲ್ಪನೆ ಅಲ್ಲ; ಅದು ಸತ್ಯದ ಒಂದು ಮುಖವೇ ಬೇರೆ ಅಲ್ಲ.

ಆದ್ದರಿಂದ, ಸರ್ವವ್ಯಾಪಿಯಾದ ಸತ್ತೆಯೇ ಎಲ್ಲದರ ಮೂಲವಾಗಿದೆ; ಈ ಕಡೆಗೆ ಅಸತ್ ಹಾಗೂ ಆ ಕಡೆಗೆ ವಿಶ್ವ ಎರಡೂ ಅದನ್ನು ಅಲ್ಲಗೆಳೆಯಲಾರವು, ಬದಲಾಗಿ ಅವೆರಡೂ ಆ ಏಕೈಕ ಸತ್ತೆಯ ಎರೆಡು ಸ್ಥಿತಿಗಳೇ ಆಗಿವೆ. ಅತ್ಯುನ್ನತ ಆಧ್ಯಾತ್ಮಿಕ ಅನುಭವದ ಪ್ರಕಾರ, ಈ ಜಗತ್ತು ಕೇವಲ ಪ್ರಜ್ಞಾಯುಕ್ತ ಸತ್ತೆ ಅಷ್ಟೇ ಅಲ್ಲ, ಅದು ಅತ್ಯಂತ ವಿಚಕ್ಷಣ ಬುದ್ಧಿಮತ್ತೆಯುಳ್ಳ ಸ್ವಯಂಭೂ ಶಕ್ತಿ ಮತ್ತು ಆನಂದವೇ ಆಗಿದೆ. ಈ ವಿಶ್ವ ಅನಿರ್ವಚನೀಯವಾದ ಅಜ್ಞೇಯ ಆನಂದವೇ ಆಗಿದೆ. ಆದ್ದರಿಂದ, ನಮ್ಮ ಸಾಪೇಕ್ಷ ಪ್ರಜ್ಞೆಯನ್ನು ಬಿಟ್ಟು ಶುದ್ಧ, ಮುಕ್ತ ಪ್ರಜ್ಞೆಯಿಂದ ನೋಡಿದಾಗ ಎಲ್ಲ ವಿರೋಧಗಳು, ದ್ವೈತ ಭಾವಗಳು ಈ ಸ್ವಯಂ ಭೂ ಸತ್ತೆಯ ಪ್ರಕಟನೆಗಳೇ ಆಗಿವೆ ಎಂಬುದು ತಿಳಿದು ಬರುವುದು. ಸದ್ಯಕ್ಕೆ ಹೀಗೆ ಹೇಳುವುದು ಒಂದು ನಂಬಿಕೆಯೋ, ಪರಿಕಲ್ಪನೆಯೋ ಎಂದೆನಿಸಬಹುದು; ಆದರೆ ಪ್ರಜ್ಞಾ ವಿಕಾಸವಾದ ಮೇಲೆ ಈ ನಂಬಿಕೆ, ಪರಿಕಲ್ಪನೆಯು ಸತ್ಯವಾಗಿ ಮಾರ್ಪಾಡಾಗುವುದು. ಸ್ಪಷ್ಟ ಅನುಭವವಾಗುವುದು.

*

[ಓದುಗರೊಬ್ಬರು ಈ 'ದಿವ್ಯ ಜೀವನ' ಅನುಸ್ಪಂದನವನ್ನು ಕುರಿತು ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಈ ವಿಷಯವಾಗಿ ಈ ಲೇಖನದ ಕುರಿತು, ಇದನ್ನು ಬರೆಯುತ್ತಿರುವ 'ಜಾನ್ವಿ'ಯವರ ಅಭಿಪ್ರಾಯವನ್ನೂ ಅನುಮತಿಸಿದಂತೆ, ಇಲ್ಲಿ ರೂಪಿತವಾಗುತ್ತಿರುವ ಅಭಿಪ್ರಾಯಗಳು ನೇರಾನೇರ ದಿವ್ಯ ಜೀವನದ ಅನುವಾದವಲ್ಲ ಎನ್ನುವದನ್ನು ಗಮನಿಸಿ, ಈ ಲೇಖನವು ಶ್ರೀ ಅರವಿಂದರ 'ದಿವ್ಯ ಜೀವನ'ದ ಪ್ರವೇಶಕ್ಕೆ ಕೆಲವು ಅಂಶಗಳನ್ನು ರೂಪಿಸಲು ಯತ್ನಿಸುತ್ತಿದೆ. ಶ್ರೀ ಅರವಿಂದರ ಗ್ರಂಥಗಳ ಅನುವಾದ ಒಂದು ಹಿಮಾಲಯ ಸದೃಶ ಸಾಧನೆಯನ್ನು ಅಪೇಕ್ಷಿಸುತ್ತದೆ. ಕನ್ನಡದಲ್ಲಿ, ಈ ಪಥದಲ್ಲಿ ಹೆಜ್ಜೆ ಇಡುತ್ತಿರುವ ಪ್ರತಿಯೊಂದು ಪ್ರಯತ್ನವೂ ಸಹಿತ ಮುಂದಿನ ಪೀಳಿಗೆಗೆ ಸಹಕಾರಿಯಾಗಿರುತ್ತದೆ ಎಂದು ನಮ್ಮ ಅನಿಸಿಕೆ. ಹೀಗಾಗಿ ಇದು 'ದಿವ್ಯ ಜೀವನ'ದ ಅನುಸ್ಪಂದನವೆಂದು ಗಮನಿಸಿ. (ಸಂ)]

(ಸಶೇಷ)

# ಶ್ರೀ ಅರವಿಂದರ
# "ಭವಾನೀ ಭಾರತೀ"
## (ಪದ್ಯಾನುವಾದ–3)

**– ಅನುವಾದ: ಪುಟ್ಟು ಕುಲಕರ್ಣಿ**

ಆಲಿಸಿರಿ ಎಲ್ಲ ಆವಂತಿ–ಮಗಧ–ಬಂಗಾಳ ಬಂಧುಗಳಿರಾ
ಓ ಅಂಗದೇಶಿ, ಕುರು–ಸಿಂಧ ವಾಸಿ, ಕಳಿಂಗಾದಿ ಬಂಧುಗಳಿರಾ
ಓ ದಾಕ್ಷಿಣಾತ್ಯ ಓ ಆಂಧ್ರ–ಚೋಳ ಆಲಿಸಿರಿ ಕರೆಯ ಸಾರಾ
ಓ ಶೂರ–ಧೀರ ಪಂಚ–ನದಿ–ನಾದದಾ ಉಸಿರುಗಳಿರಾ ॥23॥

ಜಗದೀಶನನ್ನು ತ್ರೈಮೂರ್ತಿಯಾಗಿ ಪೂಜಿಸುವ ಸರ್ವಜನಕೆ
ಅವನೇಕ ಮಾತ್ರ ಏಕೈಕವೆಂದು ನಮಿಸುವಾ ಯವನ–ಮನಕೆ
ನಿಮ್ಮೆರಲ್ಲರಮ್ಮ ನಾನೀಗ ಕರೆಯನಿತ್ತಿರುವೆ ಏಳಿ, ಬೇಗ
ಜಡನಿದ್ರೆಯನ್ನು ತೊಡೆದೊಗೆಯಿರೀಗ ಕೇಳಿರೀ ಎದೆಯ ಕೂಗ ॥24॥

ಶೃಂಗದುತ್ತುಂಗ ಭೇರಿಯಲಿ ನಿನದ ಈ ಕಾಲ–ಭೇರಿ ತೂರ್ಯ
ರುದ್ರ–ನೃತ್ಯವಿದು ರೌದ್ರ–ಮೃತ್ಯುವಿದು, ಸಂದೇಶ ದೂತ ಕಾರ್ಯ
ಭೀಕರದ ಬರವು, ಭೂಕಂಪವೀಗ ಉದ್ಘೋಷಗೊಳಿಸುತಿಂದು
ನನ್ನಾತ್ಮ ಪೂರ್ಣದಾ ಬಲದ ಜೊತೆಗೆ ಆಗಮಿಸಿ ಬಂದೆನೆಂದು ॥25॥

ತಣಿಸೆನ್ನ ತೃಷೆಯ ಆಹುತಿಗೆ ನೀಡು ನೀ ನಿನ್ನ ದೇಹ–ಭಾವ
ದೃಷ್ಟಿಸೀಗೆನ್ನ ನಾ ಆದಿಶಕ್ತಿ ಅರಿತುಕೋ ಭಜಿಸಿದೈವ
ಮಹದ್–ಮುಂಡಗಳ ರಾಜ–ರುಂಡಗಳ ಧರಿಸಲೆನೆ ಈಪ್ಸೆಯಲ್ಲಿ
ದಿಗ್ದೆಡೆಯಲೆಲ್ಲ ಗರ್ಜಿಸತಲೀಗ ಸಂಚರಿಸಿ ಕಾಳಿ ಇಲ್ಲಿ ॥26॥

ಶತ–ಲಕ್ಷ–ಕೋಟಿ–ಅರ್ಬುದದ ಸರಣಿ ಅಜಬಲಿಯನಿತ್ತರೂನು
ನಾ ತೃಪ್ತಳಲ್ಲ ಈ ರಕ್ತಧಾರೆ ಧಾರೆಯೊಲು ಸವಿದರೂನು
ಛೇದಿಸುತ ನಿನ್ನ ಹೃದಯವನೆ ಉಕ್ಕಿ ಬರುತಿರುವ ರಕ್ತ ಕೇಳಿ
ಅರ್ಪಣೆಯಲೀಗ ಸಂಪೂಜೆಗೊಳುವ ಈ ಆದಿಮಾತೆ ಕಾಳಿ. ॥27॥

(ಸಶೇಷ)

**ಟಿಪ್ಪಣಿ:**

**26. ರಾಷ್ಟ್ರವಾದ**

"ಹಿಂದೂ ರಾಷ್ಟ್ರ" ಎನ್ನುವ ಪರಿಕಲ್ಪನೆ ಶಿವಾಜಿ ಮತ್ತು ಸಮರ್ಥ ರಾಮದಾಸರ ಅವಧಿಯಲ್ಲಿ ರೂಪುಗೊಂಡಿದೆ. ಆಗ ಅದಕ್ಕೊಂದು ಅರ್ಥವೂ ಇತ್ತು. ಆಗ ಇಡೀ ರಾಷ್ಟ್ರವೂ ಮಹಮ್ಮದೀಯ ಪ್ರಭುತ್ವದಲ್ಲಿ ಸಿಲುಕಿಕೊಂಡಿದ್ದು, ಭಾರತದ ರಾಷ್ಟ್ರೀಯತೆಯ ವಿಷಯವು ಸಂಪೂರ್ಣವಾಗಿ ಕಡೆಗಣಿಸಲ್ಪಟ್ಟಿತ್ತು. ಆ ಅವಧಿಯಲ್ಲಿ ಭಾರತದ ಏಕತೆಗೆ, ಅದರ ಆಶಯಕ್ಕೆ, ಆಗಿನ ಆಡಳಿತ ವ್ಯವಸ್ಥೆಯ ದಮನಕಾರೀ ನೀತಿಯಿಂದಾಗಿ ಹಾಗೂ ಸದಾ ಅಡೆ–ತಡೆಗಳ ಮಧ್ಯದಲ್ಲಿಯೇ ತತ್ತರಿಸುತ್ತಿತ್ತು. ಈ ರೀತಿಯ ಸ್ಥಿತಿಯು ನಿರ್ಮಾಣಗೊಳ್ಳಲು ಕಾರಣವಾಗಿದ್ದು, ಆ ಸಂದರ್ಭದಲ್ಲಿಯೇ ಭಾರತದ ಅಸ್ತಿತ್ವವೂ ಸಹಿತ ಹಿಂದೂ ಮತ್ತು ಮುಸ್ಲಿಂ ಎನ್ನುವ ಎರಡು ಭೌಗೋಳಿಕ ಆಯಾಮಗಳನ್ನು ಪಡೆದುಕೊಂಡ ಸ್ಥಿತಿಯಲ್ಲಿ ಇತ್ತು. ಹಿಂದೂ ಭಾಗದಲ್ಲಿ ಮಹಾರಾಷ್ಟ್ರ ಹಾಗೂ ರಾಜಪುತಾನ್(ರಾಜಸ್ಥಾನ)ಗಳು ಆಧಾರವಾಗಿದ್ದವು. ಮಹಮ್ಮದೀಯ ದಬ್ಬಾಳಿಕೆಯು ಇಡೀ ಭಾರತೀಯ ಸಂಸ್ಕೃತಿಗೆ ಮಾರಕವಾಗಿರುವದನ್ನು ಕಂಡು, ಅದನ್ನು ತಡೆಯಲು, ಅಂತಹ ವ್ಯವಸ್ಥೆಗೆ ಕಾರಣವಾಗಿರುವದನ್ನು ತಡೆಯಲು ಹಾಗೂ ಶಿಕ್ಷಿಸುವ ಮೂಲಕ, ಹಿಂದೂ ಮುಂದಾಳ್ತನದ ಆಳ್ವಿಕೆಯ ಮೂಲಕ ಆ ದಬ್ಬಾಳಿಕೆಗಳನ್ನು ನಿಯಂತ್ರಿಸುವದಾಗಿತ್ತು. ಅದು ಆ ಕಾಲದ ಅವಶ್ಯಕತೆಯೂ ಆಗಿದ್ದುದದರಿಂದ ಅದು ಸಾಧ್ಯವೂ ಆಯಿತು.

ಆದರೆ ಇಂದಿನ ಆಧುನಿಕ ವ್ಯವಸ್ಥೆಯಲ್ಲಿ ಭಾರತವು ಏಕೈಕ ಘಟಕವಾಗಿರುವಂತೆಯೇ ಇದ್ದರೆ ಮಾತ್ರ ಉಳಿಯಬಲ್ಲುದು. ಭೌಗೋಳಿಕವಾಗಿರುವ ಭಾಗಗಳಿಂದಾಗಿ, ಭೌಗೋಳಿಕವಾಗಿಯೇ ಇರುವ ಸುಸಂಹಿತಯನ್ನು ಒಂದು ರಾಷ್ಟ್ರವು ಅವಲಂಬಿಸಿರುತ್ತದೆ. ಈ ಮೂಲಕವೇ ಒಂದು ನಿಗದಿತವಾದ ಹಾಗೂ ತನ್ನದೇ ಆದ ದೇಶದ ವ್ಯವಸ್ಥೆಯನ್ನು ಹೊಂದಿರುತ್ತದೆ. ಈ ಭೌಗೋಳಿಕವಾಗಿರುವ ಭಾಗಗಳು ನೈಜವಾಗಿವೆ; ಏಕೆಂದರೆ ಜನ ಸಮುದಾಯ, ಭಾಷೆ, ಧರ್ಮ, ಮತ, ಇತಿಹಾಸ ಎಲ್ಲದರಲ್ಲಿಯೂ ತಮ್ಮದೇ ಆದ ಅಸ್ಮಿತೆಯನ್ನು ಆಯಾ ಭಾಗಗಳು ಹೊಂದಿರುತ್ತವೆ. ಈ ರೀತಿಯ ಘಟನೆಗಳು ಹೆಚ್ಚಾಗಿ ಬ್ರಿಟನ್, ಸ್ವಿಝರ್–ಲ್ಯಾಂಡ್ ಮತ್ತು ಜರ್ಮನಿಯಲ್ಲಿ ಘಟಿಸಿವೆ. ಇದೇ ರೀತಿಯಲ್ಲಿ ಭಾರತದಲ್ಲಿಯೂ ಸಹಿತ

ಘಟಿಸಿದೆ. ಆದರೆ ಇಲ್ಲಿ (ಭಾರತದಲ್ಲಿ) ಭೌಗೋಳಿಕ ಸಂಯೋಜನೆಯೂ ಅಷ್ಟೇ ಮಹತ್ವದ್ದಾಗಿದೆ.

ಇದನ್ನೇ ಬೇರೆ ಮಾತುಗಳಲ್ಲಿ ಹೇಳಬಹುದಾದಲ್ಲಿ, ಒಂದು "ದೇಶ" ಅಥವಾ ಒಂದು "ರಾಷ್ಟ್ರ"ವು ಪರಸ್ಪರ ಸಂವಹನದ ಸಲುವಾಗಿ ಅತ್ಯಂತ ನಿಕಟವರ್ತಿಯಾಗಿರಬೇಕು. ಆವಾಗಲೇ, ಕೇಂದ್ರ ಸರಕಾರದ ವ್ಯವಸ್ಥೆಯ ಆಡಳಿತವು ಅತ್ಯಂತ ಸುಲಭದಲ್ಲಿ ನಿರ್ವಹಿಸಲ್ಪಡುತ್ತದೆ. ಇಲ್ಲದಿದ್ದಲ್ಲಿ, ಇದು ಬಹುತೇಕವಾಗಿ ತುಂಬ ಕಠಿಣತಮ ಸಂದರ್ಭಗಳನ್ನು ಎದುರಿಸುವ ಪ್ರಸಂಗಕ್ಕೆ ಸಿಲುಕುತ್ತದೆ. ಇಂತಹ ನಿಕಟತಮ ವ್ಯವಸ್ಥೆಯು ಇಲ್ಲದಿದ್ದಲ್ಲಿ ಏನಾಗುತ್ತದೆ ಎನ್ನುವದನ್ನು ಸಾಮ್ರಾಜ್ಯಗಳು ಪತನಗೊಂಡು ಚೂರು–ಚೂರಾಗಿ ಸಿಡಿದು ಹೋಗಿರುವ ಅನೇಕ ಉದಾಹರಣೆಗಳು ಸಾಕ್ಷಿ ಒದಗಿಸುತ್ತಿವೆ. ಅವರು ಅಜರಾಮರವಾಗಿರುವ ಹಾಗೂ ಎಂದಿಗೂ ಬಾಧನೆಗೆ ಒಳಪಡದ 'ರಾಷ್ಟ್ರೀಯ ಆತ್ಮ ಪ್ರಜ್ಞೆ"ಯ ಬೆಂಬಲವನ್ನು ಪಡೆದುಕೊಂಡಿರಲಿಲ್ಲ. ಆ ಏಕೈಕ ಪ್ರಜ್ಞೆಯು ಮಾತ್ರ ಸ್ಥಾಯಿತ್ವವನ್ನು ಖಾತ್ರಿಗೊಳಿಸುತ್ತದೆ. ಇದೇ ತೆರನಾಗಿ, ಬ್ರಿಟೀಷ್ ಇಂಪೀರಿಯಲ್ ಫೆಡರೇಶನ್, ಇಂತಹದೇ ತೊಂದರೆಯನ್ನು ಎದುರಿಸುವಂತಾಯಿತು. ಮೇಲ್ನೋಟಕ್ಕೆ ಕಂಡು ಬರುವ ಈ ತಾತ್ಕಾಲಿಕ ವಾಂಛೆಯ ವಿಜಯಗಳು ಯಾವಾಗಲೂ ಪತನದೆಡೆಗೇ ಶೀಘ್ರವಾಗಿಯೇ ಚಲಿಸುತ್ತಿರುತ್ತವೆ, ಆ ಮೂಲಕ ಸಾಮ್ರಾಜ್ಯವನ್ನು ಪತನಗೊಳಿಸುತ್ತವೆ. ಇದಕ್ಕೆ ಪೂರಕವಾಗಿ, ಈ ಭೌಗೋಳಿಕ ವೈವಿಧ್ಯತೆ ಹಾಗೂ ಭೌಗೋಳಿಕ ಸಂಪರ್ಕ–ಸಂವಹನ–ನಿಕಟತೆಗಳನ್ನು ಅವುಗಳ ಅನುಕೂಲಕರ ಪರಿಸ್ಥಿತಿಯನ್ನು ನಿರ್ವಹಿಸಿಕೊಂಡು ಹೋಗಲು ಒಂದು ಸಮರ್ಥಶೀಲವಾದ ಒಕ್ಕೂಟ ವ್ಯವಸ್ಥೆ ಬೇಕಾಗುತ್ತದೆ. ಇಲ್ಲವೇ ಒಂದು ಪ್ರಜ್ಞಾವಂತ ಹಾಗೂ ಕೌಶಲ್ಯಪೂರ್ಣವಾದ ಕಾರ್ಯಕ್ಷಮತೆಯಿಂದ ಯೋಜಿತಗೊಂಡ, ಸಂಯೋಜಿತವಾಗಿರುವ, ಪಟ್ಟು ಹಿಡಿದು ಕಾರ್ಯ ಸಾಧಿಸುವ ಮೂಲಕ ಲೋಕೋಪಕಾರಗೈಯುವ, ಯಾವುದೇ ಪಕ್ಷಪಾತವಿಲ್ಲದೇ ನಡೆದುಕೊಳ್ಳುವ ಮತ್ತು ರಾಷ್ಟ್ರೀಯ ಪ್ರಜ್ಞೆಯೊಂದಿಗೆ ಏಕತೆಯನ್ನು ಸಾಧಿಸುವ ಸರಕಾರದ ವ್ಯವಸ್ಥೆಯೊಂದು ಅವಶ್ಯವಾಗಿರುತ್ತದೆ. ಅಥವಾ ಜೀವಂತವಾಗಿರುವ ರಾಷ್ಟ್ರೀಯ ಸಂವೇದನೆಯನ್ನು ಪಾವನಸ್ವರೂಪದೊಂದಿಗೆ ಹಾಗೂ ಸ್ವಯಂ–ಸಾಕ್ಷಾತ್ಕಾರಗೊಳ್ಳುವ ಸೂಕ್ಷ್ಮ ಸಂವೇದನೆಯನ್ನು ಅಳವಡಿಸಬೇಕಾಗಿದೆ. ಇವೆಲ್ಲವೂ ಭಾರತೀಯ ರಾಷ್ಟ್ರೀಯತೆಗೆ ಅತ್ಯಾವಶ್ಯವಾಗಿರುವ ಸಂಗತಿಗಳಾಗಿವೆ. ಭೌಗೋಳಿಕ

ವೈವಿಧ್ಯತೆ, ಭೌಗೋಳಿಕ ಸಂಯೋಜನೆ, ಹೊಂದಾಣಿಕೆ, ಸಂಪರ್ಕ–ಸಂವಹನಗಳು ರಾಷ್ಟ್ರದ ಜಾಗ್ರತ ಆತ್ಮದ ಸಂಕೇತಗಳಾಗಿರುತ್ತವೆ. ಇವುಗಳಲ್ಲಿ ಪ್ರಪ್ರಥಮ ಸ್ಥಾನದಲ್ಲಿರುವದು "ರಾಷ್ಟ್ರೀಯತೆಯು ಯಾವಾಗಲೂ ನಮ್ಮದೇ" ಆಗಿದ್ದು, ಪ್ರಾಚೀನ ಕಾಲದಿಂದಲೂ ಭಾರತದ ಜನತೆಯನ್ನು ಒಂದು ವಿಶಿಷ್ಟತೆಯಲ್ಲಿಯೇ ಗುರುತಿಸಲ್ಪಟ್ಟಿದೆ.

ಇನ್ನು ಎರಡನೆಯ ಸಂಗತಿಯನ್ನು ನಾವು ಬ್ರಿಟೀಷ ಆಡಳಿತ ವ್ಯವಸ್ಥೆಯಿಂದ ಪಡೆದುಕೊಂಡಿದ್ದೇವೆ. ಮತ್ತೆ ಮೂರನೇಯದನ್ನು – ಅಂದರೆ ಜಾಗ್ರತ ಆತ್ಮವು–ತಾನೇ ತಾನಾಗಿ ಚಿಗುರೊಡೆದು ಅಸ್ತಿತ್ವಗೊಳ್ಳುವದಾಗಿದೆ. ಆದರೆ ಮುಖ್ಯವಾಗಿ, ಅದರಲ್ಲೂ ಈ 'ಸ್ವದೇಶವು' ರಾಷ್ಟ್ರೀಯತೆಯ ಮೂಲಭೂತವಾಗಿರುವ ಆಧಾರವಾಗಿರಬೇಕಾಗಿದೆ. ಭಾರತದಲ್ಲಿ, ಹಿಂದೂ ಮತ್ತು ಮುಸ್ಲೀಂ ಸಮುದಾಯಗಳೆರಡೂ ಪರಸ್ಪರ ಹೊಂದಿಕೊಂಡೇ, ಅಕ್ಕಪಕ್ಕದಲ್ಲಿಯೇ ಜೀವಿಸುತ್ತಿದ್ದಾರೆ. ಹೀಗಿರುವಾಗ, ಹಿಂದೂ ರಾಷ್ಟ್ರೀಯವಾದಕ್ಕೆ ಇರುವ ಭೌಗೋಳಿಕ ಅವಸ್ಥೆ–ವ್ಯವಸ್ಥೆಯಾದರೂ ಏನು? ಮಹಾರಾಷ್ಟ್ರ ಮತ್ತು ರಾಜಸ್ಥಾನಗಳೂ ಸಹಿತ ದೀರ್ಘ ಕಾಲದಲ್ಲಿ ತಮ್ಮದೇ ಆದ ಭೌಗೋಳಿಕ ವಲಯಗಳಾಗಿಯೇ ಮುಂದುವರೆಯಲಿಲ್ಲ. ಅದೇ ದೇಶದ ಒಂದು ಪ್ರಾಂತೀಯ ವಿಭಾಗದಲ್ಲಿ ಗುರುತಿಸಲ್ಪಟ್ಟವು.

ಇಲ್ಲಿ ಪ್ರಮುಖವಾಗಿ ಹಿಂದೂ ರಾಷ್ಟ್ರೀಯವಾದಕ್ಕೆ ಅವಶ್ಯವಾಗಿರುವ ಸಂಗತಿ ಎಂದರೆ ಅದಕ್ಕಿರುವ ಅನುಪಸ್ಥಿತಿ. ಮಹಮ್ಮದೀಯರು ತಮ್ಮದೇ ಆದ ಪ್ರತ್ಯೇಕತೆಯ ಭಾವನೆಗೇ ಬದ್ಧರಾಗಿದ್ದು, ಅವರು ಎಂದಿಗೂ ತಮ್ಮನ್ನು ಮೊದಲು ಭಾರತೀಯ ತದನಂತರದಲ್ಲಿ ಮಹಮ್ಮದೀಯ ಎಂದು ಹೇಳಲು ಸಿದ್ಧರಿಲ್ಲ. ಈಗ ಅಸ್ತಿತ್ವದಲ್ಲಿರುವ ಬೃಹತ್–ಮುಸ್ಲಿಂ ರಾಷ್ಟ್ರಗಳ ಜೊತೆಗೆ ತಾವು ಅತಿ ಸಮೀಪ ಸಂಬಂಧಿಗಳು ಎನ್ನುವ ಧೋರಣೆಯಲ್ಲಿಯೇ ಇದ್ದಾರೆ. ಇದು ನಮ್ಮದೇ ದೇಶದ ಮಣ್ಣು–ನಮ್ಮದೇ ರಕ್ತವನ್ನು ಹೊಂದಿದ್ದರೂ ಸಹಿತ, ನಮ್ಮೊಡನೇ ಇದ್ದರೂ ಸಹಿತ, ಅವರು ಇದನ್ನು ಒಪ್ಪಿಕೊಳ್ಳುತ್ತಿಲ್ಲ.

ಆದರೆ ಹಿಂದೂಗಳಿಗೆ ಇಂತಹ ಬೇರೆ ಯಾವುದೇ ಅವಕಾಶಗಳ ಮೂಲಗಳು ಇಲ್ಲವೇ ಇಲ್ಲ. ಒಳ್ಳೆಯದಕ್ಕೇ ಆಗಲೀ ಅಥವಾ ಕೆಟ್ಟದ್ದಕ್ಕೇ ಆಗಲೀ, ಅವರು ಈ ಮಣ್ಣಿಗೇ ಜವಾಬ್ದಾರರಾಗಿದ್ದಾರೆ. ಅವರು ಎಂದಿಗೂ ಇದನ್ನು

ತಿರಸ್ಕರಿಸುವದೂ ಇಲ್ಲ. ಅವರು ಎಂದಿಗೂ ತಮ್ಮ ಮಾತೆಯನ್ನು ತಿರಸ್ಕರಿಸುವದಿಲ್ಲ. ಅವಳನ್ನು ಎಂದಿಗೂ ಕತ್ತರಿಸುವದಿಲ್ಲ. ಹೀಗಾಗಿ ನಮ್ಮ ಚಿಂತನವು ಭಾರತೀಯ ರಾಷ್ಟ್ರವಾದವಾಗಿದೆ. ಹೆಚ್ಚಿನ ಪ್ರಮಾಣದಲ್ಲಿ ಅದು ಆತ್ಮಿಕವಾಗಿ ಹಾಗೂ ಸಂಸ್ಕೃತಿಯಿಂದಾಗಿ "ಹಿಂದೂ"ಇದೆ. ಏಕೆಂದರೆ ಈ ದೇಶವು ಹಿಂದೂಗಳಿಂದಲೇ ರಚಿಸಲ್ಪಟ್ಟಿದೆ. ಈ ಜನಾಂಗವೂ ಇದರಿಂದಲೇ ಸೃಷ್ಟಿಸಲ್ಪಟ್ಟಿದೆ. ಅದರ ಅಸ್ತಿತ್ವವೂ ಸಹಿತ ಇದೆ. ತನ್ನ ಇತಿಹಾಸದ ಗರಿಮೆ ಹಾಗೂ ಘನತೆಯಿಂದಾಗಿ, ಅವನ (ಹಿಂದೂವಿನ) ನಾಗರಿಕತೆಯು ಮತ್ತು ಸಂಸ್ಕೃತಿಯು ಹಾಗೂ ವೈವಿಧ್ಯತೆಯನ್ನು ಸದಾ ಎತ್ತಿ ಹಿಡಿಯುತ್ತಿದ್ದು, ಜೊತೆಜೊತೆಗೇ ಮುಸ್ಲಿಂ ಸಮುದಾಯವನ್ನೂ ಸಹಿತ ಒಳಗೊಳ್ಳುವಂತೆ ರೂಪಗೊಂಡು, ಸಾಂಸ್ಕೃತಿಕ ಹಾಗೂ ಪಾರಂಪರಿಕ ವ್ಯಸವಸ್ಥೆಯನ್ನು ಸ್ವೀಕರಿಸಿಕೊಂಡು, ತನ್ನಲ್ಲಿಯೇ ಅಂತರ್ಗತಗೊಳಿಸಿಕೊಂಡಿದೆ. ಬರಲಿರುವ ಭವಿಷ್ಯದ ಘಟನೆಗಳ ಕುರಿತು ಮುಸ್ಲಿಂ ಅದನ್ನು ಗುರುತಿಸಲು ಸಾಧ್ಯವಾಗದಿದ್ದರೂ, ತನ್ನನ್ನು ತಾನೇ ಮತ್ತೆ ವಿರೋಧದ ನೆಲೆಯಲ್ಲಿಯೇ ಇರುವಂತೆ ತಳ್ಳಿಕೊಳ್ಳುತ್ತಾನೆ. ಅದನ್ನೇ ಆಯ್ಕೆ ಮಾಡಿಕೊಳ್ಳುತ್ತಾನೆ ಕೂಡ.

ಹೀಗಿರುವ ಪ್ರಸಂಗದಲ್ಲಿ, ಹಿಂದುವು, ಮಹಮ್ಮದೀಯನ ಅಲ್ಪ ಸಹಾಯವು ಸಿಕ್ಕರೂ ಸಹಿತ ಪಡೆದುಕೊಳ್ಳಬಹುದು. ಈ ಮೂಲಕ 'ಸ್ವರಾಜ್ಯ'ವನ್ನು ಅವನು (ಹಿಂದುವು) ಆ ಮಹಮ್ಮದೀಯನ ಸಂಗಡವೇ ಗೆಲ್ಲಬೇಕಾಗಿದೆ. ಪಡೆದುಕೊಳ್ಳಬೇಕಾಗಿದೆ. ಅವರ ವಿರೋಧವನ್ನು ಮುಂದುವರೆಸಿಕೊಂಡು ಹೋಗುವದಕ್ಕಿಂತ ಇದು ಉತ್ತಮ ಮಾರ್ಗವಾಗಿದೆ.

ನಮ್ಮಲ್ಲಿ ಅಪಾರ ಪ್ರಮಾಣದ ಜನಶಕ್ತಿ ಇದೆ; ಸಾಮರ್ಥ್ಯವೂ ಇದೆ. ಇದರ ಮೂಲಕ ಮತ್ತೂ ಮಹತ್ತರವಾದುದನ್ನು ಹಾಗೂ ಕಠಿಣತಮವಾಗಿರುವ ಯೋಜನೆಯನ್ನು ಪೂರೈಸಿಕೊಳ್ಳಲು ಸಾಧ್ಯವಿದೆ. ಆದರೆ ಮೊದಲು ನಾವು ಏಕತೆಯಿಂದ ದೂರವುಳಿದಿದ್ದೇವೆ; ಸೋದರ ಭಾವನೆಯಿಂದಲೂ ದೂರವಿದ್ದೇವೆ. ನಮ್ಮನಮ್ಮಲ್ಲಿಯೇ ವೈಯಕ್ತಿಕವಾದ, ಅದರಲ್ಲೂ ವ್ಯಕ್ತಿಗತವಾದ ಕ್ರಿಯೆಗಳಿಗೆ ಮಾತ್ರ ಬಂಧಿತರಾಗಿದ್ದೇವೆ. ಹೀಗಾಗಿ ಐಕ್ಯತೆಗಾಗಿ ನಾವು ಇದೀಗ ಕಾರ್ಯಪ್ರವೃತ್ತರಾಗ–ಬೇಕಾಗಿದೆ. ಸಹೋದರತ್ವದ ಭಾವನೆಯನ್ನು ಅಳವಡಿಸಿಕೊಳ್ಳುವಂತೆ, ಹಾಗೂ ಇವೆಲ್ಲ ಕೆಲಸವನ್ನೂ "ಹಿಂದೂ ಸಭಾ"ವು ಸಮಗ್ರ ಪ್ರಯತ್ನಗಳ ಮೂಲಕ ಇದನ್ನು ನಿರ್ದೇಶಿಸಬೇಕಾಗಿದೆ.

## 27. ಸಾಮರ್ಥ್ಯವನ್ನು ಪಡೆದುಕೊಳ್ಳಲು ನಾವು ಶಕ್ತಿಮಾತೆಯನ್ನು ಆರಾಧಿಸಲೇಬೇಕು

ಸಾಮರ್ಥ್ಯ ಮತ್ತೂ ಹೆಚ್ಚಿನ ಸಾಮರ್ಥ್ಯ, ಅದಕ್ಕೂ ಮಿಗಿಲಾದ ಸಾಮರ್ಥ್ಯವನ್ನು ಪಡೆಯುವದೇ ನಮ್ಮ ಮನುಕುಲದ ಆಶಯವಾಗಿದೆ. ಅದು, ನಾವು ಬಯಸುವ ಸಾಮರ್ಥ್ಯವೇ ಆಗಿದ್ದಲ್ಲಿ, ಅದನ್ನು ಪಡೆಯುವ ಬಗೆ ಹೇಗೆ? ಅದರಲ್ಲೂ ಶ್ರೀಮಾತೆಯನ್ನು ಆರಾಧಿಸದೇ ಹೇಗೆ ಪಡೆಯಲು ಸಾಧ್ಯ? ತನ್ನನ್ನು ಸದಾ ಆರಾಧಿಸುತ್ತಲೇ ಇರಬೇಕು ಎಂದು ಶ್ರೀಮಾತೆಯು ಎಂದಿಗೂ ಬಯಸುವದಿಲ್ಲ. ನಮಗೇ ಸಹಾಯ ಮಾಡುವದರ ಸಲುವಾಗಿ, ಹಾಗೂ ಶ್ರೀಮಾತೆಯು ತಾನೇ ತಾನಾಗಿ ನಮ್ಮನ್ನು ಆಶೀರ್ವದಿಸುವಂತೆ ಮಾಡಲು ಮಾತ್ರ ಈ ಆರಾಧನೆಯನ್ನು ಮಾಡಬೇಕಾಗಿದೆ. ಇದಾವುದೂ ಕೇವಲ ಕಾಲ್ಪನಿಕ ವಿಚಾರವಲ್ಲ. ಯಾವುದೇ ಅಂಧವಿಶ್ವಾಸವೂ ಅಲ್ಲ. ಏಕೆಂದರೆ ಇದು ವಿಶ್ವದ ನಿಯತಿ ಶಾಸನವಾಗಿದೆ. ಯಾವುದೇ ದೇವತೆಗಳಾದರೂ ಸಹಿತ, ಅವರು ಆ ರೀತಿಯಲ್ಲಿ ಮಾಡಲು ಶಕ್ತರಿದ್ದಾಗಲೂ ಸಹಿತ, ಯಾವುದೇ ಕೋರಿಕೆಯಿಲ್ಲದಿದ್ದರೂ ತಮ್ಮನ್ನು ತಾವು ಈ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಾರೆ. (ಸಹಾಯ ಮಾಡುತ್ತಾರೆ.) ಆ ಶಾಶ್ವತತೆಯೂ ಸಹಿತ, ಮಾನವನು ಜಾಗ್ರತನಾಗದೇ ಹೋದಲ್ಲಿ ಮನುಕುಲಕ್ಕೆ ಲಭ್ಯವಾಗುವದಿಲ್ಲ. ಪ್ರತಿಯೊಬ್ಬ ಭಕ್ತನೂ ಕಂಡುಕೊಂಡಿರುವದೇನೆಂದರೆ, "ಅವನಿಗೆ ಶರಣಾಗುವದು", "ಅವನನ್ನು ಹಂಬಲಿಸುವದು", ಮತ್ತು "ಅವನನ್ನು ಆರಾಧಿಸುವ"ದೇ ಆಗಿದೆ. ಇದೆಲ್ಲವೂ ಆ ದಿವ್ಯ–ಶಕ್ತಿಯು ತನ್ನ ಅವರ್ಣನೀಯ ಸೌಂದರ್ಯದೊಂದಿಗೆ ಮತ್ತು ಪರಮಾನಂದದೊಂದಿಗೆ ಆತ್ಮದ ಮೇಲೆ ಧಾರೆಗೊಳ್ಳುವದನ್ನು ಕಾಣಬೇಕು. ಯಾವುದು ಶಾಶ್ವತ ಸತ್ಯವಾಗಿದೆಯೋ, ಅದೂ ಸಹಿತ ಅವಳದೇ ಸತ್ಯವಾಗಿದ್ದು, ಆ ಮೂಲಕವೇ ಪ್ರಗತಿ ಸಾಧ್ಯವಾಗುತ್ತದೆ.

---

[ಆಧಾರ; ಶ್ರೀ ಅರವಿಂದರ ಸಮಗ್ರ ಸಂಪುಟ; 8/ 304–06 ಶ್ರೀ ಅರವಿಂದರ ದೃಷ್ಟಿಯಲ್ಲಿ ರಾಷ್ಟ್ರ ಮತ್ತು ರಾಷ್ಟ್ರವಾದ]

## ಶತಮಾನ ಕಂಡ **"ಶಂ.ಬಾ. ಜೋಶಿ"**ಯವರ ಪ್ರಥಮ ಕೃತಿ

## **"ಮಹರ್ಷಿ ಶ್ರೀ ಅರವಿಂದ ಘೋಷರ ಸಂಕ್ಷಿಪ್ತ ಚರಿತವು"**

3

### **ವಂಶವೃತ್ತಾಂತ**

ಮನುಷ್ಯನ ಚಾರಿತ್ರ್ಯದ ಮೇಲೆ ಆನುವಂಶಿಕ ಸಂಸ್ಕಾರಗಳೂ ಸ್ವಲ್ಪ ಹೆಚ್ಚು–ಕಡಿಮೆ ಪರಿಣಾಮಗಳನ್ನು ಮಾಡದೇ ಬಿಟ್ಟಿರುವದಿಲ್ಲ. ಆದುದರಿಂದ ಯಾವನೊಬ್ಬ ಮನುಷ್ಯನ ಚಾರಿತ್ರ್ಯದ ವಿಚಾರ ಮಾಡುವಾಗ ಅವನ ಕುಲ–ಗೋತ್ರಗಳನ್ನು ಲಕ್ಷ್ಯದಲ್ಲಿ ತಕ್ಕೊಳ್ಳುವದು (ಪರಿಗಣಿಸುವದು) ಅವಶ್ಯವಿರುತ್ತದೆ. ಪೂರ್ವಜರಲ್ಲಿ ಪರಂಪರೆಯಿಂದ ಕಂಡುಬಂದ ಗುಣಗಳೇ ಅವರ ಮುಂದಿನ ವಂಶಜರಲ್ಲೂ ಅಂಶತಃ ಕಾಣಲಿಕ್ಕೆ ಸಿಗುತ್ತವೆ. ಅಥವಾ ಅಜ್ಜ–ಮುತ್ತಜ್ಜರಲ್ಲಿ ಅಂಕುರ ರೂಪದಲ್ಲಿದ್ದ ಗುಣಗಳೇ ಅವರ ಮುಂದಿನ ಸಂತತಿಯಲ್ಲಿ ಪೂರ್ಣತಃ ವಿಕಾಸವಾಗಿರುವದನ್ನು ಕಾಣಬಹುದು. ಮಾರ್ಮಿಕ ನಾಟಕಕಾರನು ತನ್ನ ನಾಟಕದ ಸೂಚನೆಯನ್ನು ಆರಂಭದಲ್ಲಿ ಸ್ವಲ್ಪದರಲ್ಲಿಯೇ – ಪ್ರಸ್ತಾವನೆಯಲ್ಲಿ ವ್ಯಂಗ್ಯವಾಗಿ ಸೂಚಿಸುತ್ತಿರುತ್ತಾನೆ. ಜಗತ್ತಿನ ನಾಟಕ ಬರೆಯಲು ಉದ್ಯುಕ್ತನಾದ ಬ್ರಹ್ಮನು, ಮಗನ ನಾಟಕದ ಪೂರ್ವ ಸೂಚನೆಯನ್ನು ಅವನ ಪೂರ್ವಜರಲ್ಲಿ ಅಂಶತಃ ಮಾಡಿಡುತ್ತಿದ್ದರೆ ಆಶ್ಚರ್ಯವೇನು? ಚರಿತ್ರನಾಯಕರಾಗಿರುವ ಶ್ರೀ ಅರವಿಂದರ ಚರಿತ್ರದ ಸಣ್ಣ ಪ್ರತಿಕೃತಿಯನ್ನು ನೋಡಬೇಕಿದ್ದರೆ, ಇವರ ಅಜ್ಜಂದಿರಾದ (ತಾಯಿಯ ತಂದೆ) ಬಾಬು ರಾಜನಾರಾಯಣ ಬೋಸ ಇವರ ಆಯುಷ್ಯದ (ಜೀವನದ ಅವಧಿಯ) ಕಡೆಗೆ ನೋಡಬೇಕು. ಶ್ರೀ ಅರವಿಂದರ ಚರಿತ್ರದಲ್ಲಿ ವಿಲಕ್ಷಣವಾಗಿ ತೋರಿ ಬರುವ ಸಂಗತಿಗಳ ಪೂರ್ವ ಸೂಚನೆಗಳು ಹಾಗೂ ಅದರ ಉಗಮವು ಈ ರಾಜನಾರಾಯಣ ಬಾಬುಗಳ ಚರಿತ್ರದಲ್ಲಿ ಇದೆ.

ಶ್ರೀ ರಾಜನಾರಾಯಣ ಬಾಬುಗಳ ಜನ್ಮವು 1826ನೆಯ ಇಸ್ವಿಯಲ್ಲಿ ಆಯಿತು. ಇವರ ಶಿಕ್ಷಣವು ಆರಂಭದ ಅವಧಿಯಲ್ಲಿ ಹಳೇ (ಭಾರತೀಯ ಪರಂಪರಾಗತ) ಪದ್ಧತಿಯಲ್ಲಿಯೇ ಆಯಿತು. ಮನೆಯಲ್ಲಿ ರಾಮಾಯಣ, ಮಹಾಭಾರತಾದಿ ಸಂಸ್ಕೃತ ಗ್ರಂಥಗಳು ಮುಖೋದ್ಗತವಾಗಿ ಮಾಡಿಸಲ್ಪಟ್ಟಿದ್ದವು. (ಕಂಠಪಾಠ ಮಾಡಿಸಲ್ಪಟ್ಟಿದ್ದವು). ಸ್ವಲ್ಪ ದೊಡ್ಡವರಾದ ಬಳಿಕ ಇವರನ್ನು ಒಂದು

ಆಂಗ್ಲೋ ವರ್ನ್ಯಾಕ್ಯುಲರ ಸ್ಕೂಲಿಗೆ ಸೇರಿಸುತ್ತಾರೆ. ಅಲ್ಲಿ ಅವರ ಮುಂದಿನ ಆಯುಷ್ಯದಲ್ಲಿ ಕಂಡುಬಂದ ಕೆಲವು ಗುಣಗಳಿಗೆ ಚಾಲನೆ ಸಿಕ್ಕಿತು. ಇಲ್ಲಿಯ ಶಿಕ್ಷಣವು ಮುಗಿದ ನಂತರದಲ್ಲಿ, ಕಾಲೇಜು ಸೇರಿದರು. ಕಾಲೇಜಿನಲ್ಲಿ ರಾಜನಾರಾಯಣ ಬಾಬು ತಮ್ಮ ಕುಶಾಗ್ರಮತಿಯಿಂದ ಎಲ್ಲರಿಗೂ ಪ್ರಿಯರಾಗಿದ್ದರು. ತಮ್ಮ ಚುರುಕು ಬುದ್ಧಿಯಿಂದ ಎಷ್ಟೋ ಸ್ಕಾಲರ್‌ಶಿಪ್ಪುಗಳನ್ನು ಸಂಪಾದಿಸಿದರು. ಇವರು ಪರೀಕ್ಷೆಯಲ್ಲಿ ಬರೆದ ಉತ್ತರಗಳು ಬಹು ಸರಸಮಯವಾದ ಭಾಷೆಯಿಂದ ಕೂಡಿರುತ್ತಿದ್ದರಿಂದ, ಅವುಗಳನ್ನು ಪರೀಕ್ಷಿಸಿದ ಪರೀಕ್ಷಕರು, ಮಾದರಿಗಾಗಿ ಆ ಉತ್ತರಗಳನ್ನು ವೃತ್ತಪತ್ರಗಳಲ್ಲಿ (ದಿನಪತ್ರಿಕೆಗಳಲ್ಲಿ) ಪ್ರಕಟಿಸಿದ್ದರು. ಇವರ ಸಹಪಾಠಿಗಳು ಸಹಿತ ಇವರಂತೆಯೇ ಬುದ್ಧಿವಂತರಾಗಿದ್ದರು; ಮುಂದಿನ ಆಯುಷ್ಯದಲ್ಲಿ (ಜೀವನದಲ್ಲಿ) ಹೆಸರಾದ ದೊಡ್ಡ–ದೊಡ್ಡ (ಪ್ರಸಿದ್ಧರಾದ) ಜನರು ಇವರ ಸಂಗಡಿಗರಾಗಿದ್ದರು.

ರಾಜನಾರಾಯಣರ ಕಾಲವೆಂದರೆ ಬ್ರಿಟಿಶರ ಆಳ್ವಿಕೆಯ ಪ್ರಾರಂಭದ ಅವಧಿ. ಈ ಹಿಂದೆ ಹೇಳಿದಂತೆ ಜನರಲ್ಲಿ ಬ್ರಿಟಿಶ ಸರಕಾರದ ವಿಷಯಕ್ಕೆ ಅತ್ಯಂತ ಆದರವಿತ್ತು. (ಇದಕ್ಕೆ ಕಾರಣ) ಮುಸಲ್ಮಾನರ ಗೈರಮುತ್ಸದ್ದಿತನದ (ಪ್ರಜಾಹಿತಕಾರಿಯಲ್ಲದ) ಆಳ್ವಿಕೆಗೆ ಬೇಸತ್ತಿದ್ದರು. ಗೈರಮುತ್ಸದ್ದಿ ಮುಸಲ್ಮಾನರಿಗೆ, ಜನರಿಗೆ ತಿಳಿಯದಲೇ ಜನರ ರಕ್ತಶೋಷವನ್ನು (ಶೋಷಣೆಯನ್ನು) ಹೇಗೆ ಮಾಡಬೇಕೆಂಬ ಕಲೆಯ ಜ್ಞಾನವಿದ್ದಿಲ್ಲ. ಅವರ ಪ್ರತಿಯೊಂದು ರಾಜಕಾರಣದ ಕೃತ್ಯಕ್ಕೂ ಬಣ್ಣದ ಮಾತಿನ ಮುಲಾಮು (ಮರಳುಗೊಳಿಸುವ ಮಾತಿನ ಮೋಡಿ) ಇರುತ್ತಿದ್ದಿಲ್ಲ. ಅವರಿಗೆ (ಆಡಳಿತಕ್ಕೆ) ದುಡ್ಡು ಬೇಕಾದ ಕೂಡಲೇ ಬಹಿರಂಗವಾಗಿಯೇ, ಜನರ ಕಣ್ಣಿಗೆ ಕಾಣುವಂತೆಯೇ ಸುಲಿಯುತ್ತಿದ್ದರು. ಇದರಿಂದ ಜನರು ಬ್ರಿಟಿಶರನ್ನು ಆದರಿಸಿದರು. ಬ್ರಿಟಿಶರ ಬಣ್ಣದ ಮಾತುಗಳಿಗೆ ಜನರು ಮರುಳಾದರು. ಮನಸ್ಸು ಗುಲಾಮವಾಯಿತು. ಇಂಗ್ಲೀಷ ಮನುಷ್ಯನು ನಮ್ಮ ಜನರಿಗೆ ದೇವರಂತೆ ಕಾಣಹತ್ತಿದನು (ಕಂಡು ಬರತೊಡಗಿದನು), ಅವನ ಎಲ್ಲ ಕೃತಿಗಳೂ ಸುಂದರವಾಗಿ ತೋರತೊಡಗಿದವು. ಹೀಗಾಗಿ ಅವುಗಳನ್ನು ಅನುಕರಿಸುವದರಲ್ಲಿ ಕರತಕೃತ್ಯತೆಯನ್ನು ಪಡೆಯಹತ್ತಿದರು.

ಇಂತಹ ಕಾಲದಲ್ಲಿ ರಾಜನಾರಾಯಣ ಬಾಬುಗಳ ಜನ್ಮವಾದದ್ದು. ಅಂದ ಬಳಿಕ ಪರಿಸ್ಥಿತಿಯ ಪರಿಣಾಮವು ಅವರ ಮೇಲಾದರೂ ಆಗದೇ ಇರಲು

ಸಾಧ್ಯವೇ? ಆರ್ಯ ಸಂಸ್ಕೃತಿಯು ತ್ಯಾಗ ಪ್ರಧಾನವಾದದ್ದು. ಆದರೆ ಪಾಶ್ಚಿಮಾತ್ಯ ಸಂಸ್ಕೃತಿಯು ಭೋಗಪ್ರಧಾನವಾದದ್ದು. ಸಾಮಾನ್ಯವಾಗಿ ಮನುಷ್ಯನ ಒಲವು ಭೋಗದ ಕಡೆಗೇ ಇರುತ್ತದೆ.ಆತ್ಯಂತಿಕ ಕಲ್ಯಾಣಕರವಾದುದು ಯಾವುದು ಎನ್ನುವದನ್ನು ತಿಳಿಯುವಷ್ಟು ದೂರದೃಷ್ಟಿಯು ಸಾಮಾನ್ಯ ಜನರಿಗೆಲ್ಲಿಂದ ಬರಬೇಕು? ಇಂಗ್ಲೀಷರ ಸಂಸರ್ಗದಿಂದ, ಇಂಗ್ಲೀಶ ವಸ್ತುಗಳ ಬಳಕೆಯಿಂದ ಜನರಲ್ಲಿ ಪಾಶ್ಚಿಮಾತ್ಯರ ಆಚಾರ–ವಿಚಾರಗಳು ಸೇರತೊಡಗಿದವು. ಕಾಲೇಜಿನಲ್ಲಿ ಕಲಿಯುತ್ತಿರುವಾಗ ರಾಜನಾರಾಯಣರಿಗೆ ತತ್ಕಾಲೀನ ಇತರರಂತೆ ಮದ್ಯ–ಮಾಂಸಾದಿಗಳ ಸೇವನೆ ಮಾಡುವದೇ ಭೂಷಣವೆನಿಸತೊಡಗಿತು. ಮದ್ಯಪಾನದ ಅತಿರೇಕದಿಂದ ಒಮ್ಮೆ ರಾಜನಾರಾಯಣರು ಬೇನೆ ಬಿದ್ದರು. ಆಗ ಅವರ ತಂದೆಯು ಮಗನ ಶುಶ್ರೂಷೆಯನ್ನು ಚೆನ್ನಾಗಿ ಮಾಡಿ, ಬಹುಪರಿಯಿಂದ ಉಪದೇಶಿಸಿದರು. ಆದರೆ ತತ್ಕಾಲಕ್ಕೆ ಅದರ ಉಪಯೋಗವೇನೂ ಆಗಲಿಲ್ಲ. ಧರ್ಮದ ಮೇಲಿನ ವಿಶ್ವಾಸವು ಜನರೊಳಗಿಂದ ಹಾರಿಹೋಗಿತ್ತು. ಧರ್ಮಾಧಿಕಾರಿಗಳ ಧಾರ್ಮಿಕ ನಿಯಂತ್ರಣದ ಅಧಿಕಾರವೂ ಅಳಿಯಿತು. ಸುತ್ತೂ ಕಡೆಯಿಂದ ಆರ್ಯ ಧರ್ಮದ ಮೇಲೆ ಟೀಕೆಗಳು ಪ್ರಾರಂಭವಾದವು. ಆಚಾರ ಧರ್ಮದಲ್ಲಿ ಪರಿಸ್ಥಿತಿಯಂತೆ ಸ್ವಲ್ಪ ಬದಲಾವಣೆ ಅವಶ್ಯವಿರುತ್ತದೆ. ಆದರೆ ಹೊಸ ಸಂಸ್ಕರಣಗಳನ್ನು ಹೊಂದದೇ ಇದ್ದ ಧಾರ್ಮಿಕ ವಿಕೃತ ಆಚಾರಗಳು ಆಂಗ್ಲ ವಿದ್ಯಾವಿಭೂಷಿತರ ಚೇಷ್ಟೆಯ ವಿಷಯಗಳಾದವು. ಮಡಿ, ಮಡಿ ಮಾಡುವವರು ನಗೆಪಾಟಲಿಗೆ ಈಡಾದರು. ಚಂಡಿಕೆಯು ಚೇಷ್ಟೆ ಮಾಡಿಸಿಕೊಂಡಿತು. ಪ್ರತಿಯೊಬ್ಬರೂ ಧರ್ಮದ ಉಪಹಾಸ (ಅವಹೇಳನ) ಮಾಡತೊಡಗಿದರು.

ಈ ಕಾಲಕ್ಕೆ ಧಾರ್ಮಿಕ ಆಚಾರ–ವಿಚಾರಗಳಿಗೆ ನೂತನ ಸ್ವರೂಪವನ್ನು ಕೊಡುವದಕ್ಕೆ ಕೆಲವರು ಪ್ರಯತ್ನಿಸಿದರು. **ಆರ್ಯ ಸಮಾಜ[1], ಬ್ರಹ್ಮೋ ಸಮಾಜ[2] ಮತ್ತು ಪ್ರಾರ್ಥನಾ ಸಮಾಜ**[3] ಗಳು ಈ ಮಾತಿಗೆ ಸಾಕ್ಷಿಯಾಗಿವೆ. ಬಂಗಾಳದಲ್ಲಿ **ರಾಜಾರಾಮ ಮೋಹನರಾಯನು[4] ಎನ್ನುವವರು "ಬ್ರಹ್ಮೋ ಸಮಾಜ"**ವನ್ನು ಸ್ಥಾಪಿಸಿ, ತಮ್ಮ ಪಂಥದ ಪ್ರಚಾರ ಮಾಡಿದರು. ಪಾಶ್ಚಿಮಾತ್ಯ ಶಿಕ್ಷಣ ಹೊಂದಿದ ಸುಶಿಕ್ಷಿತರು ಈ ಪಂಥದಲ್ಲಿ ಬಹಳವಾಗಿಯೇ ಸೇರಿದರು. ಮತಾಂತರ ಮಾಡಿ ಕ್ರಿಶ್ಚಿಯನ್ನ ಆಗುವದಕ್ಕಿಂತ ಬ್ರಹ್ಮೋಪಂಥವನ್ನು ಸ್ವೀಕರಿಸುವದೇ ಲೇಸೆಂದು ಬಗೆದು (ತಿಳಿದು) ಇದರಲ್ಲಿ ಸೇರಿದರು. ರಾಜನಾರಾಯಣ ಬಾಬುಗಳ

ತಂದೆಯೂ ಮೊದಲು ಈ ಪಂಥಕ್ಕೇ ಸೇರಿದವರಾಗಿದ್ದರು. ಆದರೆ ಇಲ್ಲಿ ಆತನಿಗೆ ಸಮಾಧಾನವಾಗಲಿಲ್ಲ. ಅಂತ್ಯಕಾಲಕ್ಕೆ ಗಂಗಾತಟಾಕಕ್ಕೆ ಹೋಗಿ ಅಲ್ಲಿ ಸನ್ಯಾಸ ದೀಕ್ಷೆಯನ್ನು ಪಡೆದುಕೊಂಡು ಮೃತ್ಯುವನ್ನು ಆದರಿಸಿದನು.

ರಾಜನಾರಾಯಣ ಬಾಬುಗಳಿಗೆ ಪಾಶ್ಚಿಮಾತ್ಯ ಆಚಾರ–ವಿಚಾರಗಳನ್ನು ಅನುಕರಿಸಿ ಸುಖವೆನಿಸಲಿಲ್ಲ. ಮದ್ಯಪಾನಾದಿ ವ್ಯಸಗಳಿಂದಾಗಿ ಶರೀರದ ಮೇಲೆ ಅನಿಷ್ಟ ಪರಿಣಾಮವಾಯಿತು. ಕರ್ಮ–ಧರ್ಮ ಸಂಯೋಗದಿಂದ ಇದೇ ಅವಧಿಯ ಸುಮಾರಿಗೆ (ಅಂದರೆ) 1885–86 ರ ಸಮಯಕ್ಕೆ ಅವರ ತಂದೆಯು ತೀರಿಹೋದರು. ಪ್ರೀತಿಯ ಸಹಚಾರಿಣಿ(ಪತ್ನಿ)ಯ ವಿಯೋಗವೂ ಆಯಿತು. ಇದರಿಂದ ಮನಸ್ಸಿನ ಮೇಲೆ ಬಹು ದೊಡ್ಡ ಆಘಾತವಾಯಿತು.

ಬಾಹ್ಯ ಸುಖೋಪಭೋಗಗಳಿಂದ ತೃಪ್ತಿ ಹೊಂದಿ, ಶಾಂತಿ ಪಡೆಯಬೇಕೆಂದು ಮಾಡಿದ ಶ್ರೀ ರಾಜನಾರಾಯಣ ಬಾಬುಗಳಿಗೆ ಮನಸ್ಸು ಚಂಚಲವಾಯಿತು. ಆಗ ಅವರು ಈ ಆತ್ಮಿಕ ಶಾಂತಿಯು ಹೇಗೆ ದೊರೆತೀತು ಎಂದು ವಿಚಾರಕ್ಕೆ ತೊಡಗಿದರು. ಬ್ರಹ್ಮೋ ಸಮಾಜದ ಪೂಜ್ಯ ದೇವೇಂದ್ರನಾಥ ಟಾಗೋರರ ಪರಿಚಯವಾಗಿ ರಾಜನಾರಾಯಣರು ಅವರ ಪಂಥದಲ್ಲಿ ಸೇರಿದರು. ಈ ಸಮಯಕ್ಕೆ "ಕಾಕತಾಲ ನ್ಯಾಯ"ದಂತೆ ರಾಜನಾರಾಯಣರಿಗೆ ಉಪನಿಷತ್ತುಗಳ ಪರಿಶೀಲನ ಮಾಡುವ ಸುಯೋಗವು ಬಂತು. ಬಂಗಾಲದ **ತತ್ವ ಬೋಧಿನಿ ಸಭೆ**[5] ಯವರು ಶ್ರೀ ರಾಜನಾರಾಯಣ ಬಾಬುಗಳ ಸಂಸ್ಕೃತ ಮತ್ತು ಇಂಗ್ಲೀಷ ಭಾಷಾಪ್ರಭುತ್ವವನ್ನು ಕಂಡು, ತಿಂಗಲೊಂದಕ್ಕೆ 60 ರೂಪಾಯಿಗಳ ಮೇಲೆ ಉಪನಿಷದ್ ಗ್ರಂಥಗಳ ಭಾಷಾಂತರ ಮಾಡಲು ನಿಯಮಿಸಿದರು. ಇದರಿಂದಾಗಿ ಸಹಜವಾಗಿಯೇ ವೇದಾಂತ ಗ್ರಂಥಗಳ ಮನನವಾಗತೊಡಗಿತು. ಇತ್ತ ಬ್ರಹ್ಮೋ ಸಮಾಜದ ಸಂಘಟನೆಯಿಂದ ಅದರ ಸ್ವರೂಪ ಜ್ಞಾನವೂ ಇವರಿಗೆ ದೊರೆಯಿತು. ಬ್ರಹ್ಮೋಪಂಥಿಗಳು ಧಡ(ಪೂರ್ತಿ) ಕ್ರಿಶ್ಚಿಯನ್ನರೂ ಅಲ್ಲ; ಧಡ ವೈದಿಕ ಧರ್ಮಿಗಳೂ ಅಲ್ಲ. ಅದರ ಅನುಯಾಯಿಗಳಲ್ಲಿಯೇ ಆಚಾರ–ವಿಚಾರಗಳಲ್ಲಿ ತಾಳಮೇಳವಿದ್ದಿಲ್ಲ. ಬ್ರಹ್ಮೋಪಂಥದ ಅನುಯಾಯಿಗಳು ಹೀಗಿದ್ದರೆಂದ ಮಾತ್ರಕ್ಕೆ ಆ ಪಂಥದ ಸಂಸ್ಥಾಪಕರೂ ಸಹಿತ ಅದೇ ರೀತಿ ಶೀಲಭ್ರಷ್ಟರಿದ್ದರೆಂದು ಯಾರಾದರೂ ಕಲ್ಪಿಸಿದರೆ ಅದು ತಪ್ಪು. ರಾಜಾರಾಮ ಮೋಹನರಾಯ, ದೇವೇಂದ್ರನಾಥ ಠಾಕೂರರಂತಹ ವ್ಯಕ್ತಿಗಳಿಗೆ ಕಲಂಕ ಹಚ್ಚುವದೆಂದರೆ ಅದು

ಪಾಪವಾದೀತು. ಯಾಕೆಂದರೆ ಯಾವುದೇ ಧರ್ಮದ ಅಥವಾ ಮತದ, ಪಂಥದ ಸಂಸ್ಥಾಪಕರು ಶೀಲವಂತರೇ ಆಗಿರುತ್ತಾರೆ. ಇರಲಿ.

ರಾಜನಾರಾಯಣರಿಗೆ ಬ್ರಹ್ಮೋಪಂಥದವರ ನಡವಳಿಕೆಗಳು ಸೇರದ ಕಾರಣ ಸ್ವಲ್ಪ ಕಾಲದಲ್ಲಿಯೇ ಅವರು ಈ ಪಂಥವನ್ನು ಬಿಟ್ಟು, ವೈದಿಕ ಅನುಯಾಯಿಗಳಾದರು. ಶಾಂತಿಯನ್ನು ದೊರಕಿಸಲಿಕ್ಕೆ ಹಲುಬುವ (ಹಂಬಲಿಸುವ) ರಾಜನಾರಾಯಣರಿಗೆ ಧರ್ಮಾಂತರ, ಮತಾಂತರಗಳನ್ನು ಮಾಡಿ, ಕೊನೆಗೆ ವೇದಾಂತಧರ್ಮದಲ್ಲಿ ಅದು (ಶಾಂತಿಯು) ಸಿಕ್ಕಿತು. ಆ ಬಳಿಕ ಉಪನಿಷತ್ತುಗಳ ನಿಧಿಧ್ಯಾಸ ಮಾಡತೊಡಗಿದರು.

ಇಂಗ್ಲೀಷರ ಸಂಶರ್ಗದಿಂದ ನಮ್ಮ ದೇಶದಲ್ಲಿ ಪರಸ್ಪರ ವಿರೋಧಿಗಳಾದ ಎರಡು ವಿಚಾರ–ಪ್ರವಾಹಗಳು ಹುಟ್ಟಿದವು. **"ಹಳೆಯದೆಲ್ಲಾ ಹೊಲಸು"** ಎಂಬ ಮತದ ಜೋರು ವಿಶೇಷವಿತ್ತು. ಅದರ ಸೆಳವಿಗೆ ಸಿಕ್ಕು ಅನೇಕ ತರುಣರು ಗಾಸಿವೀಸಿ (ಅಲ್ಲೋಲಕಲ್ಲೋಲ) ಆದರು. ಆದರೆ ಶ್ರೀ ರಾಜನಾರಾಯಣ ಬಾಬುಗಳು ಮಾತ್ರ ಈ ಪ್ರವಾಹದಲ್ಲಿ ಸಿಕ್ಕು, ಈಜಾಡಿ, ಒದ್ದಾಡಿ, ಗುಟಕರಿಸಿ (ನೀರು ಕುಡಿದು), ಬಾಯ್ಬಿಟ್ಟು (ಸೋತು ಸೋತು) ಕಡೆಗೆ ದಂಡೆಗೆ ಬರುವ ಭಾಗ್ಯವನ್ನು ದೊರಕಿಸಿಕೊಂಡರು. ಇಂತಹ ಭಾಗ್ಯವು ಬಹು ಸ್ವಲ್ಪ ಜನರಿಗೆ ಮಾತ್ರ ಸಿಗುತ್ತದೆ. ಏಕೆಂದರೆ ಒಮ್ಮೆ ಪಾಶ್ಚಿಮಾತ್ಯ ಸೆಳವಿಗೆ ಸಿಕ್ಕನಂತರ ಸ್ಮೃತಿಯು ಮತ್ತೆ ಮೇಲೆ ಬರುವದು ಬಲು ದುಸ್ತರವಾಗಿದೆ. ರಾಜನಾರಾಯಣ ಬಾಬುಗಳು ವೇದಾಂತ ಜ್ಞಾನದಿಂದ ತೃಪ್ತಿ ಹೊಂದಿದ ಬಳಿಕ ಅದರ ಪ್ರಸಾರಕ್ಕೆ ಟೊಂಕ ಕಟ್ಟಿದರು (ಸಿದ್ಧರಾದರು) ಇವರಿಗೆ ಇಂಗ್ಲೀಷ, ಸಂಸ್ಕೃತ ಮತ್ತು ಪರ್ಶಿಯನ್ನ ಭಾಷೆಗಳು ಚೆನ್ನಾಗಿ ಬರುತ್ತಿದ್ದುದರಿಂದ, ಈ ಹಿಂದೆ ವೈದಿಕ ಧರ್ಮದ ನಿಂದನೆಗೆ ಒಳ್ಳೇ ಅನುಕೂಲವೇ ಆಗಿತ್ತು. ಪಾಪ, ಬುದ್ಧಿ ಏನು ಮಾಡೀತು? ಅದೊಂದು ಶಸ್ತ್ರದಂತಿದೆ. ಕಳ್ಳನ ಮೇಲೆ ಹಾಕಿದರೆ ಅವನ್ನು ತುಂಡರಿಸುತ್ತದೆ; ಸಜ್ಜನನ ಮೇಲೆ ಹಾಕಿದರೆ ಆತನನ್ನೂ ಭೇದಿಸುತ್ತದೆ. ರಾಜನಾರಾಯಣರ ಯಾವ ಬುದ್ಧಿಯು ಈ ಮುಂಚೆ ವೈದಿಕ ಧರ್ಮವನ್ನು ನಗೆಗೀಡು ಮಾಡುವಲ್ಲಿ ವ್ಯರ್ಥವಾಗಿ ವ್ಯಯವಾಗುತ್ತಿತ್ತೋ, ಅದು ಈಗ ವೈದಿಕ ಧರ್ಮವನ್ನು ಮಂಡನೆ ಮಾಡುವಲ್ಲಿ ಸಾರ್ಥಕತೆಯನ್ನು ಪಡೆದುಕೊಳ್ಳತೊಡಗಿತು. ರಾಜನಾರಾಯಣರು ತಮ್ಮ ಸ್ವಾನುಭವಪೂರ್ಣ ಹಾಗೂ ವಿದ್ವತ್ಪೂರ್ಣತೆಯಿಂದ ತುಂಬಿ ತುಳುಕುವ

ಅಧಿಕಾರಯುಕ್ತ ರಸಾಲವಾಣಿ'ಯಿಂದ (ಮಧುರಾತಿ ಮಧುರ) ಜನರಿಗೆ ವೇದಾಂತ ಧರ್ಮದ ಉಪದೇಶ ಮಾಡತೊಡಗಿದರು. ಮತತಮತಾಂತರಗಳ ಗೊಂದಲದಲ್ಲಿ ಸಿಲುಕಿ ತೊಳಲಾಡುತ್ತಿರುವವರಿಗೆ, ಧರ್ಮಾಂತರ ಮಾಡಿ ಆತ್ಮನಾಶ ಮಾಡಿಕೊಳ್ಳುತ್ತಿರುವವರಿಗೆ ಸತ್ಯಜ್ಞಾನವನ್ನು ಉಪದೇಶಿಸಿ ಅವರ ಆತ್ಯಂತಿಕ ಕಲ್ಯಾಣ ಮಾಡತೊಡಗಿದರು. ಇವರು ಬಂಗಾಲಿ ಭಾಷೆಯಲ್ಲಿ ಬರೆದ ಗ್ರಂಥಗಳನ್ನು ಜನರು ಈಗಲೂ ಭಕ್ತಿಯಿಂದ ಪಠಿಸುತ್ತಾರೆ. ಜನರಲ್ಲಿ ಸ್ವದೇಶಾಭಿಮಾನ ಉಂಟಾಗಬೇಕು, ಮದ್ಯಪಾನಾದಿ ವ್ಯಸನಗಳು ಅವರಲ್ಲಿ ಸೇರಬಾರದು, ಶಾರೀರಿಕ ಅವನತಿಯು ಅವರಲ್ಲಿ ಮನೆ ಮಾಡಬಾರದೆಂದು ಹಲವು ವಿಧದಲ್ಲಿ ಪ್ರಯತ್ನ ಮಾಡಿದರು. ಇವರಿಗೆ **"ಬಂಗಾಲಿ ರಾಷ್ಟ್ರಧರ್ಮದ ಆದಿಪುರುಷ"** ಎನ್ನುತ್ತಾರೆ. ಇಂತಹ **ವಿಲಕ್ಷಣ ಚಾರಿತ್ರ್ಯದ ಪುರುಷನ ಮಗಳು ಶ್ರೀ ಅರವಿಂದ ಘೋಷರ ತಾಯಿಯು**. ಇವಳು ತನ್ನ ತಂದೆಯ ಜ್ಞಾನದಿಂದ ದೊರಕಿರುವದನ್ನೇ ಮಗನಿಗೆ ಒಪ್ಪಿಸಿಬಿಟ್ಟಳು (ಕಲಿಸಿದಳು).

ಇದು ಶ್ರೀ ಅರವಿಂದರ ತಾಯಿಯ ಕಡೆಯ ಐತಿಹ್ಯವಾಯಿತು. ಇನ್ನು ತಂದೆಯಾದ ಕಷ್ಣಧನ ಬಾಬುಗಳ ವಿಷಯದಲ್ಲಿ ಸ್ವಲ್ಪ ಮಾಹಿತಿಯನ್ನು ಹೇಳುವದೂ ಯುಕ್ತವಾಗಿದೆ. ಇವರ ಸ್ವಭಾವ ಪರಿಚಯವನ್ನು ಸ್ವಲ್ಪದರಲ್ಲಿ ಮಾಡಿಕೊಡಬೇಕಾದರೆ ಹೀಗೆ ಹೇಳಬಹುದು; ಶ್ರೀ ರಾಜನಾರಾಯಣ ಭೋಸರು ಆರ್ಯ ಸಂಸ್ಕೃತಿಯ ಬಗೆಗೆ ಎಷ್ಟು ಅಭಿಮಾನಿಗಳಾಗಿದ್ದರೋ ಅಷ್ಟೇ ಕೃಷ್ಣಧನ ಘೋಷರು ಪಾಶ್ಚಿಮಾತ್ಯ ಸಂಶ್ಕೃತಿಯ ಅಭಿಮಾನಿಗಳಾಗಿದ್ದರು. ಶ್ರೀ ಕೃಷ್ಣಧನರು ಆಂಗ್ಲ ವೈದ್ಯಕೀಯದಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ವಿಲಾಯತಿಗೆ (ಪರದೇಶಕ್ಕೆ– ಇಂಗ್ಲಂಡಗೆ) ಹೋದಾಗ, ಕೃಷ್ಣಧನ ಘೋಷರ ಮಾವಂದಿರು ಅವರಿಗೆ ಹಿಂದೂ ಧರ್ಮವನ್ನೂ, ಹಿಂದೂ ಆಚಾರ–ವಿಚಾರಗಳನ್ನೂ ತ್ಯಜಿಸಬಾರದೆಂದು ಪರಿಪರಿಯಿಂದ ಬರೆಯುತ್ತಿದ್ದರು. ಆದರೆ ಫಲಿತಾಂಶವೇನೂ ಹೊರಡಲಿಲ್ಲ. ಮಾವಂದಿರ ಆಗ್ರಹಕ್ಕೆ ವಿಪರೀತವಾಗಿ ಆಂಗ್ಲ ಆಚಾರ–ವಿಚಾರಗಳ ವಿಷಯಕ್ಕೆ ಆಗ್ರಹವು ಮಾತ್ರ ಕೃಷ್ಣಧನರಲ್ಲಿ ಹೆಚ್ಚಾಯಿತು. ಹಿಂದೂಸ್ತಾನದ ಸುಧಾರಣೆಗೆ ಪಾಶ್ಚಿಮಾತ್ಯ ಆಚಾರ ವಿಚಾರಗಳನ್ನು ಅನುಕರಿಸುವದೊಂದೇ ಮಾರ್ಗವೆಂದು ಅವರು ತಿಳಿದಿದ್ದರು. ಶ್ರೀ ಕೃಷ್ಣಧನರು ಉದಾರರೂ, ಕೋಮಲಾಂತಃಕರಣಿಗಳೂ

ಆಗಿದ್ದರು. ಬಡಬಗ್ಗರಿಗೆ ಪುಕ್ಕಟೆಯಾಗಿ ಔಷಧಗಳನ್ನು ಕೊಡುತ್ತಿದ್ದರು. ಆಪ್ತ ಇಷ್ಟರಿಗೆ ಉದಾರ ಹಸ್ತದಿಂದ ಆರ್ಥಿಕ ಸಹಾಯವನ್ನೂ ಮಾಡುತ್ತಿದ್ದರು.

ವಾಚಕರು ಇಲ್ಲಿ ಲಕ್ಷಿಸಬೇಕಾದ ಮಹತ್ವದ ಮಾತಿದೆ. ಪೌರ್ವಾತ್ಯ ಹಾಗೂ ಪಾಸ್ಚಿಮಾತ್ಯ ಸಂಸ್ಕೃತಿಗಳ ರಣಸಂಗ್ರಾಮದಲ್ಲಿ ಯಾವುದು ವಿಜಯಿ–ಯಾಗುತ್ತದೆನ್ನುವದನ್ನು ತಿಳಿಯುವ ಲವಲವಿಕೆಯು(ತಹತಹಿಕೆ/ಕುತೂಹಲ)ವು ಬಹು ಮಂದಿಗಿರಬಹುದು. ಅದನ್ನು ತಿಳಿದುಕೊಳ್ಳಲಿಕ್ಕೆ ತಲೆಯನ್ನು ಬಹಳವಾಗಿ ತುರಿಸಬೇಕಾಗಿಲ್ಲ (ಕೆಡಿಸಿಕೊಳ್ಳಬೇಕಾಗಿಲ್ಲ). ನಮ್ಮ ಚರಿತ್ರನಾಯಕರ ಕಡೆಗೆ ದೃಷ್ಟಿಕ್ಷೇಪ ಮಾಡಿದರೆ ಆ ಮಾತು ತಾನೇ ತಾನಾಗಿ ಒಡೆದು ತೋರುವದು (ಸ್ಪಷ್ಟವಾಗುವದು). ಭೋಸ್ ಮತ್ತು ಘೋಷ ಮನೆತನಗಳ ಸಂಯೋಗವೆಂದರೆ ಪೂರ್ವ ಹಾಗೂ ಪಶ್ಚಿಮಗಳ ಸಂಯೋಗವೆಂದೇ ಹೇಳಬಹುದು. ಇವೆರಡೂ ಸಂಸ್ಕೃತಿಗಳ ಸಂಯೋಗದಿಂದಾದ ಶ್ರೀ ಅರವಿಂದರ ಜನ್ಮವು (ಅವರ ಚರಿತ್ರೆಯು) ಆರ್ಯ ಸಂಸ್ಕೃತಿಯ ವಿಜಯವನ್ನೇ ಸೂಚಿಸುತ್ತದೆಂದು ಧಾರಾಳವಾಗಿ ಹೇಳಬಹುದು.

ಪರಸ್ಪರ ವಿರೋಧಿಗಳಾದ ಒಲವಿನ ಆದರೆ ಪ್ರೇಮಪಾಶಬದ್ಧರಾದ ದಂಪತಿಗಳು ಸುಖದಿಂದ ಸಂಸಾರವನ್ನು ನಡೆಸಿರಲು, ಯಥಾಕಾಲದಲ್ಲಿ ನಾಲ್ಕು ಗಂಡುಮಕ್ಕಳು ಒಂದು ಹೆಣ್ಣುಮಗು – ಹೀಗೆ ಐದು ಜನ ಮಕ್ಕಳಾಗುತ್ತಾರೆ. ಇವರಲ್ಲಿ ಹಿರಿಯನಾದ ವಿನಯಕುಮಾರ ಘೋಷ್ ಎನ್ನುವವನು ಕೂಚಬಿಹಾರ ಸಂಸ್ಥಾನದ ದಿವಾನನಾಗಿದ್ದಾನೆ; ಎರಡನೇಯವನು ಮನಮೋಹನ ಘೋಷ ಎನ್ನುವವನ್ನು ಕಲಕತ್ತೆಯ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಇಂಗ್ಲೀಷ ವಾಙ್ಮಯದ ಪ್ರೊಫೇಸರ್ ಆಗಿದ್ದಾನೆ, ಹಾಗೂ ಉತ್ತಮ ಕವಿಯೆಂದೂ ಹೆಸರಾಗಿದ್ದಾನೆ. **ಮೂರನೆಯವರೇ ನಮ್ಮ ಚರಿತ್ರನಾಯಕರಾಗಿರುವ ಶ್ರೀ ಬಾಬು ಅರವಿಂದ ಘೋಷರು**. ಇವರ ಜನ್ಮವು ಕ್ರಿಸ್ತ ಶತಾಬ್ದ 1872ನೇ ವರುಷದ ಆಗಸ್ಟ 15ನೇ ತಾರೀಖಿಗೆ ಆಯಿತು. ನಾಲ್ಕನೇ ಶಿಶುವು ಹೆಣ್ಣು ಮಗುವು, ಇವಳ ಹೆಸರು ಸರೋಜಿನಿ ಎಂದಿದೆ. ಇವಳೂ ಸುಶಿಕ್ಷಿತಳಿದ್ದಾಳೆ; ಇನ್ನು ತಮ್ಮನಾದ ಬರೀಂದ್ರ ಕುಮಾರನ ಹತ್ತಿರ ಕಲಕತ್ತೆಯಲ್ಲಿ ಇರುತ್ತಾಳೆ. ಬರೀಂದ್ರನು ಎಲ್ಲರಿಗಿಂತಲೂ ಚಿಕ್ಕವನು. ಇವನಿಗೆ 1908ರಲ್ಲಿ **ಮಾಣಿಕತಾಲಾ ಬಾಂಬ್ ಪ್ರಕರಣದ**ಲ್ಲಿ ಕರಿನೀರಿನ

(ಅಂದಮಾನ ಜೇಲಿನ) ಶಿಕ್ಷೆಯಾಯಿತು. ಮೊನ್ನಿನ ಅಂದರೆ 1919ರ ಬಾದಶಾಹೀ ಜಾಹಿರನಾಮೆಯಂತೆ ಬಿಟ್ಟು ಬಂದಿದ್ದಾನೆ (ಬಿಡುಗಡೆ ಹೊಂದಿದ್ದಾನೆ). ಇವನು **"ನಾರಾಯಣ"** ಎನ್ನುವ ಬಂಗಾಲೀ ಮಾಸಪತ್ರಿಕೆಯ ಉಪಸಂಪಾದಕನಾಗಿದ್ದು, ಒಂದೆರಡು ಪುಸ್ತಕಗಳನ್ನೂ ಬರೆದಿದ್ದಾನೆ. ಅಲ್ಲದೇ ಆಗಾಗ ಲೇಖನಗಳನ್ನೂ ಬರೆಯುತ್ತಾ ಇರುತ್ತಾನೆ. ಹೀಗೆ ಶ್ರೀ ಅರವಿಂದರ ಅಣ್ಣತಮ್ಮಂದಿರೆಲ್ಲರೂ ಒಂದಿಲ್ಲೊಂದು ರೀತಿಯಿಂದ ವಿಖ್ಯಾತರೇ ಆಗಿರುತ್ತಾರೆ. **ಸಿಂಹದ ಹೊಟ್ಟೆಯಲ್ಲಿ ಹುಟ್ಟುವದು ಸಿಂಹವೇ ಅಲ್ಲವೇ?**

**ಅಧ್ಯಯನ;**

**ಶೈಶವೇಭ್ಯಸ್ತವಿದ್ಯಾನಾಮ್ ಯೌವನೇ ವಿಷಯೈಷಿಣಾಮ್**
**ವಾರ್ಧಕೇ ಮುನಿವೃತ್ತೀನಾಮ್ ಯೋಗೇನಾಂತೆ ತನುತ್ಯಜಾಮ್ ॥**

– ಕಾಳಿದಾಸ

ಹುಡುಗರೆಂದರೆ (ಮಕ್ಕಳೆಂದರೆ) ಕೈಒಳಗೆ ಸಿಕ್ಕ ಅರಲಿನ (ಮಣ್ಣಿನ) ಮದ್ದೆಯೆಂದೂ, ಅದಕ್ಕೆ ತಮ್ಮ ಇಷ್ಟ ಬಂದ ಆಕಾರ ಕೊಡಲು ಬಹುದೆಂದು ಸಾಧಾರಣವಾಗಿ ತಂದೆ–ತಾಯಿ ತಿಳಿದಿರುವದುಂಟು. ಹುಡುಗನಿಗೆ ಆತ್ಮವಿಲ್ಲ, ಒಲವುಗಳಿಲ್ಲ, ವಿಶಿಷ್ಟ ಪ್ರವೃತ್ತಿಗಳು ಇಲ್ಲವೆಂದು ಗ್ರಹಿಸಿ ಅನೇಕ ತಾಯಿ–ತಂದೆ ತಮ್ಮ ಮಕ್ಕಳಿಗೆ ತಮ್ಮ ಇಚ್ಛೆಯಂತೆ ರೂಪಗೊಡಲಿಕ್ಕೆ ಪ್ರಯತ್ನಿಸುತ್ತಾರೆ. ಇದರಿಂದಾಗಿ ಎಷ್ಟೋ ದುಷ್ಪರಿಣಾಮಗಳಾಗಿವೆ. ಮನೆತನಗಳು ಹಾಳಾಗಿವೆ. ದೇಶಗಳು ಹೀನಸ್ಥಿತಿಗೆ ಬಂದಿವೆ. ವಕೀಲನಾಗಿರುವ ತಂದೆಯು, ಅವನ ಮಗನ ಒಲವು ಚಿತ್ರಕಲೆಯ ಕಡೆಗೆ ಇದ್ದರೂ, ಅದನ್ನು ತಪ್ಪಿಸಿ ಅವನಿಗೆ ಆ ಕಾಯದೆ ಬುಕ್ಕುಗಳ ಕಸವನ್ನು ತಲೆಯಲ್ಲಿ ತುಂಬಿಕೊಳ್ಳಲಿಕ್ಕೆ ಬಲಾತ್ಕಾರ ಮಾಡುವನು. ಸರಕಾರೀ ಸೇವೆಯಲ್ಲಿಯೇ ಮುಪ್ಪಾದ ವೃದ್ಧ ಪಿತನು ತನ್ನಂತೆಯೇ, ತನ್ನ ಚಿರಂಜೀವನೂ ಸಹಿತ ಸಾಹೇಬರ ಪಕ್ಕಾ ಮರ್ಜಿಯೊಳಗಿನವನಾಗಲೆಂದು ಹಾರೈಸಿ, ಮಗನ ಪ್ರವೃತ್ತಿಯ ಕಾವ್ಯ ಶಾಸ್ತ್ರಾದಿಗಳ ಕಡೆಗಿದ್ದರೂ ಅವನನ್ನು ನೌಕರಿಯಲ್ಲಿ ತುರಕಲು (ಒತ್ತಾಯದಿಂದ ಸೇರಿಸಲು) ಹೆಣಗುತ್ತಾನೆ! ಹೀಗೆ ತಮ್ಮದೇ ಮಕ್ಕಳ ಪ್ರವೃತ್ತಿಗಳು ಭಿನ್ನವಾದಲ್ಲಿ ಅವೆರಡರ ನಡುವೆ ತಿಕ್ಕಾಟಕ್ಕೆ ಆರಂಭವಾಗುವದು. ಇವುಗಳಲ್ಲಿ ಬಲವಾದ ಪಕ್ಷಕ್ಕೆ ಜಯವು ಕಟ್ಟಿಟ್ಟದ್ದು. ತಂದೆ–

ತಾಯಿಯ ಬಲುಮೆಗೆ (ಒತ್ತಾಯಕ್ಕೆ) ಕೈಕೊಂಡ ಅಭ್ಯಾಸವು ಕ್ರಮದಲ್ಲಿ ಅವರ ಅಧಿಕಾರ ಇರುವವರೆಗೆ ಹೇಗೋ ಸ್ವಲ್ಪ ಮನಸ್ಸು ಹತ್ತುವದು (ತಿಳಿಯುವದು), ಆದರೆ ಅನೇಕರು ಆಗಾಗ್ಗೆ ನಪಾಸಾಗುವದಕ್ಕೂ, ಕೈಕೊಂಡ ಅಭ್ಯಾಸಕ್ರಮದ ವಿಷಯಕ್ಕೆ ಬೇಸರಿಯುವದಕ್ಕೂ (ತಿಳಿದುಕೊಳ್ಳಲು ಸಾಧ್ಯವಾಗದಿರುವದು) ಹಾಗೂ ಅದರಲ್ಲಿ ಊರ್ಜಿತರಾಗದೆ ಉಳಿಯುವದಕ್ಕೂ ಇದೇ ಕಾರಣವಾಗಿರುತ್ತದೆ. ಪರರ ಒತ್ತಾಯದಿಂದ ಕೈಕೊಂಡ ಉದ್ಯೋಗದಲ್ಲಿ, ಆ ಒತ್ತಾಯವು ಕಡಿಮೆಯಾದೊಡನೆಯೇ ಶೈಥಿಲ್ಯ ಉಂಟಾಗುತ್ತದೆ. ಮತ್ತು ಅಂತಃಕರಣದಲ್ಲಿ ದಬ್ಬಿಕೊಂಡಿದ್ದ (ಅದುಮಿ ಹಿಡಿದಿದ್ದ) ಪ್ರವೃತ್ತಿಯು ತಲೆ ಎತ್ತುವದು. ಹಾಗೂ ಅದು ತಾನು ವಿಜಯಿಯಾಗಲಿಕ್ಕೆ ಹವಣಿಸುವದು (ಪ್ರಯತ್ನಿಸುವದು).

ಶ್ರೀ ಕೃಷ್ಣಧನ ಘೋಷರಿಗೆ ಇಂಗ್ಲೀಷ ಪದ್ಧತಿಯ ಮೇಲೆ ಬಲು ಪ್ರೀತಿ. ಅವರಿಗೆ ತಮ್ಮ ಮಗನೂ ಸಹಿತ ಚೊಕ್ಕ ಇಂಗ್ಲೀಷ (ಸಂಪೂರ್ಣ ಇಂಗ್ಲೀಷ) ಮನುಷ್ಯನಾಗಬೇಕೆಂಬುದೇ ಇಚ್ಛೆಯಿರುವದು ಸಹಜವಿದೆ. ಮಗನ ಒಲವು, ಪ್ರವೃತ್ತಿ, ಸ್ವಭಾವ, ಧರ್ಮಗಳೇನು ಬೇಕಾದವುಗಳು ಇರಲೊಲ್ಲವೇಕೆ ಅವುಗಳ ಗೊಡವೆ ತಮಗೇನು? ಎಂದು ಅವುಗಳನ್ನು ದುರ್ಲಕ್ಷಿಸಿ ತಮ್ಮ ಇಚ್ಛೆಯಂತೆಯೇ ಮಗನ ಶಿಕ್ಷಣವನ್ನು ಆರಂಭಿಸುತ್ತಾರೆ. ಮಾತೃಭಾಷೆಯ ಅಭ್ಯಾಸವನ್ನು ಮುಂಚೆ ಮಾಡಿ ಬಳಿಕ ತದ್ವಾರವಾಗ (ಅದರ ಮೂಲಕವಾಗಿ) ಇಂಗ್ಲೀಷ ಕಲಿಯುವ ದ್ರಾವಿಡೀ ಪ್ರಾಣಾಯಾಮವೇತಕ್ಕೆ ಎಂದು ಮೊದಲಿಗೇ ಇಂಗ್ಲೀಷ ಕಲಿಸ ಹತ್ತಿದರು. 5ನೇ ವರುಷ ಅಭ್ಯಾಸಕ್ಕೆ ಆರಂಭವಾದಾಗ, ದಾರ್ಜಿಲಿಂಗದ ಸೆಂಟವಾಲ ಸ್ಕೂಲಿನಲ್ಲಿ ಅವರ ಹೆಸರನ್ನು ಹಚ್ಚಲಾಯಿತು (ಶಾಲೆಗೆ ಸೇರಿಸಲಾಯಿತು) ಅಲ್ಲಿ ಅರವಿಂದನು ತನ್ನ ವಿಲಕ್ಷಣವಾದ ಸ್ಮರಣ ಶಕ್ತಿಯಿಂದ ಎಲ್ಲರನ್ನು ದಂಗುಬಡಿಸಿದನು (ಬೆರಗುಗೊಳಿಸಿದನು). ಉಪಾಧ್ಯಾಯರು ಇವನ ಮೇಲೆ ಬಲು ಪ್ರೇಮ ಮಾಡುತ್ತಿದ್ದರು. ಮುದ್ದು ಅರವಿಂದನ ಮುಖಾರವಿಂದವು ಸಂಗಡಿಗರಿಗೆಲ್ಲ ಬಲು ಪ್ರಿಯಕರವಾಗಿತ್ತು. ಹಿಂದುಸ್ಥಾನದಲ್ಲಿಯೇ ಹೆಚ್ಚು ದಿನ ಶಿಕ್ಷಣದ ಸಲುವಾಗಿ ಇಟ್ಟರೆ ಮಗನು ಇಂಗ್ಲೀಷ ಮನುಷ್ಯನಾಗಲಿಕ್ಕಿಲ್ಲ ಎನ್ನುವ ಸಂಶಯದಿಂದಲೋ ಏನೋ ಎಂಬುವಂತೆ ಏಳು ವರುಷದ ಕಂದಮ್ಮನನ್ನು ಕೃಷ್ಣಧನರು ಇಂಗ್ಲಂಡಕ್ಕೆ ಒಬ್ಬ ಮಿತ್ರನೆಡೆಗೆ ಕಳಿಸಿದರು.

ಇಂಗ್ಲಂಡದಲ್ಲಿ ಒಬ್ಬ ಕ್ರಿಸ್ತೀ ಭಟ್ಟನ (ಕ್ರೈಸ್ತ ಮಿಶಿನರಿ) ಬಳಿಯಲ್ಲಿ ಅರವಿಂದನೂ ಹಾಗೂ ಅವನ ತಮ್ಮನೂ ಕೂಡಿ ಇರಹತ್ತಿದರು. ಈ ಮಿಶನರಿಯು ಈ ಕೋಮಲ ಮನಸ್ಸಿನ ಮುದ್ದು ಮಕ್ಕಳ ಅಂತಃಕರಣದಲ್ಲಿ ಕ್ರಿಸ್ತೀ ಧರ್ಮದ ವಿಷಯಕ್ಕೆ ಪ್ರವೃತ್ತಿಯನ್ನುಂಟು ಮಾಡಬೇಕೆಂದು ಅವರಿಗೆ ನಾನಾ ವಿಧದಿಂದ ಉಪದೇಶಿಸಿದನು. ಈ ಉಪದೇಶದಿಂದ ಅರವಿಂದರಲ್ಲಿ ಕ್ರಿಸ್ತೀ ಧರ್ಮಕ್ಕೆ ಸೇರಬೇಕೆಂಬ ಆಕಾಂಕ್ಷೆಯು ಉತ್ಪನ್ನವಾಗದಿದ್ದರೂ, ಬಾಹ್ಯ ಆಡಂಬರದ ವಿಷಯಕ್ಕೆ ಮನಸ್ಸು ಹೇಸಿತು (ರೇಜಿಗೆ ಒಳಗಾಯಿತು). ಭೋಗವೃತ್ತಿಯ ಕಡೆಗೆ ತಾತ್ಸಾರ ಮಾಡಲಿಕ್ಕೆ ಈ ಉಪದೇಶವು ಅವರಿಗೆ ಸಹಾಯ ಮಡಿತು. ಇಂಗ್ಲಂಡನಂತಹ ವಿಲಾಸೀ ದೇಶದಲ್ಲಿ ಅರವಿಂದರ ಒಲವು ತ್ಯಾಗದ ಕಡೆಗೆ ಇರಲಿಕ್ಕೆ ಈ ಮಿಶನರಿಯೇ ಕಾರಣನೆಂದು ಹೇಳಬಹುದು. ಈತನ ವಿಷಯಕ್ಕೆ ಅರವಿಂದರಲ್ಲಿ ಪೂಜ್ಯಬುದ್ಧಿ (ಭಾವ) ಇರುತ್ತದೆ. ಮ್ಯಾಂಚಸ್ಟರದಲ್ಲಿ ಕೊಂಚಕಾಲ ಖಾಸಗೀ ಅಭ್ಯಾಸವನ್ನೂ ಮಾಡಿದರು. ಬಳಿಕ ಲಂಡನ್ನಿನ ಸೇಂಟ್– ಪಾಲ್ ಸ್ಕೂಲಿಗೆ ಹೆಸರು ಹಚ್ಚಿದರು. ಈ ಶಾಲೆಯ ಮುಖ್ಯಾಧ್ಯಾಪಕರು ಒಮ್ಮೆ ತಮ್ಮ ವಿದ್ಯಾರ್ಥಿಯಾದ ಅರವಿಂದನ ವಿಷಯಕ್ಕೆ ಹೇಳಿರುವದೇನೆಂದರೆ, “ನಾನು ಈಗ ಕೆಲಸಮಾಡಹತ್ತಿ 25–30 ವರ್ಷಗಳಾದವು. ಈ ಅವಧಿಯೊಳಗೆ ಈತನಷ್ಟು ವಿಲಕ್ಷಣ ಬುದ್ಧಿ ಚಾತುರ್ಯವುಳ್ಳ ವಿದ್ಯಾರ್ಥಿಯನ್ನು ಕಾಣಲಿಲ್ಲ”. ಈ ಶಾಲೆಯ ಅಭ್ಯಾಸವು ಮುಗಿದ ನಂತರ ಶ್ರೀ ಅರವಿಂದರು ಕೇಂಬ್ರಿಜ್ ಕಾಲೇಜಿನಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಸೇರಿದರು. [ಸಶೇಷ]

---

**ಟಿಪ್ಪಣಿ:** ಒಂದು ನೂರು ವರ್ಷದ ಹಿಂದಿನ ಭಾಷಾ ವ್ಯವಸ್ಥೆಯಲ್ಲಿ ಇದ್ದ ಶಬ್ದಗಳಿಗೆ ಆಧುನಿಕ ಪರಿಭಾಷೆಯ ಅರ್ಥವನ್ನು ಆಯಾ ಶಬ್ದದ ಮುಂದೆಯೇ ಆವರಣದಲ್ಲಿ ಕೊಡಲಾಗಿದೆ.

1. **ಆರ್ಯ ಸಮಾಜ;** ಇದು ಏಕದೇವತಾವಾದದ ಹಿನ್ನೆಲೆಯಲ್ಲಿ ಜನಿಸಿದ ಪಂಥ. ವೇದವನ್ನು ಆಧರಿಸಿಕೊಂಡೇ ತತ್ತ್ವಗಳನ್ನು ಹೊಂದಿದೆ. ಮಹರ್ಷಿ ದಯಾನಂದ ಸರಸ್ವತೀ ಇದರ ಸ್ಥಾಪಕರು. ದಿನಾಂಕ 10 ಏಪ್ರಿಲ್ 1875ರಂದು ಪ್ರಾರಂಭಗೊಂಡಿತು. ಇದರ ಸಂಕೇತ ಕಮಲ.

2. **ಬ್ರಹ್ಮೋ ಸಮಾಜ;** ಇದು ಏಕದೇವತಾವಾದದ ಹಿನ್ನೆಲೆಯಲ್ಲಿ ಜನಿಸಿದ ಪಂಥ. 1828ರಲ್ಲಿ ಕಲಕತ್ತೆಯ ಬೆಂಗಾಲಿಗಳಿಂದ 1831ರಲ್ಲಿ ಪ್ರಾರಂಭಗೊಂಡಿತು. ರಾಜಾರಾಮ ಮೋಹನರಾಯ ಇದರ ಮುಖ್ಯ ವ್ಯಕ್ತಿ.
3. **ಪ್ರಾರ್ಥನಾ ಸಮಾಜ;** ಇದು ಮುಂಬಯಿಯಲ್ಲಿ ಶ್ರೀ ದಾಡೋಬಾ ಪಾಂಡುರಂಗ ಮತ್ತು ಅವರ ಸಹೋದರ ಆತ್ಮಾರಾಮ ಪಾಂಡುರಂಗ ಎನ್ನುವವರಿಂದ ಸ್ಥಾಪಿಸಲ್ಪಟ್ಟಿತು.
4. **ತತ್ವ ಬೋಧಿನಿ ಸಭೆ;** ಇದು 6 ಅಕ್ಟೋಬರ 1839ರಂದು ದೇವೇಂದ್ರನಾಥ ಠಾಕೂರರಿಂದ ಪ್ರಾರಂಭಿಸಲ್ಪಟ್ಟಿತು.
5. **ರಸಾಲವಾಣಿ;** ಕಬ್ಬಿನ ರಸ / ಮಾವಿನ ಹಣ್ಣಿನ ರಸ / ರಸಭರಿತವಾದ / ಮಧುರಾತಿಮಧುರ.

***

## ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 21ನೇ ಫೆಬ್ರವರಿ 2021ರ ಭಾನುವಾರ ಶ್ರೀ ಅರವಿಂದ ಸಂಕೀರ್ಣ ಟ್ರಸ್ಟ್ ವತಿಯಿಂದ ಶ್ರೀಮಾತೆಯವರ ಜನ್ಮದಿನವನ್ನು ಆಚರಿಸಲಾಯಿತು. ಬೆಳಿಗ್ಗೆ 10.00 ರಿಂದ 10.30ರವರೆಗೆ ಸಾಮೂಹಿಕ ಧ್ಯಾನ ನಡೆಯಿತು. ಅನಂತರ ಸಂದೇಶ ಪತ್ರವನ್ನು ವಿತರಿಸಲಾಯಿತು. ತತ್ಸಂಬಂಧ 21ನೇ ಫೆಬ್ರವರಿಯಿಂದ 20ನೇ ಏಪ್ರಿಲ್ 2021ರವರೆಗೂ "On Surrender" ಎಂಬ ವಿಷಯದ ಬಗ್ಗೆ ಬರಹಗಳು ಮತ್ತು ಫೋಟೋ ಚಿತ್ರವನ್ನು ಆಯೋಜಿಸಲಾಗಿದೆ.

# ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್

## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ಹೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926 (Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |
| 34 | ಭವಾನಿ ಭಾರತಿ |

## STATEMENT ABOUT OWNERSHIP AND OTHER PARTICULARS ABOUT NEWSPAPER AKHIL BHARAT PATRIKA

### FORM IV

| | | |
|---|---|---|
| 1. Place of Publication | : | Bangalore |
| 2. Periodicity of its Publication | : | Monthly |
| 3. Printer's Name | : | Dr. Ajit Sabnis |
| Nationality | : | Indian |
| Address | : | No. 39 & 38 (P) 30th Main, 9th Cross, Sri Aurobindo Marg, J P Nagar I Phase, Bangalore - 560 078. |
| 4. Publisher's Name | : | Dr. Ajit Sabnis |
| Nationality | : | Indian |
| Address | : | No. 39 & 38 (P) 30th Main, 9th Cross, Sri Aurobindo Marg, J P Nagar I Phase, Bangalore - 560 078. |
| 5. Editor's Name | : | Sri Puttu Parashuram Kulkarni |
| Nationality | : | Indian |
| Address | : | No. 39 & 38 (P) 30th Main, 9th Cross, Sri Aurobindo Marg, J P Nagar I Phase, Bangalore - 560 078. |

6. Names and addresses of individuals who own the newspaper and partners or shareholders holding More than one per cent of the total capital.

| | | |
|---|---|---|
| Name | : | Sri Aurobindo Society |
| Nationality | : | |
| Address | : | No. 11, Saint Martin Street, Puducherry - 605 001. |

I, Dr. Ajit Sabnis, hereby declare that the particulars given above are true to the best of my knowledge and belief.

Sd/-

Date : 28-02-2021 Dr. Ajit Sabnis



ಅವಕಾಶದಲ್ಲಿ ನಿಷ್ಕಳದ ಪುಷ್ಪ ವಿಕಸನಕೆ ರೂಹುಗೊಳಲು
ಆ ಬ್ರಹ್ಮಭಾವದಾ ಮಹತ್–ಚಿದ್ಬೀಜ ಸ್ಪಂದಿಸಲು ವಿಶ್ವದೊಡಲು
ಮನದ ಮನ ಲಯದಿ ತನ್ಮಯದ ಕಳೆಯು ಬೆಳಗುತಿದೆ ಅಗ್ನಿ–ಪುಷ್ಪ
ಚಿತ್–ಶಕ್ತಿ ಗರ್ಭದೊಳಗಿಂದ ಉದಿಸಿ ಚಿನ್ಮಯದ ಆತ್ಮದೀಪ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 4 ಪುಟ 73)**

**RNI No. 22511/1971**
No. of Pages **64 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಮಾಂಸ–ಮಜ್ಜೆಗಳ ತೋಷ–ಜೀವನದಿ ಅಭಿಷೇಕಗೊಂಡ ಇದುವು
ಇದು ಆತ್ಮಬೀಜವಿದು ಪರಮದೇವನಾ ತೇಜಾಗ್ನಿ ಕಾಂತಿಕಣವು
ತಾನಿಲ್ಲಿಗೀಗ ಅವತರಣಗೊಂಡು ಉಸಿರಿಡಲು ಸತತವಾಗಿ
ಭವಬದುಕ ಸ್ಪಂದದನುಸ್ಪಂದದಲ್ಲಿ ಅನುಭಾವ ತುಂಬಲಾಗಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ ‘ಸಾವಿತ್ರಿ’; ದಳ 2 ರೇಣು 5 ಪುಟ 169)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.